ಭಾನುವಾರ, ಮಾರ್ಚ್ 16, 2025 |₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬಣ್ಣದ ಸಂಭ್ರಮ
ಕಲಬುರಗಿಯ ಹನುಮಾನ ನಗರ ತಾಂಡಾದ ನಿವಾಸಿಗಳು ಸಾಂಪ್ರದಾಯಿಕ ಉಡುಪಿನಲ್ಲಿ ಶನಿವಾರ ಹೋಳಿ ಹಬ್ಬ ಆಚರಿಸಿದರು.

Inners for Winners

RAMRAJ©

VESTS

BRIEFS • TRUNKS

ಪ್ರತಿ ಚಲನೆಯಲ್ಲಿ ತಂಪಾದ, ಆರಾಮ ಮತ್ತು ಆತ್ಮವಿಶ್ವಾಸವನ್ನು ಅನುಭವಿಸಿ

ರಾಮರಾಜ್ ಒಳ ಉಡುಪುಗಳು ಸಾಟಿಯಿಲ್ಲದ ಸೌಕರ್ಯದೊಂದಿಗೆ ಹೊಸದಾಗಿ ಪ್ರಾರಂಭಿಸಿ. ಉಸಿರಾಡುವಿಕೆ ಮತ್ತು ಉತ್ತಮ ಸರಿಹೊಂದುವ ವಿನ್ಯಾಸಗೊಳಿಸಲಾದ ನಮ್ಮ ಒಳ ಉಡುಪುಗಳು ಯಾವುದೇ ಸಂದರ್ಭದಲ್ಲಿ ನಿಮ್ಮನ್ನು ತಂಪಾಗಿ ಮತ್ತು ಆತ್ಮವಿಶ್ವಾಸದಿಂದ ಇರಿಸುತ್ತವೆ.

Shreyas Iyer - Cricketer

STORE LOCATION

SUKRA® SUPER FINE COTTON VESTS | ROMEX® SUPERIOR BANIANS | RISE-UP® PREMIUM BANIANS | ACOSTE® LUXURY INNERWEARS | Breeze® Eye Let Vests | WinStripe® STRIPED BANIANS | ARCHERY® GYM VEST | COMPACT® PREMIUM COTTON RIB VESTS | LITTLE STARS® KIDS INNERWEARS

RAMRAJ COTTON SHOWROOMS

BENGALURU : KG ROAD • SHIVAJI NAGAR • ULSOOR • GANDHI BAZAR • MALLESHWARAM • JAYANAGAR : 30TH CROSS ROAD • SS PLAZA, 10TH B MAIN ROAD • KORAMANGALA RAJAJI NAGAR • R.T. NAGAR • VIJAYANAGAR • BANASHANKARI • YESHWANTHPUR • YELACHENAHALLI • UTTARAHALLI • HSR LAYOUT • RAMAMURTHY NAGAR J.P. NAGAR • RR NAGAR • MARATHAHALLI • KR PURAM • KENGERI • HESARAGATTA • YELHANKA • NELAMANGALA • DEVANAHALLI • CHINTAMANI • KANAKAPURA RAMNAGARA • TUMKUR • CHANDAPURA • CHAMBENAHALLI (SARJAPUR) • ATTIBELE • SINGANAIKANAHALLI • NEW THIPPASANDRA • CHIKKAGOLLARAHATTI

Available at Ramraj Showrooms and All Leading Textile Shops | Shop Online at www.ramrajcotton.in

ಬೀದರ್‌ನಲ್ಲಿ ಶನಿವಾರ ನಡೆದ ಸಮಾರಂಭದಲ್ಲಿ ಕರ್ನಾಟಕ ಜಾನಪದ ಅಕಾಡೆಮಿ 2023, 2024ನೇ ಸಾಲಿನ ವಾರ್ಷಿಕ ಗೌರವ ಪ್ರಶಸ್ತಿ, ತಜ್ಞ ಪ್ರಶಸ್ತಿ, 2022 ಮತ್ತು 2023ನೇ ಸಾಲಿನ ಪುಸ್ತಕ ಬಹುಮಾನ ಪ್ರಶಸ್ತಿಯನ್ನು ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್‌, ಕನ್ನಡ ಮತ್ತು ಸಂಸ್ಕೃತಿಯ ಇಲಾಖೆಯ ಕಲಬುರಗಿ ವಿಭಾಗದ ಜಂಟಿ ನಿರ್ದೇಶಕ ಬಸವರಾಜ ಹೂಗಾರ ಪ್ರದಾನ ಮಾಡಿದರು. ತಜ್ಞ ಪ್ರಶಸ್ತಿ ಮತ್ತು ಪುಸ್ತಕ ಬಹುಮಾನ ಪ್ರಶಸ್ತಿಯು ತಲಾ ₹50 ಸಾವಿರ ನಗದು, ಸ್ಮರಣಿಕೆ ಹಾಗೂ ಪ್ರಮಾಣ ಪತ್ರ, ವಾರ್ಷಿಕ ಗೌರವ ಪ್ರಶಸ್ತಿಯು ತಲಾ ₹25 ಸಾವಿರ ನಗದು, ಸ್ಮರಣಿಕೆ ಹಾಗೂ ಪ್ರಮಾಣ ಪತ್ರ ಒಳಗೊಂಡಿದೆ

ವಕ್ಫ್ ಮಂಡಳಿಯ ನೂತನ ಅಧ್ಯಕ್ಷ ಅಲಿ ಅಲ್ ಹುಸೇನಿ

ಪ್ರಜಾವಾಣಿ ವಾರ್ತೆ

ಕಲಬುರಗಿ: ರಾಜ್ಯ ವಕ್ಫ್ ಮಂಡಳಿಯ ನೂತನ ಅಧ್ಯಕ್ಷರಾಗಿ ಖಾಜಾ ಬಂದಾನವಾಜ್ ದರ್ಗಾದ ಪೀಠಾಧಿಪತಿ ಸಯ್ಯದ್ ಮುಹಮ್ಮದ್ ಅಲಿ ಅಲ್ ಹುಸೇನಿ ಅವರು ಅವಿರೋಧವಾಗಿ ಶನಿವಾರ ಆಯ್ಕೆಯಾದರು.

ಬೆಂಗಳೂರಿನ ಕನ್ನಿಂಗ್ ಹ್ಯಾಮ್ ರಸ್ತೆಯಲ್ಲಿರುವ ವಕ್ಫ್ ಮಂಡಳಿ ಕಚೇರಿಯಲ್ಲಿ ಅಧಿಕಾರ ಸ್ವೀಕರಿಸಿ ಮಾತನಾಡಿದ ಅವರು,

'ಮಂಡಳಿಯ ಎಲ್ಲ ಸದಸ್ಯರ ಜೊತೆಗೆ ಉತ್ತಮ ಸಂಬಂಧ ಹೊಂದಿದ್ದು, ಅವರ ಜೊತೆಗೂಡಿ ನಿರ್ಧಾರ ತೆಗೆದುಕೊಳ್ಳುತ್ತೇನೆ. ಮುಸ್ಲಿಂ ಸಮುದಾಯದ ಏಳಿಗೆಗಾಗಿ ಶ್ರಮಿಸಿ, ಮಂಡಳಿಯನ್ನು ಅಭಿವೃದ್ಧಿಪಡಿಸುವ ಹೊಣೆಗಾರಿಕೆ ನಮ್ಮ ಮೇಲಿದೆ' ಎಂದರು.

'ವಕ್ಫ್ ಮಂಡಳಿ ಧಾರ್ಮಿಕ ಸಂಸ್ಥೆಯಾಗಿದ್ದು, ಅದಕ್ಕೆ ಯಾವುದೇ ಚ್ಯುತಿ ಆಗದಂತೆ ನೋಡಿಕೊಳ್ಳುತ್ತೇನೆ. ಮುಸ್ಲಿಂ ಸಮುದಾಯ ನನ್ನ ಮೇಲಿಟ್ಟಿರುವ ನಂಬಿಕೆಗೆ ತಕ್ಕಂತೆ ಕೆಲಸ ಮಾಡುತ್ತೇನೆ' ಎಂದು ಹೇಳಿದರು.

ಅಲಿ ಅಲ್ ಹುಸೇನಿ ಅವರು ಇತ್ತೀಚೆಗೆ ನಿಧನರಾದ ಕೆಬಿಎನ್ ದರ್ಗಾ ಪೀಠಾಧಿಪತಿಯಾಗಿದ್ದ ಸಜ್ಜಾದೆ ನಶೀನ್ ಸೈಯದ್ ಖುಸ್ರೊ ಹುಸೇನಿ ಅವರ ಪುತ್ರ.

ಕನ್ನಡ, ತುಳು ವಿದ್ವಾಂಸ ವಾಮನ ನಂದಾವರ ನಿಧನ

ಮಂಗಳೂರು: ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷ, ಕನ್ನಡ – ತುಳು ವಿದ್ವಾಂಸ ವಾಮನ ನಂದಾವರ (81) ಶನಿವಾರ ನಿಧನರಾದರು.

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ನಂದಾವರ ಗ್ರಾಮದಲ್ಲಿ ಬಾಬು ಬಾಳೆಪುಣಿ–ಪೂವಮ್ಮ ದಂಪತಿಯ ಮಗನಾಗಿ 1944ರಲ್ಲಿ ಜನಿಸಿದ್ದರು.

ತುಳು ಜಾನಪದ ಸಂಶೋಧನಾ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡಿದ್ದಾರೆ. 'ಕೋಟಿ ಚೆನ್ನಯ ಜಾನಪದೀಯ ಅಧ್ಯಯನ' ಸಂಶೋಧನಾ ಕೃತಿಯನ್ನು ರಚಿಸಿದ್ದರು. 'ಹಿಮಾಂಶು' ಪ್ರಕಾಶನ ಸಂಸ್ಥೆಯ ಮೂಲಕ ಅನೇಕ ಕೃತಿಗಳನ್ನು ಪ್ರಕಟಿಸಿದ್ದಾರೆ.

ಬೆಂಗಳೂರಿನ ಚನ್ನೇನಹಳ್ಳಿ ಜನಸೇವಾ ವಿದ್ಯಾಕೇಂದ್ರದಲ್ಲಿ ಹಾಗೂ ನಗರದ ಸೇಂಟ್ ಆನ್ಸ್ ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿ, ಸೇಂಟ್ ಆನ್ಸ್ ಮಹಿಳಾ ಶಿಕ್ಷಣ ತರಬೇತಿ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸಿದ್ದರು.

ಅವರಿಗೆ ಪತ್ನಿ, ಲೇಖಕಿ ಚಂದ್ರಕಲಾ ನಂದಾವರ, ಪುತ್ರ ಹಾಗೂ ಪುತ್ರಿ ಇದ್ದಾರೆ. ಅವರ ದೇಹವನ್ನು ದೇರಳಕಟ್ಟೆಯ ಕೆ.ಎಸ್.ಹೆಗ್ಡೆ ವೈದ್ಯಕೀಯ ಕಾಲೇಜಿಗೆ ದಾನ ಮಾಡಲಾಯಿತು.

ರಾಜ್ಯ ಸರ್ಕಾರದ ತೀರ್ಮಾನದ ವಿರುದ್ಧ ಕೋರ್ಟ್ ಮೊರೆ ಹೋಗುತ್ತೇವೆ: ರವಿಶಂಕರ ಪ್ರಸಾದ್

'ಗುತ್ತಿಗೆ ಮೀಸಲು ಸಂವಿಧಾನ ವಿರೋಧಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ಸರ್ಕಾರಿ ಗುತ್ತಿಗೆಗಳಲ್ಲಿ ಮುಸ್ಲಿಮರಿಗೆ ಶೇ 4ರಷ್ಟು ಮೀಸಲಾತಿ ನೀಡುವ ಕರ್ನಾಟಕ ಸರ್ಕಾರದ ತೀರ್ಮಾನ ಸಂವಿಧಾನ ಬಾಹಿರ ಎಂದು ಬಿಜೆಪಿ ಟೀಕಿಸಿದೆ.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಿಜೆಪಿ ಸಂಸದ ರವಿಶಂಕರ ಪ್ರಸಾದ್, 'ಈ ನಡೆ ಕಾಂಗ್ರೆಸ್‌ನ ಓಲೈಕೆ ರಾಜಕಾರಣದ ಭಾಗ. ಇದು ರಾಷ್ಟ್ರೀಯ ಏಕತೆಯನ್ನು ದುರ್ಬಲಗೊಳಿಸುತ್ತದೆ. ಈ ನಿರ್ಧಾರದ ವಿರುದ್ಧ ಕೋರ್ಟ್ ಮೊರೆ ಹೋಗಲಾಗುತ್ತದೆ' ಎಂದರು.

'ಮುಸ್ಲಿಂ ಮತಗಳನ್ನು ಸೆಳೆಯಲು ವಿರೋಧ ಪಕ್ಷಗಳ ನಡುವಿನ ಸ್ಪರ್ಧಾತ್ಮಕ ಮತ ಬ್ಯಾಂಕ್ ರಾಜಕಾರಣದಲ್ಲಿ ಕಾಂಗ್ರೆಸ್ ಅನ್ನು ಮುನ್ನಡೆಸಲು ವಿಪಕ್ಷ ನಾಯಕ ರಾಹುಲ್ ಗಾಂಧಿ ಪ್ರಯತ್ನಿಸುತ್ತಿದ್ದಾರೆ. ಕರ್ನಾಟಕ ಸರ್ಕಾರದ ತೀರ್ಮಾನದ ಹಿಂದೆ ರಾಹುಲ್ ಗಾಂಧಿ ಇದ್ದಾರೆ. ರಾಹುಲ್ ಒತ್ತಡಕ್ಕೆ ಮಣಿದು ಮುಖ್ಯಮಂತ್ರಿ ಸಿದ್ದರಾಮಯ್ಯ ಈ ನಿರ್ಧಾರ ತೆಗೆದುಕೊಂಡಿದ್ದಾರೆ' ಎಂದು ಅವರು ಟೀಕಿಸಿದರು.

'ಕರ್ನಾಟಕ ಸರ್ಕಾರದ ಈ ಘೋಷಣೆಯು ಕೋಮು ಮತ್ತು ಮತ ಬ್ಯಾಂಕ್ ರಾಜಕೀಯಕ್ಕೆ ಹೊಸ ಆಯಾಮ ಕೊಟ್ಟಿದೆ. ಇಂತಹ ನಿರ್ಧಾರವು ಚಿಕ್ಕದಾಗಿ ಕಾಣಿಸಬಹುದು. ಆದರೆ, ಇಂತಹ ಬೆಳವಣಿಗೆಗಳು ಗಂಭೀರ ರಾಷ್ಟ್ರೀಯ ಪರಿಣಾಮಗಳನ್ನು ಬೀರುತ್ತವೆ' ಎಂದು ಅವರು ಅಭಿಪ್ರಾಯಪಟ್ಟರು.

ಸಂವಿಧಾನವನ್ನು ರಾಹುಲ್ ಗಾಂಧಿ ಅರ್ಥ ಮಾಡಿಕೊಂಡಿದ್ದಾರೆಯೇ ಎಂದು ಪ್ರಶ್ನಿಸಿದ ಅವರು, 'ಕರ್ನಾಟಕದ ಈ ಮಾದರಿಯನ್ನು ಕಾಂಗ್ರೆಸ್ ಆಡಳಿತವಿರುವ ಇತರ ರಾಜ್ಯಗಳು ಅನುಕರಿಸಬಹುದು' ಎಂದರು.

'ರಾಹುಲ್ ವಿಯೆಟ್ನಾಂ ಪ್ರವಾಸ ಏಕೆ?': 'ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ತನ್ನ ಕ್ಷೇತ್ರಕ್ಕಿಂತ ವಿಯೆಟ್ನಾಂನಲ್ಲಿ ಹೆಚ್ಚು ಕಾಲ ಕಳೆಯುತ್ತಾರೆ ಏಕೆ? ಅವರು ಹೊಸ ವರ್ಷದ ಸಂದರ್ಭದಲ್ಲೂ ಅಲ್ಲಿಯೇ ಇದ್ದರೂ, ಈಗ ಹೋಳಿ ಹಬ್ಬದ ಸಂದರ್ಭದಲ್ಲೂ ಅಲ್ಲಿಯೇ ಇದ್ದಾರೆ ಏಕೆ' ಎಂದು ರವಿಶಂಕರ ಪ್ರಶ್ನಿಸಿದರು.

'ರಾಹುಲ್ ಅವರು ಪದೇ ಪದೇ ಆ ದೇಶಕ್ಕೆ ಭೇಟಿ ನೀಡುತ್ತಿರುವುದು ಕುತೂಹಲಕ್ಕೆ ಕಾರಣವಾಗಿದೆ' ಎಂದು ಅವರು ಹೇಳಿದರು.

'ಶೇ 4ರ ಮೀಸಲು ಮುಸ್ಲಿಮರಿಗಷ್ಟೇ ಅಲ್ಲ'

ಬೆಂಗಳೂರು: 'ಸರ್ಕಾರಿ ಗುತ್ತಿಗೆಯಲ್ಲಿ ಮುಸ್ಲಿಮರಿಗೆ ಮಾತ್ರ ಶೇ 4ರಷ್ಟು ಮೀಸಲಾತಿ ಎಂದು ಹೇಳಿದವರು ಯಾರು? ಅಲ್ಪಸಂಖ್ಯಾತರು ಹಾಗೂ ಹಿಂದುಳಿದವರಿಗೂ ಮೀಸಲಾತಿ ನೀಡಲು ಸರ್ಕಾರ ನಿರ್ಧರಿಸಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಶುಕ್ರವಾರ ಮಾತನಾಡಿದ ಅವರು, 'ಅಲ್ಪಸಂಖ್ಯಾತರು ಎಂದರೆ ಕ್ರೈಸ್ತರು, ಜೈನ, ಪಾರ್ಸಿ, ಸಿಖ್ ಹೀಗೆ ಎಲ್ಲರೂ ಸೇರುತ್ತಾರೆ. ಪರಿಶಿಷ್ಟ ಜಾತಿ, ಪಂಗಡವರಿಗೆ ಗುತ್ತಿಗೆ ಮೀಸಲಾತಿ ನೀಡಲು ಈ ಹಿಂದೆಯೇ ತಿದ್ದುಪಡಿ ಮಾಡಿದ್ದೆವು' ಎಂದರು.

'₹2 ಕೋಟಿ ಮೊತ್ತದಲ್ಲಿ ಮಾತ್ರ ಮೀಸಲಾತಿಗೆ ಒಪ್ಪಿಗೆ ನೀಡಲಾಗಿದೆ. ಅದಕ್ಕಿಂತ ಹೆಚ್ಚಿನ ಮೊತ್ತದ ಕಾಮಗಾರಿ ನಡೆಸಲು ಸಾಧ್ಯವಿಲ್ಲ. ನಾವು ಬೇರೆ ಯಾರ ಹಕ್ಕನ್ನು ಕಸಿದುಕೊಳ್ಳುವುದಿಲ್ಲ. ಅವರಿಗೂ (ಅಲ್ಪಸಂಖ್ಯಾತರಿಗೂ) ನಾವು ಬದುಕು ಕೊಡಬೇಕಲ್ಲವೇ' ಎಂದರು.

ಡಿ.ಕೆ. ಶಿವಕುಮಾರ್

'ಗುತ್ತಿಗೆ ಮೀಸಲಾತಿಯನ್ನು ಬಿಜೆಪಿಯವರು ಮತ ಬ್ಯಾಂಕ್ ರಾಜಕಾರಣ ಎನ್ನುತ್ತಿದ್ದಾರಲ್ಲ' ಎಂದಾಗ, 'ಅವರು ನಮ್ಮನ್ನು ನೆನಪಿಸಿಕೊಳ್ಳುತ್ತಾ ಇರಬೇಕು. ಆಗಲೇ ನಾವು ಗಟ್ಟಿ ಆಗುವುದು' ಎಂದರು.

'ಏನೇ ತಕರಾರು ಇದ್ದರೆ ಕಾನೂನು ಮೊರೆ ಹೋಗಿ'

ಮೈಸೂರು: 'ಗುತ್ತಿಗೆಯಲ್ಲಿ ಮುಸ್ಲಿಮರಿಗೆ ಮೀಸಲಾತಿ ನೀಡುವ ರಾಜ್ಯ ಸರ್ಕಾರದ ನಿರ್ಧಾರದ ಕುರಿತು ಬಿಜೆಪಿಯವರಿಗೆ ತಕರಾರು ಇದ್ದರೆ ಕಾನೂನಿನ ಮೊರೆ ಹೋಗಲು ಅವಕಾಶವಿದೆ' ಎಂದು ಎಐಸಿಸಿ ವಕ್ತಾರ ಅಭಿಷೇಕ್ ಮನು ಸಿಂಘ್ವಿ ಹೇಳಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಇದು ಸರ್ಕಾರಗಳ ಅಧಿಕಾರ. ಹಿಂದುಳಿದ ವರ್ಗಗಳಿಗೆ ಸಂವಿಧಾನಬದ್ಧವಾಗಿ ಬೆಂಬಲ ನೀಡುವುದು ತಪ್ಪಲ್ಲ' ಎಂದರು.

ಕೇಂದ್ರದಲ್ಲಿ ಬಿಜೆಪಿಯವರು ಶೇ 10ರಷ್ಟು ಮೀಸಲಾತಿ ಯಾರಿಗೆ ಕೊಟ್ಟರು? ಕಾರ್ಮಿಕರ ಕಿಟ್ ವಿತರಣೆಯಲ್ಲಿ ಅವ್ಯವಹಾರ ಆಗಿದ್ದರೆ, ಅದಕ್ಕೆ ಬಿಜೆಪಿ ಸಾಕ್ಷ್ಯ ಕೊಡಲಿ
ಸಂತೋಷ್ ಲಾಡ್, ಕಾರ್ಮಿಕ ಸಚಿವ

ಎಂಇಎಸ್ ಸದಸ್ಯರಿಗೆ ಸೋಲುಣಿಸಿದ ಬಿಜೆಪಿ

ಬೆಳಗಾವಿ: ಮಂಗೇಶ ಮೇಯರ್

ಪ್ರಜಾವಾಣಿ ವಾರ್ತೆ

ಬೆಳಗಾವಿ: ಬೆಳಗಾವಿ ನೂತನ ಮೇಯರ್ ಆಗಿ ಮಂಗೇಶ ಪವಾರ ಹಾಗೂ ಉಪಮೇಯರ್ ಆಗಿ ವಾಣಿ ವಿಲಾಸ ಜೋಶಿ ಶನಿವಾರ ಬಹುಮತದಿಂದ ಆಯ್ಕೆಯಾದರು.

41ನೇ ವಾರ್ಡ್‌ನ ಸದಸ್ಯ ಮಂಗೇಶ ಮರಾಠಿಗರು, ವೃತ್ತಿಯಲ್ಲಿ ನೇಕಾರ. ಕನ್ನಡತಿ ವಾಣಿ 43ನೇ ವಾರ್ಡ್‌ನ ಸದಸ್ಯೆ. ಈ ಎರಡೂ ವಾರ್ಡ್‌ಗಳು ಶಾಸಕ ಅಭಯ ಪಾಟೀಲ ಪ್ರತಿನಿಧಿಸುವ ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಬರುತ್ತವೆ.

ಒಟ್ಟು 65 ಮತದಾರರ ಪೈಕಿ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ, ಸತೀಶ ಜಾರಕಿಹೊಳಿ, ಸಂಸದೆ ಪ್ರಿಯಾಂಕಾ ಜಾರಕಿಹೊಳಿ, ಶಾಸಕ ಆಸಿಫ್ ಸೇಠ್ ಮತ್ತು ಒಬ್ಬ ಪಾಲಿಕೆ ಸದಸ್ಯ ಸೇರಿ ಕಾಂಗ್ರೆಸ್‌ನ ಐವರು ಚುನಾವಣೆಯಿಂದ ದೂರ ಉಳಿದರು.

ಮಂಗೇಶ ಮತ್ತು ಬಸವರಾಜ ಮೋದಗೇಕರ ನಡುವೆ ಮೇಯರ್ ಸ್ಥಾನಕ್ಕೆ ಚುನಾವಣೆ ಏರ್ಪಟ್ಟಿತು. ಬಿಜೆಪಿಯ ಮಂಗೇಶ ಅವರು 40, ಎಂಇಎಸ್‌ನ ಬಸವರಾಜ ಅವರು 20 ಮತ ಪಡೆದರು. ಉಪ ಮೇಯರ್ ಚುನಾವಣೆಯಲ್ಲಿ ಬಿಜೆಪಿಯ ವಾಣಿ ಅವರಿಗೆ 40, ಪ್ರತಿಸ್ಪರ್ಧಿ ಎಂಇಎಸ್‌ನ ಲಕ್ಷ್ಮಿ ಲೋಕರಿ ಅವರಿಗೆ 20 ಮತಗಳು ಬಂದವು.

ಅನರ್ಹಗೊಂಡಿದ್ದ ಸದಸ್ಯನೇ ಮೇಯರ್!

ಮೇಯರ್ ಮಂಗೇಶ ಪವಾರ, ಉಪಮೇಯರ್ ವಾಣಿ ವಿಲಾಸ

ಪತ್ನಿ ಹೆಸರಲ್ಲಿ ಮಹಾನಗರ ಪಾಲಿಕೆಯ ವಾಣಿಜ್ಯ ಮಳಿಗೆ ಪಡೆದಿದ್ದಾರೆ ಎಂಬ ಆರೋಪದಡಿ ಮಂಗೇಶ ಪವಾರ ಹಾಗೂ ಜಯಂತ ಜಾಧವ ಅವರ ಸದಸ್ಯತ್ವವನ್ನು ತಿಂಗಳ ಹಿಂದೆ ಅನರ್ಹಗೊಳಿಸಲಾಗಿತ್ತು. ಇದನ್ನು ಪ್ರಶ್ನಿಸಿ ಇಬ್ಬರೂ ಹೈಕೋರ್ಟ್ ಮೆಟ್ಟಿಲೇರಿದ್ದರು. ಚುನಾವಣೆ ಎರಡು ದಿನ ಬಾಕಿ ಇರುವಾಗಲೇ ಅವರ ಅನರ್ಹ ಆದೇಶಕ್ಕೆ ಹೈಕೋರ್ಟ್ ತಡೆ ನೀಡಿತು.

'ಕಾಂಗ್ರೆಸ್ ನಾಯಕರ ಮಾತು ಕೇಳಿ ಅಧಿಕಾರಿಗಳು ಮಂಗೇಶ ಅವರ ಸದಸ್ಯತ್ವ ಅನರ್ಹ ಮಾಡಿದ್ದಾರೆ. ಅವರನ್ನೇ ಮೇಯರ್ ಮಾಡಿ, ಅವರ ಎದುರು ಕಾಂಗ್ರೆಸ್‌ನವರು ಕೈ ಮುಗಿದು ನಿಲ್ಲುವಂತೆ ಮಾಡುತ್ತೇನೆ. ಯಾವ ಅಧಿಕಾರಿ ಅನರ್ಹ ಆದೇಶ ಹೊರಡಿಸಿದ್ದಾರೋ, ಅವರಿಂದ ಮೇಯರ್ ಪ್ರಮಾಣಪತ್ರ ಕೊಡಿಸುತ್ತೇನೆ' ಎಂದು ಶಾಸಕ ಅಭಯ ಪಾಟೀಲ ಸವಾಲು ಹಾಕಿದ್ದರು. ಅದರಲ್ಲಿ ಅವರು ಯಶಸ್ವಿಯೂ ಆದರು. ಸಂಸದ ಜಗದೀಶ ಶೆಟ್ಟರ್, ವಿಧಾನ ಪರಿಷತ್ ಸದಸ್ಯರಾದ ಸಾಬಣ್ಣ ತಳವಾರ, ಎನ್.ರವಿಕುಮಾರ್ ಕೂಡ ಬಿಜೆಪಿ ಸದಸ್ಯರಿಗೆ ಬಂಬಲವಾಗಿ ನಿಂತರು.

'ಗರ್ಭಕಂಠದ ಕ್ಯಾನ್ಸರ್ ತಡೆಗೆ ಲಸಿಕೆ'

ಮಾನ್ವಿ (ರಾಯಚೂರು ಜಿಲ್ಲೆ): 'ಗರ್ಭಕಂಠದ ಕ್ಯಾನ್ಸರ್ ಬರದಂತೆ ತಡೆಯಲು ಮುಂಜಾಗ್ರತಾ ಕ್ರಮವಾಗಿ ಪ್ರತಿವರ್ಷ ಆರೋಗ್ಯ ಇಲಾಖೆಯಿಂದ 14 ವರ್ಷ ವಯಸ್ಸಿನ ಎಲ್ಲಾ ಹೆಣ್ಣು ಮಕ್ಕಳಿಗೆ ಎಚ್‌ಪಿವಿ ಲಸಿಕೆ ನೀಡಲು ನಿರ್ಧರಿಸಲಾಗಿದೆ' ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಅವರು ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸುದ್ದಿ 2 ನಿಮಿಷ

ಮೇ 30ಗಳಲ್ಲಿ ವೀರಶೈವ ಸಮಾವೇಶ: ರೇಣುಕಾಚಾರ್ಯ

ದಾವಣಗೆರೆ: 'ವೀರಶೈವ ಲಿಂಗಾಯತ ಮಹಾಸಂಗಮ ಸಮಾವೇಶವನ್ನು ಮೇ 30ಗಳಲ್ಲಿ ದಾವಣಗೆರೆಯಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಇದಕ್ಕೆ ಸಂಬಂಧಿಸಿದ ಪೂರ್ವಭಾವಿ ಸಭೆಗಳನ್ನು ಮುಂದುವರಿಸುತ್ತೇವೆ' ಎಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ತಿಳಿಸಿದರು.

'ಮಹಾಸಂಗಮಕ್ಕೆ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಹಾಗೂ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ವಿರೋಧವಿದೆ. ಸಮುದಾಯದ ಮಠಾಧೀಶರು ಹಾಗೂ ಹಲವು ನಾಯಕರ ಬೆಂಬಲವಿದ್ದು, ಸಮಾವೇಶ ನಡೆಸುವುದು ನಿಶ್ಚಿತ. 5ರಿಂದ 10 ಲಕ್ಷ ಜನರನ್ನು ಸೇರಿಸಲಾಗುವುದು' ಎಂದು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ವೀರಶೈವ ಲಿಂಗಾಯತ ಮಹಾಸಂಗಮದ ಪೂರ್ವಸಿದ್ಧತಾ ಸಭೆಗಳನ್ನು ರಾಜ್ಯದ 17 ಜಿಲ್ಲೆಗಳಲ್ಲಿ ನಡೆಸಲಾಗಿದೆ. ಕಲ್ಯಾಣ ಕರ್ನಾಟಕ ಹಾಗೂ ಉತ್ತರ ಕರ್ನಾಟಕದ ಇನ್ನೂ ಕೆಲ ಜಿಲ್ಲೆಗಳಲ್ಲಿ ಪೂರ್ವಸಿದ್ಧತಾ ಸಭೆ ನಡೆಸಲಿದ್ದೇವೆ. ಒಳಪಂಗಡಗಳನ್ನು ಎತ್ತಿಕಟ್ಟಿ ಸಮುದಾಯ ಒಡೆಯುವ ದುಷ್ಟಶಕ್ತಿಗಳ ಹುನ್ನಾರ ಫಲಿಸದು' ಎಂದರು.

ಬಿಜೆಪಿ: ಎಂಟು ಜಿಲ್ಲೆಗಳಿಗೆ ಅಧ್ಯಕ್ಷರ ನೇಮಕ

ಬೆಂಗಳೂರು: ಬಿಜೆಪಿ ಎಂಟು ಜಿಲ್ಲೆಗಳಿಗೆ ಜಿಲ್ಲಾ ಘಟಕದ ಅಧ್ಯಕ್ಷರ ನೇಮಕ ಮಾಡಿದ್ದು, ಎರಡು ಜಿಲ್ಲೆಗಳ ಅಧ್ಯಕ್ಷರನ್ನು ಬದಲಾವಣೆ ಮಾಡಿದೆ.

ಮಂಡ್ಯ (ಇಂದ್ರೇಶ್), ಗದಗ (ರಾಜು ಕುರಡಗಿ), ಬಾಗಲಕೋಟೆ (ಎಸ್.ಟಿ. ಪಾಟೀಲ), ವಿಜಯಪುರ (ಗುರುಲಿಂಗಪ್ಪ ಅಂಗಡಿ), ರಾಯಚೂರು (ವೀರನಗೌಡ ಲೆಕ್ಕಿಹಾಳ), ಮಧುಗಿರಿ (ಚಿದಾನಂದ ಗೌಡ) ರಾಮನಗರ (ಆನಂದ್ ಸ್ವಾಮಿ), ಬೆಂಗಳೂರು ಗ್ರಾಮಾಂತರಕ್ಕೆ (ರಾಮಕೃಷ್ಣಪ್ಪ) ನೇಮಕ ಮಾಡಲಾಗಿದೆ.

ಎರಡು ತಿಂಗಳ ಹಿಂದಷ್ಟೆ ಆಯ್ಕೆಯಾಗಿದ್ದ ಕೆಲವರ ನೇಮಕಾತಿಯನ್ನು ತಡೆಹಿಡಿಯಲಾಗಿತ್ತು. ವಿಜಯಪುರದ ಆರ್.ಎಸ್.ಪಾಟೀಲ, ಮಧುಗಿರಿಯ ಬಿ.ಸಿ. ಹನುಮಂತೇಗೌಡ ಅವರನ್ನು ಬದಲಾಯಿಸಿ, ಹೊಸಬರಿಗೆ ಅವಕಾಶ ನೀಡಲಾಗಿದೆ.

ಬಿಜೆಪಿಯ 23 ಜಿಲ್ಲಾ ಘಟಕಗಳ ನೂತನ ಅಧ್ಯಕ್ಷರನ್ನು ಇದೇ ವರ್ಷದ ಜನವರಿಯಲ್ಲಿ ನೇಮಕ ಮಾಡಲಾಗಿತ್ತು. ಕೆಲ ಜಿಲ್ಲೆಗಳ ಅಧ್ಯಕ್ಷರ ನೇಮಕಕ್ಕೆ ತೀವ್ರ ವಿರೋಧ ವ್ಯಕ್ತವಾಗಿತ್ತು.

ಹಾಸನ, ಮೈಸೂರು ಗ್ರಾಮಾಂತರ, ಉಡುಪಿ, ಕೊಡಗು, ಚಿತ್ರದುರ್ಗ, ದಾವಣಗೆರೆ, ತುಮಕೂರು ಮತ್ತು ಹಾವೇರಿ ಜಿಲ್ಲೆಗಳ ಅಧ್ಯಕ್ಷರ ನೇಮಕ ಬಾಕಿ ಇದೆ.

22, 23ಕ್ಕೆ ಲೇಖಕಿಯರ ಸಮ್ಮೇಳನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೇಖಕಿಯರ ಸಂಘವು ಇದೇ 22 ಮತ್ತು 23ರಂದು ಎಂಟನೇ ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನವನ್ನು ಇಲ್ಲಿನ ಅರಮನೆ ರಸ್ತೆಯಲ್ಲಿರುವ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ಹಮ್ಮಿಕೊಂಡಿದೆ.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಸಮ್ಮೇಳನದ ಭಿತ್ತಿಪತ್ರ ಬಿಡುಗಡೆ ಮಾಡಿ ಮಾತನಾಡಿದ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪ, '12 ವರ್ಷಗಳ ಬಳಿಕ ಸಂಘವು ಸಮ್ಮೇಳನ ನಡೆಸುತ್ತಿದೆ. ಕೋವಿಡ್ ಸೇರಿ ವಿವಿಧ ಕಾರಣಗಳಿಂದ ಸಮ್ಮೇಳನ ನಡೆದಿರಲಿಲ್ಲ. 'ಅರಿವೆಂಬುದು ಬಿಡುಗಡೆ' ಈ ಸಮ್ಮೇಳನದ ಆಶಯ ನುಡಿಯಾಗಿದೆ. ಲೇಖಕಿ ಎಚ್.ಎಸ್. ಶ್ರೀಮತಿ ಅವರನ್ನು ಸಮ್ಮೇಳನಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ. ಸಮ್ಮೇಳನದ ವೇದಿಕೆಗೆ ಕಮಲಾ ಹಂಪನಾ ಅವರ ಹೆಸರಿಡಲಾಗಿದೆ. ನಾಡಿನ ವಿವಿಧೆಡೆ ಇರುವ ಲೇಖಕಿಯರು ಪಾಲ್ಗೊಳ್ಳುತ್ತಾರೆ' ಎಂದರು.

'22ರಂದು ಬೆಳಿಗ್ಗೆ 10.30ಕ್ಕೆ ಉದ್ಘಾಟನಾ ಸಮಾರಂಭ ನಡೆಯಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ

ಭಾನುವಾರ, ಮಾರ್ಚ್ 16, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 75 | ಪುಟ 18

www.prajavani.net

prajavani.net prajavani prajavanj prajavanj

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮುಂಬೈಗೆ ಕಿರೀಟ

ಮಹಿಳಾ ಪ್ರೀಮಿಯರ್ ಲೀಗ್‌ನ ಮೂರನೇ ಆವೃತ್ತಿಯ ಫೈನಲ್‌ನಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಮಣಿಸಿ ಎರಡನೇ ಬಾರಿ ಪ್ರಶಸ್ತಿ ಗೆದ್ದ ಸಂಭ್ರಮದಲ್ಲಿ ಮುಂಬೈ ಇಂಡಿಯನ್ಸ್ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್

ಕಲಿಕೆಯಲ್ಲಿ ಹಿಂದೆ: ಇಬ್ಬರು ಪುಟ್ಟ ಮಕ್ಕಳನ್ನು ಕೊಂದು ತಂದೆ ಆತ್ಮಹತ್ಯೆ 7

ಲಾಭಕ್ಕಾಗಿ ತಮಿಳು ಚಿತ್ರಗಳ ಡಬ್ಬಿಂಗ್: ಆಂಧ್ರ ಡಿಸಿಎಂ ಆರೋಪ 7

ಅಮೆರಿಕ ತೊರೆದ ಭಾರತದ ವಿದ್ಯಾರ್ಥಿನಿ 6

ಹಿಂದಿಗೇಕೆ ಡಬ್?: ಪವನ್ ಕಲ್ಯಾಣ್ 7

"THE LEADER IN RURAL EDUCATION EXCELLENCE"

ನಮ್ಮ ಎಕ್ಸೆಲ್ ಅಕಾಡೆಮಿಕ್ಸ್®

ಬೆಂಗಳೂರು

IIT-Main & Advanced | NEET | BITS | AIIMS | JIPMER | CET | COMED-K

ಆಡಳಿತಾತ್ಮಕ ಕಚೇರಿ : ಎಕ್ಸೆಲ್ ಅಕಾಡೆಮಿಕ್ಸ್
ನಂ.326, ಪೀಪಲ್ ಟೀ ಹಾಸ್ಪಿಟಲ್ ಮುಂಭಾಗ, ಶೇಷಾದ್ರಿಪುರಂ ಕಾಲೇಜ್ ರಸ್ತೆ,
ಯಲಹಂಕ ನ್ಯೂ ಟೌನ್ - 560 064, ಬೆಂಗಳೂರು
7676-91-7777, 9513657041, 9535656277

REG. OPEN FOR REGULAR / ONLINE

NEET, K-CET, IIT-JEE

CRASH COURSE

2ND PUC/12TH, +2 STUDYING / PASSED STUDENTS

POSTAL COACHING

1ST PUC & 2ND PUC, 11TH & 12, +1 & +2 STUDYING STUDENTS

BATCH FROM 19TH MAR, 2025

CELEBRATING 15 SUCCESSFUL YEARS OF Hardwork & Dedication EXCEL ACADAMICS

ವಿಶೇಷ ಸೂಚನೆ : ಅತ್ಯುತ್ತಮ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಹಾಗೂ ಶುಲ್ಕದಲ್ಲಿ 100% ರಿಯಾಯಿತಿ ನೀಡಲಾಗುವುದು

ಹುಡುಗರಿಗೆ ಮತ್ತು ಹುಡುಗಿಯರಿಗೆ ಪ್ರತ್ಯೇಕ ವಸತಿ ಸೌಲಭ್ಯವಿರುತ್ತದೆ

ಕೆ.ಜಿ ಚಿನ್ನ ತಂದರೆ ₹12 ಲಕ್ಷ 'ಲಾಭ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ದುಬೈನಿಂದ 1 ಕೆ.ಜಿ.ಯಷ್ಟು ಚಿನ್ನವನ್ನು ಭಾರತಕ್ಕೆ ಕಳ್ಳಸಾಗಣೆ ಮೂಲಕ ತರಿಸಿಕೊಳ್ಳುವವರಿಗೆ, ಕನಿಷ್ಠ ₹12 ಲಕ್ಷದಷ್ಟು ಲಾಭವಾಗುತ್ತದೆ. ಹೀಗಾಗಿಯೇ, ಈ ದಂಧೆ ವ್ಯವಸ್ಥಿತ ಉದ್ಯಮದ ರೂಪ ಪಡೆದುಕೊಂಡಿದೆ ಎಂಬ ಅಂಶವನ್ನು ನಟಿ ರನ್ಯಾ ರಾವ್ ಪ್ರಕರಣದ ತನಿಖೆಯು ತೆರೆದಿಡುತ್ತಿದೆ.

ರನ್ಯಾ 14.2 ಕೆ.ಜಿಯಷ್ಟು ಚಿನ್ನದ ಗಟ್ಟಿಗಳನ್ನು ಕಳ್ಳಸಾಗಣೆ ಮಾಡಿದ್ದು ಒಂದು ಪ್ರಕರಣವಾದರೆ, ಸಿಬಿಐ ಮತ್ತು ರೆವಿನ್ಯೂ-ಗುಪ್ತಚರ ನಿರ್ದೇಶನಾಲಯ(ಡಿಆರ್‌ಐ) ಇನ್ನೂ 3 ಪ್ರಕರಣಗಳನ್ನು ಒಟ್ಟುಗೂಡಿಸಿ ತನಿಖೆ ನಡೆಸುತ್ತಿವೆ. ಈ ಪ್ರಕರಣಗಳಿಂದ ದೇಶಕ್ಕಾದ ತೆರಿಗೆ ನಷ್ಟದ ಅಂದಾಜನ್ನು ಡಿಆರ್‌ಐ ಮಾಡುತ್ತಿದ್ದರೆ, ಕಳ್ಳಸಾಗಣೆಯಿಂದಾಗುವ ಲಾಭದ ಪ್ರಮಾಣ ಎಷ್ಟು ಎಂದು ಸಿಬಿಐ ಲೆಕ್ಕ ಹಾಕುತ್ತಿದೆ.

'1 ಕೆ.ಜಿ.ಯಷ್ಟು ಚಿನ್ನವನ್ನು ಆಮದು ಮಾಡಿಕೊಂಡಾಗ ಅಂದಿನ ಬೆಲೆಯನ್ನು ಆಧರಿಸಿ ₹5 ಲಕ್ಷದಿಂದ ₹5.15 ಲಕ್ಷದವರೆಗೂ ಆಮದು ಸುಂಕ ಕಟ್ಟಬೇಕಾಗುತ್ತದೆ. ಇನ್ನು, ಹೀಗೆ ಕಳ್ಳಸಾಗಣೆ ಮಾಡಿಕೊಂಡ ಚಿನ್ನವು 24 ಕ್ಯಾರೆಟ್ ಅಥವಾ ಶೇ 99.98ರಷ್ಟು ಪರಿಶುದ್ಧ ಚಿನ್ನ. ಇದನ್ನು 22 ಕ್ಯಾರೆಟ್‌ಗೆ ಪರಿವರ್ತಿಸಿದಾಗ (ಶೇ 91.6ರಷ್ಟು ಪರಿಶುದ್ಧತೆ) ಪ್ರತಿ ಕೆ.ಜಿ.ಯಲ್ಲಿ 83 ಗ್ರಾಂಗಳಷ್ಟು ಉಳಿಯುತ್ತದೆ' ಎಂಬುದು ತನಿಖಾಧಿಕಾರಿಗಳ ಲೆಕ್ಕಾಚಾರ.

'ಸುಂಕ ತಪ್ಪಿಸಿದ್ದರಿಂದ ₹5 ಲಕ್ಷ ಉಳಿದರೆ, 22 ಕ್ಯಾರೆಟ್‌ಗೆ ಪರಿವರ್ತಿಸಿದ್ದರಿಂದ ಉಳಿತಾಯವಾದ ಚಿನ್ನದ ಮೌಲ್ಯ ಸುಮಾರು ₹7 ಲಕ್ಷದಷ್ಟು ಆಗುತ್ತದೆ.

7ನೇ ಪುಟ ನೋಡಿ

ಚಿನ್ನದ ವ್ಯಾಪಾರಿಗಳ ವಿಚಾರಣೆಗೆ ಸಿದ್ಧತೆ

ಪ್ರಕರಣದಲ್ಲಿ ಹಣ ಅಕ್ರಮ ವರ್ಗಾವಣೆಯ ವಿಧಾನದ ಪತ್ತೆಗೆ ಮುಂದಾಗಿರುವ ಜಾರಿ ನಿರ್ದೇಶನಾಲಯವು (ಇ.ಡಿ) ಬೆಂಗಳೂರಿನ ಮೂವರು ಚಿನ್ನದ ವ್ಯಾಪಾರಿಗಳ ವಿಚಾರಣೆಗೆ ಸಿದ್ಧತೆ ಮಾಡಿಕೊಂಡಿದೆ.

'ಮುಂಬೈನಲ್ಲಿ ವಿಚಾರಣೆಗೆ ಒಳಪಡಿಸಿದ ಚಿನ್ನದ ವ್ಯಾಪಾರಿಗಳ ಜತೆಗೆ ಬೆಂಗಳೂರಿನ ವ್ಯಾಪಾರಿಗಳು ಹಣಕಾಸು ಮತ್ತು ಚಿನ್ನ ಸಾಗಣೆ ವ್ಯವಹಾರ ನಡೆಸಿರುವ ಮಾಹಿತಿ ದೊರೆತಿದೆ. ಆ ವಹಿವಾಟುಗಳು ಸಕ್ರಮವೇ ಅಥವಾ ಅಕ್ರಮವೇ ಎಂಬುದನ್ನು ಪರಿಶೀಲಿಸಲಾಗುತ್ತಿದೆ' ಎಂದು ಇ.ಡಿ ಮೂಲಗಳು ತಿಳಿಸಿವೆ.

ಶಿಷ್ಟಾಚಾರ ಸಿಬ್ಬಂದಿಗೆ ನೋಟಿಸ್ ಜಾರಿ

ವಿಮಾನ ನಿಲ್ದಾಣದಲ್ಲಿ ಶಿಷ್ಟಾಚಾರ ನಿಯಮಗಳಡಿ ಗಣ್ಯರಿಗೆ ಒದಗಿಸಲಾಗುವ ಸೌಲಭ್ಯ ದುರ್ಬಳಕೆ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಪ್ರಕರಣದ ತನಿಖಾಧಿಕಾರಿಯಾಗಿರುವ, ಹೆಚ್ಚುವರಿ ಮುಖ್ಯಕಾರ್ಯದರ್ಶಿ ಗೌರವ್ ಗುಪ್ತ ಅವರು ಶಿಷ್ಟಾಚಾರ ಸಿಬ್ಬಂದಿಗೆ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಜಾರಿ ಮಾಡಿದ್ದಾರೆ.

ಹೆಡ್‌ಕಾನ್‌ಸ್ಟೆಬಲ್ ಬಸವರಾಜು, ವಿಮಾನ ನಿಲ್ದಾಣ ಗುಪ್ತದಳ ವಿಭಾಗದ ಕಾನ್‌ಸ್ಟೆಬಲ್ ಧನುಷ್ ಹಾಗೂ ವೆಂಕಟೇಶ್, ಮಹಾಂತೇಶ್ ಅವರಿಗೆ ನೋಟಿಸ್ ನೀಡಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಬಸವರಾಜು ಅವರ ವಿಚಾರಣೆ ನಡೆಸಿ ದಾಖಲೆಗಳನ್ನು ವಶಕ್ಕೆ ಪಡೆದಿದ್ದು, ವಿಮಾನ ನಿಲ್ದಾಣದ ಭದ್ರತಾ ಅಧಿಕಾರಿ, ಸಿಬ್ಬಂದಿಯ ಹೇಳಿಕೆ ದಾಖಲಿಸಿಕೊಳ್ಳಲಾಗಿದೆ.

'ರನ್ಯಾ ರಾವ್ ಅವರು ದುಬೈನಿಂದ ಕರೆ ಮಾಡಿ ಶಿಷ್ಟಾಚಾರ ಪ್ರಕಾರ ಕರೆದುಕೊಂಡು ಹೋಗುವಂತೆ ಹೇಳಿದ್ದರು. ಕುಟುಂಬದವರು ಯಾರೇ ಬಂದರೂ ಶಿಷ್ಟಾಚಾರ ನೀಡುವಂತೆ ಡಿಜಿಪಿ ರಾಮಚಂದ್ರರಾವ್ ಅವರ ಸೂಚನೆ ಇತ್ತು. ಹೀಗಾಗಿ ರನ್ಯಾ ಅವರನ್ನು ಶಿಷ್ಟಾಚಾರ ಪ್ರಕಾರ ಕರೆದುಕೊಂಡು ಬರಲು ವಿಮಾನ ನಿಲ್ದಾಣಕ್ಕೆ ಹೋಗಿದ್ದೆ' ಎಂದು ಬಸವರಾಜು ಹೇಳಿಕೆ ನೀಡಿದ್ದಾರೆಂದು ಮೂಲಗಳು ತಿಳಿಸಿವೆ.

ಕೆಂಪೇಗೌಡ ವಿಮಾನ ನಿಲ್ದಾಣಕ್ಕೆ ಭೇಟಿ ನೀಡಿರುವ ಗೌರವ್ ಗುಪ್ತ ನೇತೃತ್ವದ ತಂಡ, ರನ್ಯಾ ದುಬೈಗೆ ಹೊರಟ ದಿನ ಮತ್ತು ವಾಪಸ್ ಆದ ದಿನದ ಸಿ.ಸಿ.ಟಿ.ವಿ ಕ್ಯಾಮೆರಾಗಳ ದೃಶ್ಯಾವಳಿಯನ್ನು ಪರಿಶೀಲಿಸುತ್ತಿದೆ.

7ನೇ ಪುಟ ನೋಡಿ

ತಪಾಸಣೆಗೆ ಬರುವ ಹೃದ್ರೋಗಿಗಳಲ್ಲಿ ಶೇ 20ರಷ್ಟು ಮಂದಿ 40 ವರ್ಷದೊಳಗಿನವರು

ಯುವಜನರಿಗೂ ಹೃದ್ರೋಗ

• ವರುಣ ಹೆಗಡೆ

ಬೆಂಗಳೂರು: ವಾಹನ ಚಲಾಯಿಸುತ್ತಿರುವಾಗ, ಟ್ರೆಡ್‌ಮಿಲ್‌ನಲ್ಲಿ ವ್ಯಾಯಾಮ ಮಾಡುವಾಗ, ಉದ್ಯಾನದಲ್ಲಿ ನಡೆದಾಡುವಾಗ, ಬೆಟ್ಟ ಏರುತ್ತಿರುವಾಗ ಸೇರಿ ವಿವಿಧ ಸಂದರ್ಭದಲ್ಲಿ ತೀವ್ರ ಹೃದಯಾಘಾತಕ್ಕೆ ಒಳಗಾಗಿ, ಮೃತಪಡುವ ಯುವಕರ ಸಂಖ್ಯೆ ರಾಜ್ಯದಲ್ಲಿ ಇತ್ತೀಚೆಗೆ ಹೆಚ್ಚಳವಾಗುತ್ತಿದೆ. ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಗೆ ಭೇಟಿ ನೀಡುವ ಹೊರ ಹಾಗೂ ಒಳರೋಗಿಗಳ ಸಂಖ್ಯೆಯೂ ಏರುಗತಿ ಪಡೆದಿದೆ.

ಬಿಎಂಟಿಸಿ ಬಸ್ ಚಾಲನೆ ಮಾಡುತ್ತಿರುವಾಗಲೇ 38 ವರ್ಷದ ಚಾಲಕ ಹೃದಯಾಘಾತದಿಂದ ಮೃತ ಪಟ್ಟರುವುದು ನೆಲಮಂಗಲ ತಾಲ್ಲೂಕಿನ ಬಿನ್ನಮಂಗಲ ಬಸ್ ನಿಲ್ದಾಣದ ಬಳಿ ಕಳೆದ ನವೆಂಬರ್‌ನಲ್ಲಿ ನಡೆದಿತ್ತು. ಪ್ಯಾರಾ ಮೆಡಿಕಲ್ ವ್ಯಾಸಂಗ ಮಾಡುತ್ತಿದ್ದ 17 ವರ್ಷದ ವಿದ್ಯಾರ್ಥಿ ಜನವರಿಯಲ್ಲಿ ಹೃದಯಾಘಾತದಿಂದ ಸಾವೀಗಿಡಾದ ಘಟನೆ ಕಲಬುರಗಿಯಲ್ಲಿ ಸಂಭವಿಸಿತ್ತು. ಅಂಜನಾದ್ರಿ ಬೆಟ್ಟ ಹತ್ತುವಾಗ 18 ವರ್ಷದ ವ್ಯಕ್ತಿ ಹೃದಯಾಘಾತದಿಂದ ಮೃತಪಟ್ಟ ಘಟನೆ ಗಂಗಾವತಿಯಲ್ಲಿ ಜನವರಿ ತಿಂಗಳಲ್ಲೇ ವರದಿಯಾಗಿತ್ತು.

7ನೇ ಪುಟ ನೋಡಿ

2024ರಲ್ಲಿ ಜಯದೇವ ಸಂಸ್ಥೆಯಲ್ಲಿ ನಡೆಸಿದ ಚಿಕಿತ್ಸಾ ಪ್ರಕ್ರಿಯೆ

4,922	35,711	18,953	58,725
ತೆರೆದ ಹೃದಯ ಶಸ್ತ್ರಚಿಕಿತ್ಸೆ	ಕರೋನರಿ ಆಂಜಿಯೋಗ್ರಾಮ್	ಆಂಜಿಯೋಪ್ಲಾಸ್ಟಿ ಪ್ರಕ್ರಿಯೆ ಮತ್ತು ಸ್ಟೆಂಟ್ ಅಳವಡಿಕೆ	ಕ್ಯಾಥ್ ಲ್ಯಾಬ್ ಪ್ರಕ್ರಿಯೆಗಳು

ಹೃದಯಾಘಾತಕ್ಕೆ ಕಾರಣಗಳು



- ಅಧಿಕ ರಕ್ತದೊತ್ತಡ, ಮಧುಮೇಹ ಮತ್ತು ಅಧಿಕ ಕೊಲೆಸ್ಟ್ರಾಲ್
- ಬದಲಾದ ಜೀವನಶೈಲಿ, ಧೂಮಪಾನ, ತಂಬಾಕು ಉತ್ಪನ್ನ ಸೇವನೆ, ಮಾದಕ ವಸ್ತುಗಳ ಸೇವನೆಯ ವ್ಯಸನ
- ವ್ಯಾಯಾಮ ಸೇರಿದಂತೆ ದೈಹಿಕ ಚಟುವಟಿಕೆ ಇಲ್ಲದಿರುವುದು
- ಜಂಕ್ ಫುಡ್ ಸೇರಿ ಪಾಶ್ಚಾತ್ಯ ಆಹಾರ ಸೇವನೆ
- ಜಿಮ್‌ಗಳಲ್ಲಿ ಅಶಿಸ್ತಿನ ಕಸರತ್ತು, ಅವೈಜ್ಞಾನಿಕವಾಗಿ ಪ್ರೊಟೀನ್ ಸಪ್ಲಿಮೆಂಟ್ ಪಡೆಯುವಿಕೆ
- ಆನುವಂಶಿಕವಾಗಿ, ಕುಟುಂಬದ ಸದಸ್ಯರಿಗೆ ಹೃದಯಾಘಾತದ ಇತಿಹಾಸವಿದ್ದರೆ
- ಮಾನಸಿಕ ಒತ್ತಡ, ಹೆಚ್ಚುತ್ತಿರುವ ವಾಯುಮಾಲಿನ್ಯ

ಆಧುನಿಕ ಜೀವನಶೈಲಿಯಿಂದ ಯುವಜನರಲ್ಲಿಯೂ ಹೃದಯಾಘಾತ ಕಾಣಿಸಿಕೊಳ್ಳುತ್ತಿದೆ. ಧೂಮಪಾನದಂತಹ ವ್ಯಸನ ಸೇರಿ ನಾನಾ ಕಾರಣಗಳಿಂದ ಹೃದಯಾಘಾತ ಪ್ರಕರಣ ಹೆಚ್ಚಿದೆ

ಡಾ.ಕೆ.ಎಸ್. ರವೀಂದ್ರನಾಥ್, ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕ

ಲಸಿಕೆ ಅಡ್ಡಪರಿಣಾಮ ?

'ಕೋವಿಡ್ ನಿಯಂತ್ರಣಕ್ಕೆ ಬಂದು ವರ್ಷಗಳೇ ಕಳೆದಿವೆ. ಅದರ ಪರಿಣಾಮ ಇಷ್ಟು ದಿನ ಇರುವುದಿಲ್ಲ. ಕೋವಿಡ್ ಹಾಗೂ ಲಸಿಕೆಯ ಪರಿಣಾಮದಿಂದ ಹೃದಯಾಘಾತ ಸಂಭವಿಸುತ್ತಿದೆ ಎನ್ನುವುದು ಅವೈಜ್ಞಾನಿಕ. ಇದಕ್ಕೆ ವೈದ್ಯಕೀಯ ಪುರಾವೆಗಳೂ ಇಲ್ಲ' ಎಂದು ಜಯದೇವ ಹೃದ್ರೋಗ ಸಂಸ್ಥೆ ವೈದ್ಯರು ತಿಳಿಸಿದರು.

ಕೇಶ ಸಂರಕ್ಷಣೆ
ಮಂಜುಶ್ರೀ ಹೇರ್ ಆಯಿಲ್
ಆಯುರ್ವೇದ ರೀತ್ಯಾ ತೈಲಪಾಕ ವಿಧಿಯಿಂದ ತಯಾರಿಸಲಾಗಿದೆ.
SDM
ತಯಾರಕರು
ಶ್ರೀ ಧರ್ಮಸ್ಥಳ
ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ-574 118, ಉಡುಪಿ ಜಿಲ್ಲೆ, ಕರ್ನಾಟಕ.
sdmaph@sdmayurvedacollegeudupi.in

ತ್ಯಾಜ್ಯ ನಿರ್ವಹಣೆಗೆ ಬಳಕೆದಾರರ ಶುಲ್ಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಬಜೆಟ್‌ನಲ್ಲಿ ಬಂಪರ್ ಅನುದಾನ ಪಡೆದಿರುವ ಬಿಬಿಎಂಪಿ, ಈಗ ನಗರದಲ್ಲಿ ನಾಗರಿಕರ ಮೇಲೆ ಹೆಚ್ಚಿನ ಹೊರೆ ಹಾಕಿ, ತ್ಯಾಜ್ಯ ನಿರ್ವಹಣೆಗೆ ಬಳಕೆದಾರರ ಶುಲ್ಕದ ಮೂಲಕ ₹600 ಕೋಟಿಗೂ ಹೆಚ್ಚು ವರಮಾನ ಗಳಿಸಲು ನಿರ್ಧರಿಸಿದೆ.

'ಏಪ್ರಿಲ್ 1ರಿಂದಲೇ ತ್ಯಾಜ್ಯ ನಿರ್ವಹಣೆಗೆ ಬಳಕೆದಾರರ ಶುಲ್ಕ ವಿಧಿಸಲಾಗುತ್ತದೆ. 2016ರ ಬೈಲಾದಲ್ಲಿ ಈ 'ಸರ್ವಿಸ್ ಚಾರ್ಜ್' ಸಂಗ್ರಹಿಸುವ ನಿಯಮವಿತ್ತು. ಅದನ್ನು ಜಾರಿಗೆ ತಂದಿರಲಿಲ್ಲ. ಈಗ ಜಾರಿ ಮಾಡುತ್ತಿದ್ದೇವೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಥ್ ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು. 'ಪ್ರತಿ ತಿಂಗಳೂ ಪ್ರತಿ ಮನೆಗೆ ಹೋಗಿ ಬಳಕೆದಾರರ ಶುಲ್ಕ ಸಂಗ್ರಹಿಸಲು ಆಗುವುದಿಲ್ಲ. ಹೀಗಾಗಿ ಆಸ್ತಿ ತೆರಿಗೆಯಲ್ಲೇ ಅದನ್ನು ಸೇರಿಸಲಾಗುತ್ತದೆ. ವರ್ಷಕ್ಕೆ ಎರಡು ಬಾರಿ ಈ ಶುಲ್ಕವನ್ನು ತುಂಬಬಹುದು' ಎಂದರು.

ಬಿಬಿಎಂಪಿ ಕೌನ್ಸಿಲ್‌ನಲ್ಲಿ ರದ್ದುಗೊಂಡಿದ್ದ ತ್ಯಾಜ್ಯ ನಿರ್ವಹಣೆಗಾಗಿ ಬಳಕೆದಾರರ ಶುಲ್ಕವನ್ನು 2025-26ನೇ ಸಾಲಿನಿಂದ ವಿಧಿಸಲು ಮುಂದಾಗಿದೆ.

3ನೇ ಪುಟ ನೋಡಿ

GITAM BENGALURU

TAKE YOUR FIRST STEP TOWARDS TRANSFORMATION

GITAM ADMISSION TEST (GAT)

LAST DATE TO REGISTER

27TH MARCH 2025

NAAC A++ ACCREDITED

Architecture | Engineering | Humanities | Law | Management

Medicine | Nursing | Paramedical | Pharmacy | Physiotherapy | Public Policy | Sciences

MERIT SCHOLARSHIPS AVAILABLE UP TO 100% THAT ALSO COVER FOOD AND ACCOMMODATION

BENGALURU | HYDERABAD | VISAKHAPATNAM

8884984000 www.gitam.edu

Scan the code to schedule your test

— ಇವರ ಮೂಲಕ ಒಂದು ಉಪಕ್ರಮ —

Horlicks Women's PLUS & Apollo DIAGNOSTICS

ಆಗಾಗ್ಗೆ ಬೆನ್ನಿನಲ್ಲಿ ಅಸಹನೀಯ ಎನಿಸುತ್ತದೆಯೇ?

ದುರ್ಬಲ ಮೂಳೆಗಳಾಗಿರಬಹುದು.

ಪಡೆಯಿರಿ ವಿಟಮಿನ್ ಡಿ ಪರೀಕ್ಷೆ

₹1850 ಕೇವಲ ₹199 ನಲ್ಲಿ

ಯಾವುದೇ ಅಪೊಲೊ ಡಯಾಗ್ನೋಸ್ಟಿಕ್ಸ್ ಪೇಶೆಂಟ್ ಕೇರ್ ಸೆಂಟರ್‌ಗೆ ಹೋಗಿ

ಅಪೊಲೊ 24|7 ನಲ್ಲಿ ನಿಮ್ಮ ಪರೀಕ್ಷೆಯನ್ನು ಬುಕ್ ಮಾಡಲು ಸ್ಕ್ಯಾನ್ ಮಾಡಿ

—ಇಲ್ಲಿ ಖರೀದಿಸಿ—
Apollo PHARMACY
Apollo 24|7

ಹೆಚ್ಚಿನ ವಿವರಗಳಿಗಾಗಿ 040 4444 2424 ಅನ್ನು ಡಯಲ್ ಮಾಡಿ

Creative Visualization. Terms and Conditions Apply. New Packaging Design as compared to the old pack. ¨Garg R et al. Int J Reprod Contracept Obstet Gynecol. 2018 Jun;7 (6):2222-2225. Applicable for women over age 30. Refer to pack for details. *Applicable for walk-in tests at all Apollo Diagnostic Centers. Additional ₹50 to be charged for home sample collections. Price may vary across cities. Offer valid from 1st March 2025 to 30th April 2025.

ಚಿನ್ನದ ದರದಲ್ಲಿ ಚಾರಿತ್ರಿಕ 'ಜಿಗಿತ'

ಬೆಂಗಳೂರು (ರಾಯಿಟರ್ಸ್): ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸುಂಕ ನೀತಿಯು ಜಾಗತಿಕ ಮಟ್ಟದಲ್ಲಿ ಆರ್ಥಿಕ ಅನಿಶ್ಚಿತ ಸ್ಥಿತಿಗೆ ಕಾರಣವಾಗಿದೆ. ಇದರಿಂದ ಅಂತರ-ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ಧಾರಣೆಯು ಏರಿಕೆಯ ಹಾದಿ ಹಿಡಿದಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರವು ಒಂದು ಔನ್ಸ್‌ಗೆ (28.34 ಗ್ರಾಂ) 3 ಸಾವಿರ ಡಾಲರ್‌ಗೆ (₹2.61 ಲಕ್ಷ) ಮುಟ್ಟಿದ್ದು, ಚಾರಿತ್ರಿಕ ದಾಖಲೆಯಾಗಿದೆ.

ಸುಂಕ ಸಮರದಿಂದಾಗಿ ಭಾರತವು ಸೇರಿ ಜಾಗತಿಕ ಷೇರುಪೇಟೆಗಳು ಇಳಿಕೆ ದಾಖಲಿಸುತ್ತಿವೆ.

ಇನ್ನಷ್ಟು ಸುದ್ದಿಗಳು 06

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಭಾನುವಾರದ ಉಷ್ಣಾಂಶ
35° ಗರಿಷ್ಠ 19° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಬಿಸಿಲು- ಮೋಡ ಕವಿದ ವಾತಾವರಣ ಇರಲಿದೆ.

ಸೋಮವಾರ	ಮಂಗಳವಾರ	ಬುಧವಾರ
35° 19°	35° 19°	35° 19°

ಸುಧಾ ಓದಿರಿ

ಶಾಲಾ ಮಾನ್ಯತೆ; ಅಂತಿಮ ಅವಕಾಶ

ಬೆಂಗಳೂರು: ಅನುಮತಿ ಪಡೆಯದೆ ನಡೆಸುತ್ತಿರುವ ಶಾಲೆಗಳ ಮಾನ್ಯತೆ ನವೀಕರಣಕ್ಕೆ ಶಾಲಾ ಶಿಕ್ಷಣ ಇಲಾಖೆ ಅಂತಿಮ ಅವಕಾಶ ನೀಡಿದೆ.

ಮಾನ್ಯತೆ ಪಡೆಯದ ಶಾಲೆಗಳಲ್ಲಿ ಪ್ರವೇಶ ಪಡೆದಿರುವ ಮಕ್ಕಳ ಶೈಕ್ಷಣಿಕ ಭವಿಷ್ಯದ ಹಿತದೃಷ್ಟಿಯಿಂದ ಏಚ್ಚರಿಕೆ ನೀಡಿ, ಮಾನ್ಯತೆ ನವೀಕರಣಕ್ಕೆ ಮತ್ತೊಂದು ಅವಕಾಶ ನೀಡಲಾಗಿದೆ. ಈ ಅವಕಾಶವನ್ನು ಮಾನ್ಯತೆ ಪಡೆಯದ ಎಲ್ಲ ಶಾಲೆಗಳೂ ಬಳಸಿಕೊಳ್ಳಬೇಕು. ನಿಗದಿತ ಮಾನದಂಡ ಅನುಸರಿಸಿ, ಮಾನ್ಯತೆ ಪಡೆಯಬೇಕು. ಇಲ್ಲದಿದ್ದರೆ ನೋಂದಣಿ ರದ್ದು ಮಾಡಲಾಗುವುದು. 2025-26ನೇ ಸಾಲಿನಲ್ಲಿ ಮಕ್ಕಳ ಪ್ರವೇಶಕ್ಕೆ ಅವಕಾಶ ನೀಡುವುದಿಲ್ಲ ಎಂದು ಆದೇಶದಲ್ಲಿ ವಿವರಿಸಲಾಗಿದೆ.

ನೈಋತ್ಯ ರೈಲ್ವೆ
ಇ-ಟೆಂಡರು ಸೂಚನೆ ಸಂ. Y/E.29/2024-25/92
ದಿನಾಂಕ: 06.03.2025
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಕೃಷ್ಣರಾಜನಗರ ರೈಲ್ವೆ ನಿಲ್ದಾಣದ ಲ್ಲಿರುವ ಪ್ಲಾಟ್‌ಫಾರ್ಮ್-01 ರಲ್ಲಿ ಅಳವಡಿಸಿರುವ ಮೆ. ಕಾಮಾಯಿ ತಯಾರಿತ ಲಿಫ್ಟ್‌ಗೆ 05 ವರ್ಷಗಳ ಅವಧಿಗೆ ಸಮಗ್ರವಾದ ವಾರ್ಷಿಕ ನಿರ್ವಹಣಾ ಒಪ್ಪಂದ (ಸಿಎಎಂಸಿ).	ರೂ. 4,23,813/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 27.03.2025, 11:00 ಗಂಟೆಯವರೆಗೆ
ಹೆಚ ಗಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಪರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್
PUB/839/AAF/PRB/SWR/2024-25 ಸಾಮಾನ್ಯ/ಮೈಸೂರು
South Western Railway - SWR | SWRRLY | SWRRLY

ನೈಋತ್ಯ ರೈಲ್ವೆ
ಇ-ಟೆಂಡರು ಸೂಚನೆ ಸಂ. Y/E.29/2024-25/96
ದಿನಾಂಕ: 10.03.2025
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಚಿಕ್ಕಜಾಜೂರು ಯಾರ್ಡ್‌ನಲ್ಲಿ ಪಾಯಿಂಟ್ 110 ಶಿಫ್ಟಿಂಗ್‌ಗಾಗಿ ಓಹೆಚ್‌ಇ ಮೇಲಿನ ಮಾರ್ಪಾಡು ಕೆಲಸಗಳು.	ರೂ. 10,58,421.78

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 01.04.2025, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಪರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್
PUB/844/AAF/PRB/SWR/2024-25 ಸಾಮಾನ್ಯ/ಮೈಸೂರು
South Western Railway - SWR | SWRRLY | SWRRLY

ನೈಋತ್ಯ ರೈಲ್ವೆ
ಇ-ಟೆಂಡರು ಸೂಚನೆ ಸಂ.: TeleA_SMVB_KJMDSL_BAND ದಿನಾಂಕ: 10.03.2025
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಬೆಂಗಳೂರು ವಿಭಾಗದ ಎಸ್‌ಎಂವಿಟಿ ನಿಲ್ದಾಣದಲ್ಲಿ ಹೊಸ ಬುಕಿಂಗ್ ಕಚೇರಿ, ನಿರೀಕ್ಷಣಾ ಸಭಾಂಗಣ & ವಿಶ್ರಾಂತಿ ಕೊಠಡಿಗೆ ಬೇಕಾದ ದೂರಸಂಪರ್ಕದ ವ್ಯವಸ್ಥೆ, ಕೃಷ್ಣರಾಜಪುರಂ ಡೀಸಲ್ ಲೋಕೋ ಶೆಡ್‌ನಲ್ಲಿ ಹೊಸ ಕಟ್ಟಡ, ಕಂಟ್ರೋಲ್ ರೂಂಗಳ ಅವಶ್ಯಕತೆಗಾಗಿ ಎಸ್‌ಟಿಟಿ ಮೂಲ ಸೌಕರ್ಯಗಳ ಮೇಲಿನ ಉನ್ನತೀಕರಣ, ಎಫ್‌ಟಿಐಎಸ್ / ಎಂಎಂಐಎಸ್‌ಗೆ ನೆರವಾಗುವಂತೆ ರೈಲ್‌ನೆಟ್ / ಇಂಟರ್‌ನೆಟ್‌ಗಳ ವ್ಯವಸ್ಥೆ, ಬಾಣಸವಾಡಿ ಮತ್ತು ಶೆಡ್ ನಲ್ಲಿ ರೈಲ್‌ನೆಟ್, ದೂರವಾಣಿ, ವೈಫೈ, ಸಿಸಿಟಿವಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಉಳಿದಿರುವ ಕೆಲಸಗಳು.	ರೂ. 68,26,545.44

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 01.04.2025, 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ವರಿಷ್ಠ ವಿಭಾಗೀಯ ಬ್ರಿಡ್ಜ್ & ದೂರಸಂಪರ್ಕ ಇಂಜಿನಿಯರ್
PUB/845/AAF/PRB/SWR/2024-25 ಬೆಂಗಳೂರು
South Western Railway - SWR | SWRRLY | SWRRLY

IN THE COURT OF THE HON'BLE SUBORDINATE JUDGE AT DENKANIKOTTAI
O.S No. 104 /2023

Mrs. K. ANITHA, W/o. K.V.Subba Reddy, Hindu, aged about 53 years, residing at Flat G3, Dilshan Classics Ats., Fathekhanpet Main Road, Nellore- 524 003, Andhra Pradesh State.
Represented by her SPA Holder: Mr. GURUVA REDDY, S/o. K.Dilip Reddy, aged about 65 years, residing at F-202, 239, Adithi, 16th Cross, 9th Main, Near Agarwal Bhavan, 6th Sector, HSR Layout, Bangalore-560 102, Karnataka State. ... **PLAINTIFF**

-V/s-

Mr. N. SIVA SHANKAR, S/o. N. Narayanaswamy, residing at No.424, Mangappa Layout, Near Siva Theatre, Koramangala, Bangalore- 560 095, Karnataka State. ... **DEFENDANT No. 4**

NOTICE

The plaintiff has filed the above case against you and others for the relief of declaration of title and permanent injunction. Inspite of repeated notice and summons from court, you have been purposely evaded to receive the notice and summons sent through court and post in the above case. The above suit is posted on **18.03.2025** for your appearance. Hence through this, it is informed to you that you should appear before the Honourable Subordinate Judge Court at Denkanikotta, Tamilnadu on **18.03.2025** at **10:30 A.M** either in person or through a counsel; failing which the Hon'ble Court shall pass ex-parte orders against you which may be noted.

(By order of the Court)

SHIRDI & Co.
Advocates & Consultants
K. ANANDA KUMAR
Nos.G1 & G2, AVS Towers, Opp Court Complex, Hosur-635 109.

ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ, ಸರ್ಕಾರದ ವಿರುದ್ಧ ಜೆಡಿಎಸ್ ಕಾರ್ಯಕರ್ತರ ಆಕ್ರೋಶ

'ಗ್ರೇಟರ್ ಬೆಂಗಳೂರು' ಮಸೂದೆಗೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯನ್ನು ಗ್ರೇಟರ್ ಬೆಂಗಳೂರು ಹೆಸರಿನಲ್ಲಿ ಏಳು ಭಾಗವಾಗಿ ವಿಭಜಿಸುವುದನ್ನು ವಿರೋಧಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಜೆಡಿಎಸ್ ಕಾರ್ಯಕರ್ತರು ಹಾಗೂ ಮುಖಂಡರು ಪ್ರತಿಭಟನೆ ನಡೆಸಿದರು.

ರಿಯಲ್ ಎಸ್ಟೇಟ್ ದಂಧೆಗೆ ಈ ಮೂಲಕ ಸರ್ಕಾರ ಬೆಂಬಲ ನೀಡುತ್ತಿದೆ ಎಂದು ಪ್ರತಿಭಟನಕಾರರು ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶವನ್ನು ಹೊರಹಾಕಿದರು.

ಜೆಡಿಎಸ್ ನಗರ ಘಟಕದ ಅಧ್ಯಕ್ಷ ಎಚ್.ಎಂ.ರಮೇಶ್‌ಗೌಡ, 'ಭೂದಂಧೆ ನಡೆಸುವ ಉದ್ದೇಶದಿಂದಲೇ ಗ್ರೇಟರ್ ಬೆಂಗಳೂರು ಮಾಡಲು ಹೊರಟಿದೆ. ಇದರಿಂದ ಬೆಂಗಳೂರಿನಲ್ಲಿ ಕನ್ನಡಿಗರೇ ಪರಕೀಯರಾಗುವ ಸಾಧ್ಯತೆಯಿದೆ' ಎಂದು ಹೇಳಿದರು.

'ವಿಧಾನ ಮಂಡಲದಲ್ಲಿ ಸರ್ಕಾರ ಗ್ರೇಟರ್ ಬೆಂಗಳೂರು ಮಸೂದೆಯನ್ನು ಮಂಡಿಸಿ ಅಂಗೀಕಾರ ಪಡೆದುಕೊಂಡಿದೆ. ರಾಜ್ಯಪಾಲರು ಯಾವುದೇ ಕಾರಣಕ್ಕೂ ಈ ಮಸೂದೆಗೆ ಸಹಿ ಹಾಕಬಾರದು. ತಿರಸ್ಕರಿಸಬೇಕು' ಎಂದು ಆಗ್ರಹಿಸಿದರು.

'ನಗರದ ಜನಸಂಖ್ಯೆ ಒಂದೂವರೆ ಕೋಟಿ ಇದೆ. ಕುಡಿಯುವ ನೀರಿಲ್ಲ, ಮೂಲಸೌಕರ್ಯಗಳಿಲ್ಲ. ರಸ್ತೆಗುಂಡಿಗಳ ಮುಚ್ಚಲು ಹಣವಿಲ್ಲ. ಈಗ ಗ್ರೇಟರ್ ಬೆಂಗಳೂರು ಹೆಸರಿನಲ್ಲಿ ಜನರನ್ನು ಯಾಮಾರಿಸಲು ಸರ್ಕಾರ ಹೊರಟಿದೆ' ಎಂದು ಆಕ್ರೋಶ ಹೊರಹಾಕಿದರು.

ವಿಧಾನ ಪರಿಷತ್ ಸದಸ್ಯ ಟಿ.ಎ.ಜವರಾಯಿ ಗೌಡ, ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಎ.ತಿಪ್ಪೇಸ್ವಾಮಿ, ಬೆಂಗಳೂರು ಜೆಡಿಎಸ್ ಮಹಿಳಾ ಘಟಕದ ಅಧ್ಯಕ್ಷೆ ಶೈಲಜಾರಾವ್, ಮುಖಂಡರಾದ ನಾಗೇಶ್ ರಾವ್, ವೆಂಕಟಸ್ವಾಮಿ, ವೇಣುಗೋಪಾಲ್, ಮಂಗಳಮ್ಮ ಪ್ರವೀಣ್ ಕುಮಾರ್ ಹಾಜರಿದ್ದರು.

'ಗ್ರೇಟರ್ ಬೆಂಗಳೂರು' ಮಸೂದೆಗೆ ವಿರೋಧ ವ್ಯಕ್ತಪಡಿಸಿ, ಜೆಡಿಎಸ್ ಮುಖಂಡರು, ಕಾರ್ಯಕರ್ತರು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟಿಸಿದರು

'ಬೆಂಗಳೂರು ಟೌನ್‌ಹಾಲ್' ಸಭೆಯಲ್ಲಿ ಚಿಂತಕ ಪ್ರಕಾಶ್ ಬೆಳವಾಡಿ ಮಾತನಾಡಿದರು

ಮಸೂದೆ: ಕಾನೂನು ಹೋರಾಟ ನಡೆಸಲು ತೀರ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಮಂಡಲದ ಉಭಯ ಸದನಗಳಲ್ಲಿ ಅಂಗೀಕಾರಗೊಂಡಿರುವ 'ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ-2024'ರ ವಿರುದ್ಧ ಕಾನೂನು ಹೋರಾಟ ನಡೆಸಲು 'ಬೆಂಗಳೂರು ಟೌನ್‌ಹಾಲ್' ಸಂಘಟನೆ ತೀರ್ಮಾನಿಸಿದೆ.

ಚಿಂತಕ ಪ್ರಕಾಶ್ ಬೆಳವಾಡಿ ನೇತೃತ್ವದಲ್ಲಿ ಶನಿವಾರ ನಡೆದ 'ಬೆಂಗಳೂರು ಟೌನ್‌ಹಾಲ್' ಸಭೆಯಲ್ಲಿ ಗ್ರೇಟರ್ ಬೆಂಗಳೂರು ಆಡಳಿತ ಪ್ರಾಧಿಕಾರ ಮಸೂದೆ, ಸುರಂಗ ರಸ್ತೆ ಸೇರಿದಂತೆ ಬೃಹತ್ ಯೋಜನೆಗಳ ಬಗ್ಗೆ ಚರ್ಚೆ ನಡೆಸಲಾಯಿತು.

'ಸದನದಲ್ಲಿ ಅಂಗೀಕಾರಗೊಂಡಿರುವ ಗ್ರೇಟರ್ ಬೆಂಗಳೂರು ಮಸೂದೆಗೆ ಅನುಮೋದನೆ ನೀಡಬಾರದು. ಮರು ಪರಿಶೀಲನೆಗೆ ಸರ್ಕಾರಕ್ಕೆ ಕಳುಹಿಸಿಕೊಡಬೇಕು' ಎಂದು ರಾಜ್ಯಪಾಲರನ್ನು ಭೇಟಿಯಾಗಿ ಮನವಿ ಸಲ್ಲಿಸಲು ನಿರ್ಧರಿಸಲಾಯಿತು.

'ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ ವಿರುದ್ಧ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸುವುದು. ಸುರಂಗ ರಸ್ತೆ ಯೋಜನೆ, ಸ್ಥಳೀಯ ಸಂಸ್ಥೆಗಳ ಚುನಾವಣೆ ವಿಳಂಬ ಸೇರಿ ಆಯಾ ಕ್ಷೇತ್ರದಲ್ಲಿ ತಜ್ಞರ ತಂಡ ರಚಿಸುವುದು, ಹೈಕೋರ್ಟ್, ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯಲ್ಲಿ ಹೋರಾಟ, ಸಾರ್ವಜನಿಕ ಜಾಲತಾಣಗಳಲ್ಲಿ ಮಸೂದೆ ಬಗ್ಗೆ ಜಾಗೃತಿ ಮೂಡಿಸಲು ತೀರ್ಮಾನಿಸಲಾಯಿತು.

ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ ವಿರುದ್ಧ ಸುಪ್ರೀಂ ಕೋರ್ಟ್‌ನ ಸಂವಿಧಾನಾತ್ಮಕ ಪೀಠಕ್ಕೆ ಅರ್ಜಿ ಸಲ್ಲಿಸಿ, ದೇಶಕ್ಕೆ ಅನ್ವಯವಾಗುವಂತೆ ಮಾರ್ಗಸೂಚಿ ನೀಡುವಂತೆ ಮನವಿ ಮಾಡಲು ಸಭೆಯಲ್ಲಿ ನಿರ್ಧರಿಸಲಾಯಿತು.

ನಾಯಿಯ ಮರ್ಮಾಂಗಕ್ಕೆ ಬ್ಲೇಡ್

ಬೆಂಗಳೂರು: ಬೀದಿನಾಯಿ ಮೇಲೆ ಹಲ್ಲೆ ನಡೆಸಿ, ಅದರ ಮರ್ಮಾಂಗಕ್ಕೆ ಬ್ಲೇಡ್‌ನಿಂದ ಕೊಯ್ದು ಗಾಯಗೊಳಿಸಿರುವ ಘಟನೆ ಜಯನಗರದ 11ನೇ ಮುಖ್ಯರಸ್ತೆಯ ಶಾಲಿನಿ ಮೈದಾನದಲ್ಲಿ ನಡೆದಿದೆ.

ಎಂ.ವಿದ್ಯಾರಾಣಿ ಅವರು ನೀಡಿದ ದೂರು ಆಧರಿಸಿ, ಜಯನಗರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಆರೋಪಿಗಳಿಗೆ ಹುಡುಕಾಟ ನಡೆಸುತ್ತಿದ್ದಾರೆ. ಶುಕ್ರವಾರ ಮಧ್ಯಾಹ್ನ ಘಟನೆ ನಡೆದಿದೆ.

'ನಾನು ಮೈದಾನದಲ್ಲಿದ್ದೆ. ರಾಮು ಹೆಸರಿನ ನಾಯಿ ಕಿರುಚುತ್ತಾ ಬಂದಿತ್ತು. ಅದೇ ವೇಳೆ ಇಬ್ಬರು ಆಟೊ ಏರಿ ಪರಾರಿಯಾದರು. ನಾಯಿ ಗಮನಿಸಿದಾಗ ಅದರ ಮರ್ಮಾಂಗಕ್ಕೆ ಕೊಯ್ದು ಗಾಯಗೊಳಿಸಿರುವುದು ಕಂಡುಬಂದಿತ್ತು. ಪಶು ವೈದ್ಯರಿಂದ ಚಿಕಿತ್ಸೆ ಕೊಡಿಸಲಾಯಿತು' ಎಂದು ವಿದ್ಯಾರಾಣಿ ನೀಡಿರುವ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಸರಣಿ ಅಪಘಾತ: ಕ್ಯಾಂಟರ್ ಚಾಲಕ ಸಾವು

ಬಾಪೂಜಿ ನಗರದಲ್ಲಿ ರಸ್ತೆ ಬದಿ ನಿಲ್ಲಿಸಿದ್ದ 8 ವಾಹನಗಳಿಗೆ ಡಿಕ್ಕಿ: ಇಬ್ಬರಿಗೆ ಗಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ರಸ್ತೆಯ ಬಾಪೂಜಿ ನಗರದ ಸ್ಯಾಟಲೈಟ್ ಬಸ್ ನಿಲ್ದಾಣದ ಬಳಿ ಶನಿವಾರ ನಸುಕಿನ ವೇಳೆ ಸಂಭವಿಸಿದ ಸರಣಿ ಅಪಘಾತದಲ್ಲಿ ಕ್ಯಾಂಟರ್ ಚಾಲಕ ಮೃತಪಟ್ಟಿದ್ದಾರೆ. ಇಬ್ಬರು ಗಾಯಗೊಂಡಿದ್ದಾರೆ.

ಜಗನ್ (44) ಮೃತಪಟ್ಟವರು. ಪಾದಚಾರಿ ಮನೋಜ್ (20) ಹಾಗೂ ಆಟೊ ಚಾಲಕ ಚಾಂದ್ ಪಾಷಾ (25) ಅವರು ಗಾಯಗೊಂಡಿದ್ದು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಶನಿವಾರ ಮುಂಜಾನೆ 3.50ರಿಂದ 4ರ ಮಧ್ಯೆ ಈ ಅಪಘಾತ ಸಂಭವಿಸಿದೆ. ಟ್ಯಾಂಕರ್ ಚಾಲಕ ವೇಗವಾಗಿ ವಾಹನವನ್ನು ಚಲಾಯಿಸಿಕೊಂಡು ಬರುತ್ತಿದ್ದ. ಮೈಸೂರು ವೃತ್ತದ ಕಡೆಯಿಂದ ಸ್ಯಾಟಲೈಟ್ ಬಸ್ ನಿಲ್ದಾಣದ ಬಳಿ ನಿಯಂತ್ರಣ ತಪ್ಪಿ ರಸ್ತೆಯ ಬದಿ ನಿಲುಗಡೆ ಮಾಡಿದ್ದ ನಾಲ್ಕು ಆಟೊ, ಎರಡು ಕಾರು, ಎರಡು ಬೈಕ್‌ಗಳಿಗೆ ಹಾಗೂ ರಸ್ತೆಬದಿ ಹೋಗುತ್ತಿದ್ದ ಪಾದಚಾರಿಗೆ ಡಿಕ್ಕಿ ಹೊಡೆದು ನಂತರ ರಸ್ತೆ ವಿಭಜಕಕ್ಕೆ ಗುದ್ದಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಒಟ್ಟು ಎಂಟು ವಾಹನಗಳಿಗೆ ಕ್ಯಾಂಟರ್ ಡಿಕ್ಕಿ ಹೊಡೆದಿದೆ. ಸರಣಿ ಅಪಘಾತದಿಂದ ಕ್ಯಾಂಟರ್ ಚಾಲಕನ ತಲೆ, ಕೈ ಹಾಗೂ ಕಾಲಿಗೆ ಗಂಭೀರ ಗಾಯವಾಗಿತ್ತು. ತಕ್ಷಣವೇ ಆತನನ್ನು ಸ್ಥಳೀಯರು ವಿಕ್ಟೋರಿಯಾ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗದಲ್ಲಿ ಜಗನ್ ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ಹೇಳಿದರು.

'ಕ್ಯಾಂಟರ್ ಚಾಲಕನ ಅಜಾಗರೂಕತೆ ಹಾಗೂ ನಿರ್ಲಕ್ಷ್ಯದಿಂದ ಅಪಘಾತ ವಾಗಿದೆ. ಚಾಲಕ ಮದ್ಯ ಸೇವಿಸಿ ವಾಹನ ಚಾಲನೆ ಮಾಡಿರುವ ಸಾಧ್ಯತೆಯಿದೆ' ಎಂದು ಪೊಲೀಸರು ಹೇಳಿದರು.

ಬ್ಯಾಟರಾಯನಪುರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮದ್ಯದ ನಶೆಯಲ್ಲಿ ಮಾರಾಮಾರಿ ಮೂವರು ಕಾರ್ಮಿಕರ ಸಾವು

ಅಪರಾಧ ಸುದ್ದಿ

ಪ್ರಜಾವಾಣಿ ವಾರ್ತೆ

ಆನೇಕಲ್: ನಶೆಯಲ್ಲಿ ಬಿಹಾರ ಮೂಲದ ಕಾರ್ಮಿಕರ ನಡುವೆ ನಡೆದ ಮಾರಾಮಾರಿ ಮೂವರ ಕೊಲೆಯಲ್ಲಿ ಅಂತ್ಯವಾಗಿದೆ. ತಾಲ್ಲೂಕಿನ ಸರ್ಜಾಪುರ ತಿಂಡ್ಲು ಗೇಟ್ ಸಮೀಪದ ಫ್ಲೋರ್ ವಾಲ್ ಅವಿನ್ಯೂ ಅಪಾರ್ಟ್‌ಮೆಂಟ್‌ನಲ್ಲಿ ಶನಿವಾರ ನಡೆದಿದೆ.

ಘಟನೆಯಲ್ಲಿ ಬಿಹಾರದ ಅನ್ಸು (19), ರಾಧೆ ಶ್ಯಾಮ್ (22) ಕೊಲೆಯಾದವರು. ಮತ್ತೊಬ್ಬರ ಗುರುತು ಪತ್ತೆಯಾಗಿಲ್ಲ. ಸರ್ಜಾಪುರ ಪೊಲೀಸ್ ಪ್ರಕರಣ ದಾಖಲಾಗಿದೆ.

ಹೋಳಿ ಆಚರಣೆ ವೇಳೆ ನಡೆದ ಗಲಾಟೆ ವಿಕೋಪಕ್ಕೆ ಹೋಗಿ ಮದ್ಯದ ಬಾಟಲಿಗಳಿಂದ ಹೊಡೆದಾಡಿಕೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮತ್ತೊಬ್ಬ ವ್ಯಕ್ತಿಗೆ ಗಂಭೀರ ಗಾಯವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಗಾಯಾಳುವನ್ನು ವಶಕ್ಕೆ ಪಡೆದು ಪೊಲೀಸರು ವಿಚಾರಣೆ ನಡೆಸಿದರು. ಹೋಳಿ ಹಿನ್ನೆಲೆಯಲ್ಲಿ ಮದ್ಯದ ಪಾರ್ಟಿ ವೇಳೆ ಜಗಳ ನಡೆದಿದೆ. ಕೈಗೆ ಸಿಕ್ಕ ದೊಣ್ಣೆ, ರಾಡ್ ಮತ್ತು ಮದ್ಯದ ಬಾಟಲಿನಿಂದ ಹೊಡೆದಾಡಿಕೊಂಡಿದ್ದಾರೆ ಎಂದು ತಿಳಿಸಿದ್ದಾರೆ.

ಇನ್‌ಸ್ಪೆಕ್ಟರ್ ಹೆಸರಿನಲ್ಲಿ ನಕಲಿ ಕಾರ್ಡ್, ಬಂಧನ

ಬೆಂಗಳೂರು: ಪೊಲೀಸ್ ಇನ್‌ಸ್ಪೆಕ್ಟರ್ ಹೆಸರಿನಲ್ಲಿ ನಕಲಿ ಕಾರ್ಡ್ ಮಾಡಿಸಿಕೊಂಡಿದ್ದ ಕೋರಮಂಗಲ ಒಂದನೇ ಬ್ಲಾಕ್‌ನ ಟೀಚರ್ಸ್ ಕಾಲೊನಿಯ ನಿವಾಸಿ ಎಸ್.ಆನಂದ ಎಂಬಾತನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಪಶ್ಚಿಮ ವಿಭಾಗದ ಸಿಸಿಬಿಯ ಸಂಘಟಿತ ಅಪರಾಧ ದಳದ ಇನ್‌ಸ್ಪೆಕ್ಟರ್ ಕೆ.ಎಸ್.ದೇವೇಂದ್ರಪ್ಪ ಅವರಿಗೆ ಬಂದ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

'ಬೆಂಗಳೂರು ನಗರ ಪೊಲೀಸ್ ಘಟಕದ ಪೊಲೀಸ್ ಇನ್‌ಸ್ಪೆಕ್ಟರ್ ಎಂದು ನಕಲಿಯಾಗಿ ಐ.ಡಿ ಕಾರ್ಡ್ ಮಾಡಿಸಿಕೊಂಡಿದ್ದ. ನಕಲಿ ಕಾರ್ಡ್ ಅನ್ನು ಆರೋಪಿ ದುರುಪಯೋಗ ಪಡಿಸಿಕೊಂಡಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದು ಮೂಲಗಳು ತಿಳಿಸಿವೆ.

ಎ.4ಕ್ಕೆ ನಿವೃತ್ತ ನೌಕರರ ಸಮಾವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘವು ಏಪ್ರಿಲ್ 4ರಂದು ಬೆಳಿಗ್ಗೆ 10 ಗಂಟೆಗೆ ಅರಮನೆ ಮೈದಾನದ ಪ್ರಿನ್ಸ್ ಶ್ರೀನಿವಾಸ್‌ನಲ್ಲಿ ರಾಜ್ಯಮಟ್ಟದ ಕಾರ್ಯಾಗಾರ ಹಾಗೂ ಸಮಾವೇಶ ಹಮ್ಮಿಕೊಂಡಿದೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಈ ಕುರಿತು ವಿವರ ನೀಡಿದ ಸಂಘದ ಅಧ್ಯಕ್ಷ ಎಲ್. ಭೈರಪ್ಪ, 'ಕಾರ್ಯಾಗಾರ, ಸಮಾ ವೇಶವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಲಿದ್ದಾರೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸ್ಮರಣ ಸಂಚಿಕೆ ಬಿಡುಗಡೆ ಮಾಡುತ್ತಾರೆ. ಸಚಿವರಾದ ರಾಮಲಿಂಗಾರೆಡ್ಡಿ, ಸಚಿವ ಎಚ್.ಸಿ. ಮಹದೇವಪ್ಪ, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ರಾಜ್ಯ ಸರ್ಕಾರಿ ನೌ

ಎರಡು ದಿನದಲ್ಲಿ ಬಾಕಿ ಉಳಿದಿರುವ ತ್ಯಾಜ್ಯ ವಿಲೇವಾರಿ: ಬಿಎಸ್‌ಡಬ್ಲ್ಯುಎಂಎಲ್

ತ್ಯಾಜ್ಯ: ಬಗೆಹರಿದ ಸಮಸ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಿಟ್ಟಗಾನಹಳ್ಳಿ ಭೂಭರ್ತಿ ಪ್ರದೇಶದಲ್ಲಿನ ಸಮಸ್ಯೆಗಳನ್ನು ಪರಿಹರಿಸಲು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ (ಬಿಎಸ್‌ಡಬ್ಲ್ಯುಎಂಎಲ್) ಭರವಸೆ ನೀಡಿದ್ದು, ಕಾಂಪ್ಯಾಕ್ಟರ್ ಗಳಲ್ಲಿನ ತ್ಯಾಜ್ಯ ವಿಲೇವಾರಿ ಶನಿವಾರ ಆರಂಭವಾಗಿದೆ.

'ಅವೈಜ್ಞಾನಿಕವಾಗಿ ಎಲ್ಲ ರೀತಿಯ ತ್ಯಾಜ್ಯವನ್ನು ತಂದು ಸರಿಯಲಾಗುತ್ತಿದೆ. ದುರ್ನಾತದ ಜೊತೆಗೆ ದ್ರವತ್ಯಾಜ್ಯದ ಸಮಸ್ಯೆ ಹೆಚ್ಚಾಗಿದೆ. ಇವುಗಳಿಗೆ ಪರಿಹಾರ ನೀಡಬೇಕು' ಎಂದು ಆಗ್ರಹಿಸಿ ಕಣ್ಣೂರು ಗ್ರಾಮ ಪಂಚಾಯಿತಿ ಸದಸ್ಯರು ಮಿಟ್ಟಗಾನಹಳ್ಳಿ ಭೂಭರ್ತಿ ಪ್ರದೇಶದಲ್ಲಿ ತ್ಯಾಜ್ಯ ವಿಲೇವಾರಿ ಪ್ರಕ್ರಿಯೆಯನ್ನು ಮಂಗಳವಾರದಿಂದ (ಮಾರ್ಚ್ 11) ತಡೆಹಿಡಿದಿದ್ದರು.

ಶಾಸಕರು ಹಾಗೂ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಅಧಿಕಾರಿಗಳೊಂದಿಗೆ ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳು ಮೂರು ದಿನದಿಂದ ನಡೆಸಿದ್ದ ಮಾತುಕತೆ ಬಹುತೇಕ ಫಲ ನೀಡಿದೆ. ಶನಿವಾರ ಮಧ್ಯಾಹ್ನ ಕಾಂಪ್ಯಾಕ್ಟರ್‌ಗಳಲ್ಲಿನ ತ್ಯಾಜ್ಯವನ್ನು ಭೂಭರ್ತಿಗೆ ಸುರಿಯುವ ಕಾರ್ಯ ಆರಂಭವಾಗಿದೆ.

ಭರವಸೆಗಳೇನು?: 'ಮಿಟ್ಟಗಾನಹಳ್ಳಿ ಭೂಭರ್ತಿ ಪ್ರದೇಶದಲ್ಲಿರುವ ದ್ರವತ್ಯಾಜ್ಯವನ್ನು ಹೊರಹಾಕಬೇಕು, ಸುತ್ತಮುತ್ತಲಿನ ಕೆರೆಗಳಲ್ಲಿರುವ ದ್ರವತ್ಯಾಜ್ಯದ ಜೊತೆಗೆ ಹೂಳುತೆಗೆದು ಅಭಿವೃದ್ಧಿಮಾಡಿ ಕೊಡಬೇಕು, ಭೂಭರ್ತಿ ಪ್ರದೇಶದ ಸುತ್ತ ಮುತ್ತಲಿನ ಹಳ್ಳಿಗಳಿಗೆ ಮೂಲಸೌಕರ್ಯ ಕಲ್ಪಿಸಬೇಕು ಎಂದು ಒತ್ತಾಯಿಸಲಾಗಿತ್ತು

ಈ ಬೇಡಿಕೆಗಳಿಗೆ ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳು ಬಹುತೇಕ ಒಪ್ಪಿದ್ದಾರೆ' ಎಂದು ಕಣ್ಣೂರು ಗ್ರಾಮ ಪಂಚಾಯಿತಿ ಅಧ್ಯಕ್ಷ ಎಸ್. ಅಶೋಕ್ ತಿಳಿಸಿದರು.

'ಭರವಸೆಗಳ ಬಗ್ಗೆ ಮಾತಿನ ಆಶ್ವಾಸನೆ ಬೇಡ, ಸರ್ಕಾರಿ ಆದೇಶವಾಗಲಿ ಎಂದು ನಾವು ಪಟ್ಟು ಹಿಡಿದಿದ್ದೇವೆ. ಅದಕ್ಕೆ ಸಮಯಾವಕಾಶ ಬೇಕು ಎಂದು ಕೇಳಿದ್ದಾರೆ' ಎಂದು ತಿಳಿಸಿದರು.

ಶೀಘ್ರ ವಿಲೇವಾರಿ: 'ಮಿಟ್ಟಗಾನಹಳ್ಳಿ ಭೂಭರ್ತಿ ಪ್ರದೇಶದಲ್ಲಿ ಕಾಂಪ್ಯಾಕ್ಟರ್‌ಗಳು ತ್ಯಾಜ್ಯ ವಿಲೇವಾರಿ ಮಾಡುತ್ತಿದ್ದು, ನಗರದ ಕೆಲವು ಭಾಗಗಳಲ್ಲಿ ಉಳಿದಿರುವ ಕಸವನ್ನು ಇನ್ನೆರಡು ದಿನಗಳಲ್ಲಿ ಸ್ವಚ್ಛಗೊಳಿಸುತ್ತೇವೆ. ಸೋಮವಾರದ ನಂತರ ತ್ಯಾಜ್ಯ ವಿಲೇವಾರಿ ಕಾರ್ಯ ಸಾಮಾನ್ಯ ಸ್ಥಿತಿಗೆ ಮರಳಲಿದೆ' ಎಂದು ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳು ತಿಳಿಸಿದರು.

ದ್ರವತ್ಯಾಜ್ಯ ವಿಲೇವಾರಿಗೆ ಕ್ರಮ: 'ಮಿಟ್ಟಗಾನಹಳ್ಳಿ ಭೂಭರ್ತಿಯಲ್ಲಿ ತ್ಯಾಜ್ಯ ವಿಲೇವಾರಿ ಆಗುತ್ತಿದೆ. ಅಲ್ಲಿನ ಜನರಿಗೆ ಅಭಿವೃದ್ಧಿಯ ಭರವಸೆ ನೀಡಿದ್ದೇವೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

' ಭೂಭರ್ತಿ ಪ್ರದೇಶದಲ್ಲಿ ದ್ರವತ್ಯಾಜ್ಯ ಸ್ವಚ್ಛಗೊಳಿಸಲು ಟೆಂಡರ್ ಆಹ್ವಾನಿಸಲಾಗುತ್ತದೆ. ಇನ್ನೆರಡು ವರ್ಷದಲ್ಲಿ ಅದನ್ನು ವಿಲೇವಾರಿ ಮಾಡಲಾಗುತ್ತದೆ' ಎಂದರು.

ರುಕ್ಮಿಣಿ ಕಾಲೊನಿಯಲ್ಲಿ ತ್ಯಾಜ್ಯ ತುಂಬಿದ್ದ ಆಟೊ ಟಿಪ್ಪರ್‌ಗಳ ಕೆಳಗೂ ಕಸ ತುಂಬಿದ್ದು ಶನಿವಾರ ಮಧ್ಯಾಹ್ನ ಕಂಡುಬಂತು –ಪ್ರಜಾವಾಣಿ ಚಿತ್ರ

'ಕಾವೇರಿ ನೀರಿಗೆ ಬೇಡಿಕೆ'

ಎಸ್. ಅಶೋಕ್

'ಮಿಟ್ಟಗಾನಹಳ್ಳಿ ಭೂಭರ್ತಿ ಪ್ರದೇಶ ಸುತ್ತಲಿರುವ ಮಿಟ್ಟಗಾನಹಳ್ಳಿ, ಬೆಳ್ಳಹಳ್ಳಿ, ಕಣ್ಣೂರು, ಬಂಡೆ ಹೊಸೂರಿಗೆ ಕಾವೇರಿ ನೀರು ಸರಬರಾಜು ಮಾಡಬೇಕು ಎಂದು ಒತ್ತಾಯಿಸಿದ್ದೇವೆ' ಎಂದು ಕಣ್ಣೂರು ಗ್ರಾಮ ಪಂಚಾಯಿತಿ ಅಧ್ಯಕ್ಷ ಎಸ್. ಅಶೋಕ್ ತಿಳಿಸಿದರು.

'ಬಿಬಿಎಂಪಿ ವ್ಯಾಪ್ತಿಯಲ್ಲಿ ಇಲ್ಲದ ಕಾರಣ ನೀರು ಕೊಡಲು ಸಾಧ್ಯವಿಲ್ಲ ಎಂದಿದ್ದಾರೆ. ನಗರದ ಕಸವನ್ನು ಸುರಿದು, ಕೆರೆ, ಅಂತರ್ಜಲ ಸೇರಿದಂತೆ ಜಲಮೂಲಗಳನ್ನು ಹಾಳು ಮಾಡಿದ್ದೀರಿ. ಕುಡಿಯಲು ನೀರು ಕೊಡಲೇಬೇಕು ಎಂದು ಆಗ್ರಹಿಸಿದ್ದೇವೆ. ಇದು ಸರ್ಕಾರದ ಮಟ್ಟದಲ್ಲಿ ನಿರ್ಧಾರವಾಗಬೇಕಿದೆ. ಅದಕ್ಕೂ ಸಮಯ ಬೇಕು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ತ್ಯಾಜ್ಯ ನಿರ್ವಹಣೆಗೆ ಬಳಕೆದಾರರ ಶುಲ್ಕ

ಸರ್ಕಾರದ ಅನುಮೋದನೆ: ಏಪ್ರಿಲ್ 1ರಿಂದಲೇ ಜಾರಿ: ತುಷಾರ್ ಗಿರಿನಾಥ್

ವಾಣಿಜ್ಯ ಬಳಕೆದಾರರ ಶುಲ್ಕ ಪ್ರತಿವರ್ಷ ಶೇ 5ರಷ್ಟು ಹೆಚ್ಚಳ

2025-26ನೇ ಸಾಲಿನಿಂದ ತ್ಯಾಜ್ಯ ನಿರ್ವಹಣೆ ಬಳಕೆದಾರರ ಶುಲ್ಕ ಜಾರಿಯಾಗುವ ನಿರೀಕ್ಷೆಯಿದೆ. ವಾಣಿಜ್ಯ ಕಟ್ಟಡ, ಸಂಸ್ಥೆಗಳಿಗೆ ತ್ಯಾಜ್ಯದ ಬಳಕೆದಾರರ ಶುಲ್ಕ, ಪ್ರತಿ ವರ್ಷದ ಏಪ್ರಿಲ್ 1ರಿಂದ ಶೇ 5ರಷ್ಟು ಹೆಚ್ಚಾಗಲಿದೆ.

ತುಷಾರ್ ಗಿರಿನಾಥ್

100 ಕೆ.ಜಿಗಿಂತಲೂ ಹೆಚ್ಚು ತ್ಯಾಜ್ಯ ಉತ್ಪಾದನೆಯಾಗುವ (ಬಲ್ಕ್ ಜನರೇಟರ್) ಕಟ್ಟಡಗಳು, ತಮ್ಮದೇ ಸಂಸ್ಕರಣಾ ವ್ಯವಸ್ಥೆ ಹೊಂದಿರದಿದ್ದರೆ ಪ್ರತಿ ಕೆ.ಜಿಗೆ ₹12 ಬಳಕೆದಾರರ ಶುಲ್ಕ ವಿಧಿಸಲಾಗುತ್ತದೆ.

ಪ್ರತಿ ವರ್ಷ ಪ್ರತಿ ಕೆ.ಜಿಗೆ ₹5 ಹೆಚ್ಚಳವಾಗಲಿದೆ. ಬಿಎಸ್‌ಡಬ್ಲ್ಯುಎಂಎಲ್ ತ್ಯಾಜ್ಯ ಸಂಗ್ರಹಿಸಿ, ಸಾಗಿಸಿ, ಸಂಸ್ಕರಣೆಯನ್ನು ಮಾಡುತ್ತದೆ. ಬಲ್ಕ್ ಜನರೇಟರ್ ಸ್ಥಳಗಳಲ್ಲಿ ತಮ್ಮದೇ ಸಂಸ್ಕರಣೆ ಘಟಕಗಳನ್ನು ಹೊಂದಿದ್ದರೆ, ಅಲ್ಲಿಂದ ಸಂಗ್ರಹಿಸುವ ತ್ಯಾಜ್ಯಕ್ಕೆ ಶೇ 50ರಷ್ಟು ರಿಯಾಯಿತಿ ನೀಡಲು ನಿರ್ಧರಿಸಲಾಗಿದೆ.

ಯಾರಿಗೆ ಎಷ್ಟು ಬಳಕೆದಾರರ ಶುಲ್ಕ?

ಕಟ್ಟಡ ವಿಸ್ತೀರ್ಣ	ಶುಲ್ಕ (ಪ್ರತಿ 30ಗಳಿ)
600 ಚದರಡಿವರೆಗೆ	₹10
600 ಚದರಡಿಯಿಂದ 1,000 ಚದರಡಿ	₹50
1,000 ಚದರಡಿಯಿಂದ 2,000 ಚದರಡಿ	₹100
2,000 ಚದರಡಿಯಿಂದ 3,000 ಚದರಡಿ	₹150
3,000 ಚದರಡಿಯಿಂದ 4,000 ಚದರಡಿ	₹200
4,000 ಚದರಡಿಗಿಂತ ಹೆಚ್ಚು	₹400

ಒಂದನೇ ಪುಟದಿಂದ...

ಕಳೆದ ವರ್ಷ ಸಲ್ಲಿಸಲಾಗಿದ್ದ ಪ್ರಸ್ತಾವಕ್ಕೆ, ರಾಜ್ಯ ಸರ್ಕಾರ ಅನುಮೋದನೆ ನೀಡಿದೆ.

ನಗರದಲ್ಲಿ ತ್ಯಾಜ್ಯ ಸಮಸ್ಯೆಯನ್ನು ಸಂಪೂರ್ಣವಾಗಿ ನಿವಾರಿಸಲು ಸಾಧ್ಯವಾಗಿಲ್ಲ. ಹೀಗಾಗಿ ಬಳಕೆದಾರರ ಶುಲ್ಕ ವಿಧಿಸುವುದು ಬೇಡ' ಎಂದು 2019ರಲ್ಲಿ ನಡೆದ ಬಿಬಿಎಂಪಿ ಕೌನ್ಸಿಲ್‌ನಲ್ಲಿ ಸದಸ್ಯರು ವಿರೋಧ ವ್ಯಕ್ತಪಡಿಸಿದ್ದರು. ಸದಸ್ಯರ ಒತ್ತಾಯದಿಂದ ಆಗ ಬಳಕೆದಾರರ ಶುಲ್ಕ ವಿಧಿಸುವುದನ್ನು ಕೈಬಿಡಲಾಗಿತ್ತು.

2020ರ ಸೆಪ್ಟೆಂಬರ್‌ನಿಂದ ಬಿಬಿಎಂಪಿಗೆ ಕಾರ್ಪೊರೇಟರ್‌ಗಳಿಲ್ಲ. ಹೀಗಾಗಿ, ಅಧಿಕಾರಿಗಳ ನಿರ್ಧಾರವೇ ಅಂತಿಮವಾಗಿದೆ.

ಆಸ್ತಿ ತೆರಿಗೆಯೊಂದಿಗೆ ಶೇ 10ರಷ್ಟು ಘನತ್ಯಾಜ್ಯ ಉಪಕರವನ್ನು ಈಗಾಗಲೇ ಸಂಗ್ರಹಿಸಲಾಗುತ್ತಿದೆ. ಮತ್ತೊಂದು ಕಾಲಂ ಸೃಷ್ಟಿಸಿ ಬಳಕೆದಾರರ ಶುಲ್ಕವನ್ನು ಸಂಗ್ರಹಿಸಲಾಗುತ್ತದೆ.

ನಗರದಲ್ಲಿ ಇಂದು

ಸಂತ ತುಕಾರಾಂ ಮಹಾರಾಜರ ಸಪ್ತಾಹ: ಕಾಕಡಾರತಿ, ಅಭಿಷೇಕ, ಪಂಡರಿ ಭಜನೆ, ಗಾಥಾ ಪಲ್ಲಕ್ಕಿ ಉತ್ಸವ, ಭಜನೆ-ಕೀರ್ತನೆ, ಆಯೋಜನೆ ಮತ್ತು ಸ್ಥಳ: ನಂಜುಂಡೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್, ರಂಗಸ್ವಾಮಿ ಗುಡಿಬೀದಿ, ಗುಡುಮೈಯ್ಯನಪೇಟೆ, ಆರ್.ಟಿ. ಸ್ಟ್ರೀಟ್, ಬೆಳಿಗ್ಗೆ 5.30ರಿಂದ ರಾತ್ರಿ 9ರವರೆಗೆ

'ಎಲ್ಲರೊಳಗೊಂದಾಗು', 'ಬಿ ಒನ್ ವಿತ್ ದಿ ಯೂನಿವರ್ಸ್' ಪುಸ್ತಕ ಬಿಡುಗಡೆ: ಗುರುರಾಜ ಕರಜಗಿ, ಉಪನ್ಯಾಸ: ಬಿ.ಎನ್. ಶಶಿಕಿರಣ್, ಸನ್ಮಾನ: ನಾ. ಉದಯಶಂಕರ, ವಿನಯ ಕುಮಾರ್ ಎಂ., ಉಪಸ್ಥಿತಿ: ಸತ್ಯೇಶ್ ಎನ್. ಬೆಳ್ಮೂರ್, ಬಿ.ಜಿ. ಗುಜ್ವಾರಪ್ಪ, ಸಿ. ಕನಕರಾಜು, ಆಯೋಜನೆ: ಡಿವಿಜಿ ಬಳಗ ಪ್ರತಿಷ್ಠಾನ, ಸ್ಥಳ: ಮಿಥಿಕ್ ಸೊಸೈಟಿ, ಅಂಬೇಡ್ಕರ್ ವೀಧಿ, ಬೆಳಿಗ್ಗೆ 9

ಪುರುಷೋತ್ತಮ ದಾಸ್ ಹೆಗ್ಗಡೆ ಅವರ 'ಯಯಾತಿ' ಕಾದಂಬರಿ ಬಿಡುಗಡೆ: ಅಧ್ಯಕ್ಷತೆ: ಬಂಜಗೆರೆ ಜಯಪ್ರಕಾಶ್, ಕೃತಿ ಬಗ್ಗೆ ಮಾತು: ಎಚ್. ದಂಡಪ್ಪ, ಮುಖ್ಯ ಅತಿಥಿ: ಎಂ.ಮಂಜುಳ, ಆಯೋಜನೆ: ವಂಶಿ ಪಬ್ಲಿಕೇಷನ್ಸ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ 9.30

66ನೇ 'ಆರ್ಗಾನಿಕ್ ಸಂತೆ': ಅತಿಥಿಗಳು: ಹಂ.ಪ. ನಾಗರಾಜಯ್ಯ, ಆರತಿ ಎಚ್.ಎನ್., ನೃತ್ಯ ಪ್ರದರ್ಶನ: ರಕ್ಷಾ ರಾಮ್ ಕುಡ್ವ, ಆಯೋಜನೆ ಹಾಗೂ ಸ್ಥಳ: ದಿ ಗ್ರೀನ್ ಪಾತ್, ಮಲ್ಲೇಶ್ವರ, ಬೆಳಿಗ್ಗೆ 9.30

ಮಣಿ ಷಡಕ್ಷರಿ ಅವರ ಸ್ಮರಣಾರ್ಥ ಭಗವಾನ್ ರಮಣ ಮಹರ್ಷಿ ಅವರ ಕುರಿತು ವಿಶೇಷ ಉನ್ಮಾಸ ಮತ್ತು ಸಂಗೀತ ಕಾರ್ಯಕ್ರಮ: ಉಪನ್ಯಾಸ: ಸ್ವಾಮಿ ಆದಿತ್ಯಾನಂದಜೀ, ಸಿ. ಸೋಮಶೇಖರ, ಹಿರೇಮಗಳೂರು ಕಣ್ಣನ್, ಕೃಷ್ಣೇಗೌಡ, ಅಧ್ಯಕ್ಷತೆ: ಶಾರದಾ ನಟರಾಜನ್, ಆಯೋಜನೆ: ರಮಣ ಮಹರ್ಷಿ ಸೆಂಟರ್ ಫಾರ್ ಲರ್ನಿಂಗ್, ರಮಣಶ್ರೀ ಪ್ರತಿಷ್ಠಾನ, ಸ್ಥಳ: ರಮಣ ಮಹರ್ಷಿ ದೇವಸ್ಥಾನ, ಮೇಖ್ರಿ ವೃತ್ತ, ಬೆಳಿಗ್ಗೆ 9.30

ಶೇಷಗಿರಿ ಹಾನಗಲ್ ಮತ್ತು ಜಾಕಿರ್ ಹುಸೇನ್ ಅವರಿಗೆ ನಾದ ನಮನ: ಡ್ರಮ್ ವಾದನ: ಮಂಜುನಾಥ್ ಸತ್ಯಶೀಲ್, 'ಸ್ವರಾಂಜಲಿ' ಉಪನ್ಯಾಸ: ಚಿರಂಜೀವಿ ಸಿಂಘ್, ಲಯ ಲಾವಣ್ಯ: ಅನೂರು ಅನಂತಕೃಷ್ಣ ಶರ್ಮ, ವಾದ್ಯ ವೈವಿಧ್ಯ: ಗುರುಮೂರ್ತಿ ವೈದ್ಯ ಮತ್ತು ಶಿಷ್ಯರು, ತಾಳ ಸುರಭಿ: ಎಸ್.ಮಧುಸೂದನ, ಪ್ರವೀಣ್ ಡಿ. ರಾವ್, ತಬಲಾ: ಅನೀಶ್ ಪ್ರಧಾನ್, ಲೆಹರಾ: ಸರ್ಫರಾಜ್ ಖಾನ್, ಆಯೋಜನೆ: ಶ್ರೀ ರಾಮ ಕಲಾ ವೇದಿಕೆ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಸವನಗುಡಿ, ಬೆಳಿಗ್ಗೆ 9.30ರಿಂದ

ಎಂ.ಆರ್. ದೊರೆಸ್ವಾಮಿ

ಎಂ.ಆರ್. ದೊರೆಸ್ವಾಮಿ ಅವರಿಗೆ ಶ್ರದ್ಧಾಂಜಲಿ: ಆಯೋಜನೆ: ಪಿಇಎಸ್ ವಿಶ್ವವಿದ್ಯಾಲಯ, ಸ್ಥಳ: ಗಾರ್ಡೇನಿಯಾ, ವೈಟ್ ಪೆಟಲ್ಸ್, ಗೇಟ್ ಸಂಖ್ಯೆ 3, ಅರಮನೆ ಮೈದಾನ, ಮಧ್ಯಾಹ್ನ 12

ದಶಮಾನೋತ್ಸವ ಸಮಾರಂಭ: ಉದ್ಘಾಟನೆ: ರುದ್ರಣ ಹರ್ತಿಕೋಟೆ, ಅಧ್ಯಕ್ಷತೆ: ಡಬ್ಲ್ಯು.ಕೆ. ವೆಂಕಟೇಶಮೂರ್ತಿ, ಆಯೋಜನೆ: ಸಿರಿಗನ್ನಡ ಮಿತ್ರ ತಂಡ, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಮಧ್ಯಾಹ್ನ 3.30

ಮಹಿಳಾ ದಿನಾಚರಣೆ ಮತ್ತು ಚೇತನಾ ಹೆಗಡೆ ಅವರ 'ಸ್ತ್ರೀ ಅಸ್ಮಿತೆ: ವಿಭಿನ್ನ ನೆಲೆಗಳು' ಪುಸ್ತಕ ಬಿಡುಗಡೆ: ಪುಸ್ತಕದ ಬಗ್ಗೆ ಮಾತು: ಎಲ್.ಜಿ.ಮೀರಾ, 'ಅವಳ ಅರಿವು...' ಉಪನ್ಯಾಸ: ಎಂ.ಎಸ್. ಆಶಾದೇವಿ, ಉಪಸ್ಥಿತಿ: ದೀಪಾ ಫಡ್ಕೆ, ಆಯೋಜನೆ: ಶಿವರಾಮ ಕಾರಂತ ವೇದಿಕೆ, ಸ್ಥಳ: ತರಳಬಾಳು ಮಿನಿ ಸಭಾಂಗಣ, ತರಳಬಾಳು ಕೇಂದ್ರ, ಬಿಡಿಎ ಕಾಂಪ್ಲೆಕ್ಸ್ ಬಳಿ, ಆರ್.ಟಿ. ನಗರ, ಸಂಜೆ 4

ದ್ವಿಭಾಷಾ ನೀತಿಗಾಗಿ ಹೋರಾಟ, ಸಾರ್ವಜನಿಕ ಹಕ್ಕೊತ್ತಾಯ ಸಭೆ: ಹಕ್ಕೊತ್ತಾಯ ಮಂಡನೆ: ರಮೇಶ್ ಬೆಲ್ಲಂಕೊಂಡ, ಆನಂದ್, ಸಾರ್ವಜನಿಕ ಸಂವಾದ: ಕವಿರಾಜ್, ಬಿ.ಎಂ.ಗಿರಿರಾಜ್, ಉಪಸ್ಥಿತಿ: ಪುರುಷೋತ್ತಮ ಬಿಳಿಮಲೆ, ಆಯೋಜನೆ: ನಮ್ಮ ನಾಡು ನಮ್ಮ ಆಳ್ವಿಕೆ, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 4

'ತ್ರಿಪುರ: ಅಂದು-ಇಂದು' ಸಂವಾದ: ಸಮನ್ವಯ: ಮಾವಳ್ಳಿ ಶಂಕರ್, ಸಂವಾದದಲ್ಲಿ: ಜಿತೇಂದ್ರ ಚೌಧುರಿ, ಆಯೋಜನೆ: ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ, ಸ್ಥಳ: ಎಸ್.ಸಿ.ಎಂ.ಹೌಸ್, ಸುಬ್ಬಯ್ಯ ವೃತ್ತ, ಸಂಜೆ 5

ಭರತನಾಟ್ಯ ರಂಗಪ್ರವೇಶ: ಕೀರ್ತನಾ ಶಶಿಕುಮಾರ್, ಮುಖ್ಯ ಅತಿಥಿಗಳು: ವೀಣಾ ಮೂರ್ತಿ ವಿಜಯ್, ರೂಪಿಕಾ, ಆಯೋಜನೆ: ಉಷಾಸ್ ಫೌಂಡೇಶನ್, ಸ್ಥಳ: ಶ್ರೀ ಕೃಷ್ಣದೇವರಾಯ ಕಲಾಮಂದಿರ, ಮಲ್ಲೇಶ್ವರ, ಸಂಜೆ 6

'ತಾಪ್ ಮಹಿಳಾ ಟೆಂಡರ್' ನಾಟಕ ಪ್ರದರ್ಶನ: ನಿರ್ದೇಶನ: ದಾಕ್ಷಾಯಿಣಿ ಭಟ್, ತಂಡ: ದೃಶ್ಯ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 7

ಪಿ. ಲಂಕೇಶ್ ಅವರ 'ಕ್ರಾಂತಿ ಬಂತು #ಕ್ರಾಂತಿ' ನಾಟಕ ಪ್ರದರ್ಶನ: ನಿರ್ದೇಶನ: ಅಭಿಷೇಕ ಚಕ್ರಣ್ಣವರ, ತಂಡ: ಕಲಾವಿಲಾಸಿ, ಸ್ಥಳ: ಡಾ.ಸಿ. ಅಶ್ವತ್ಥ್ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ನಿಧನ ವಾರ್ತೆ

ಚಂದ್ರಶೇಖರ ನಾಮಗೊಂಡ್ಲು

ಬೆಂಗಳೂರು: ಅಮೆರಿಕದ ವರ್ಜೀನಿಯ ರಾಜ್ಯದಲ್ಲಿ ಮೂರು ದಶಕಗಳಿಂದ ನೆಲಸಿದ್ದ ಬೆಂಗಳೂರಿನ

ಎಂಜಿನಿಯರ್ ಚಂದ್ರಶೇಖರ ನಾಮಗೊಂಡ್ಲು (63) ಶನಿವಾರ ಸಂಭವಿಸಿದ ಅಪಘಾತದಲ್ಲಿ ಮೃತಪಟ್ಟಿದ್ದಾರೆ.

ಅವರು ಚಾಲನೆ ಮಾಡುತ್ತಿದ್ದ ಕಾರು ಪಲ್ಟಿಯಾಗಿ, ತೀವ್ರವಾಗಿ ಗಾಯಗೊಂಡಿದ್ದರು. ಮೃತರಿಗೆ ಪತ್ನಿ, ಪುತ್ರಿ ಇದ್ದಾರೆ. ವರ್ಜೀನಿಯ ರಾಜ್ಯದ ಆಷ್‌ಬರ್ನ್‌ನಲ್ಲಿ ಅಂತ್ಯಸಂಸ್ಕಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬೆಂಗಳೂರು ನಗರದ ಇನ್ನಷ್ಟು ಸುದ್ದಿಗಳಿಗೆ 7ಎ, 7ಬಿ ನೋಡಿ....

ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಗ್ರಾಮೀಣ ಪ್ರದೇಶದಲ್ಲಿ ಇರುವ ವಸತಿ ರಹಿತರ ಹಾಗೂ ನಿವೇಶನ ರಹಿತರ ಸಮೀಕ್ಷೆ ರಾಜ್ಯದಲ್ಲಿ ಪ್ರಾರಂಭಿಸಲಾಗಿದೆ. ಸರ್ವರಿಗೂ ಸೂರು ಒದಗಿಸಬೇಕೆಂಬ ಸದುದ್ದೇಶ ಹೊಂದಿರುವ ಈ ಸಮೀಕ್ಷೆಯಲ್ಲಿ ವಸತಿ ರಹಿತರು ಹಾಗೂ ನಿವೇಶನ ರಹಿತರು ನೇರವಾಗಿ ಪಾಲ್ಗೊಳ್ಳಬಹುದಾಗಿದೆ.

ನಿಗಮದ ಪ್ರಗತಿ ಪರಿಶೀಲನಾ ಸಭೆಯಲ್ಲಿ ವಸತಿ, ವಕ್ಫ್ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರಾದ ಶ್ರೀ ಬಿ.ಝಡ್. ಜಮೀರ್ ಅಹಮದ್ ಖಾನ್

ಮೀನು ‘ಬರ’ ನಾಡದೋಣಿಗೆ ‘ಗರ’

ಮಂಗಳೂರು ಬಳಿಯ ಸುರತ್ಕಲ್ ಲೈಟ್‌ಹೌಸ್ ಬಳಿ ನಾಡದೋಣಿ ಮೀನುಗಾರರು ತಮಗೆ ಸಿಕ್ಕ ಸ್ವಲ್ಪವೇ ಮೀನುಗಳನ್ನು ಬೆಲೆಯಿಂದ ತೆಗೆಯುತ್ತಿರುವುದು
ಪ್ರಜಾವಾಣಿ ಚಿತ್ರ : ಫಕ್ರುದ್ದೀನ್ ಎಚ್

ಲೈಟ್ ಫಿಶಿಂಗ್ ಹಾಗೂ ಬುಲ್‌ಟ್ರಾಲಿಂಗ್ ಪದ್ಧತಿಗೆ ನಮ್ಮಲ್ಲಿ ನಿಷೇಧ ಇದೆ. ಆದರೂ, ಅದು ನಡೆಯುತ್ತಲೇ ಇದೆ. ಮೀನುಗಾರಿಕೆ ಇಲಾಖೆಯವರು ಕ್ರಮ ತೆಗೆದುಕೊಳ್ಳದೆ ಕಣ್ಮುಚ್ಚಿ ಕುಳಿತಿದ್ದಾರೆ. ಕರಾವಳಿಯಲ್ಲಿ ಅಂದಾಜು ಒಂದು ಲಕ್ಷ ಕುಟುಂಬಗಳು ನಾಡದೋಣಿ ಮೀನುಗಾರಿಕೆಯನ್ನೇ ನಂಬಿವೆ. ಅಕ್ರಮ ಮೀನುಗಾರಿಕೆಯು ಇವರೆಲ್ಲರ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ ಎಂದು ಮೀನುಗಾರರು ಆಪಾದಿಸುತ್ತಾರೆ.

• ಗಣೇಶ ಚಂದನಶಿವ

ಮಂಗಳೂರು: ‘ಸಮುದ್ರಕ್ಕಿಳಿದರೆ ನಿತ್ಯವೂ ಬರಿಗೈಯಲ್ಲೇ ಮರಳಬೇಕಾಗಿದೆ. ದೋಣಿಗಳನ್ನು ದಡಕ್ಕೆ ಸೇರಿಸಿ, ಮನೆಯಲ್ಲೇ ಕುಳಿತಿದ್ದೇವೆ’ ಎನ್ನುತ್ತ ಕೆಲಹೊತ್ತು ಮೌನಕ್ಕೆ ಜಾರಿದರು ಉಡುಪಿ ಜಿಲ್ಲೆ ಬೈಂದೂರು ತಾಲ್ಲೂಕಿನ ಉಪ್ಪುಂದ ಸಮೀಪದ ಅಳಿವೆಕೋಡಿಯ ಗೋಪಾಲ ಖಾರ್ವಿ.

‘ನಾಡದೋಣಿ ಮೀನುಗಾರರಿಗೆ ಹೊತ್ತಿನ ದುಡಿಮೆಯೂ ಆಗುತ್ತಿಲ್ಲ. ಪಾರಂಪರಿಕವಾಗಿ ಮೀನುಗಾರಿಕೆ ದೋಣಿ ನಡೆಸಿಕೊಂಡು ಬಂದಿದ್ದ ನೂರಾರು ಕುಟುಂಬಗಳು ಈಗ ದೋಣಿ ಮಾರುವ ಸ್ಥಿತಿಗೆ ತಲುಪಿವೆ. ನಾಡದೋಣಿ, ಪಾತಿದೋಣಿಗಳ ಮಾಲೀಕರಾಗಿದ್ದವರು ಯಾಂತ್ರೀಕೃತ ಬೋಟುಗಳಲ್ಲಿ ಕಾರ್ಮಿಕರಾಗಿದ್ದಾರೆ’ ಎಂದು ಒಂದೇ ಉಸಿರಿನಲ್ಲಿ ಬೇಸತ್ತು ಹೇಳಿದರು ಉತ್ತರ ಕನ್ನಡ ಜಿಲ್ಲೆ ಕಾರವಾರ ತಾಲ್ಲೂಕಿನ ಆನಂದು ಸೈಲ್.

ರಾಜ್ಯದ ಕರಾವಳಿ ಪ್ರದೇಶದ ಯಾವುದೇ ನಾಡದೋಣಿ ಮೀನುಗಾರರನ್ನು ಮಾತನಾಡಿಸಿದರೂ, ಅವರು ಹೇಳುವುದು ‘ನಮಗೆ ಮೀನು ಸಿಗುತ್ತಿಲ್ಲ; ಸಿಕ್ಕರೂ ಅತ್ಯಲ್ಪ’. ಏಕೆ ಎಂದು ಕೇಳಿದರೆ ಅವರು ಬೆಟ್ಟು ಮಾಡುವುದು ಬುಲ್‌ಟ್ರಾಲಿಂಗ್ ಮತ್ತು ಲೈಟ್ ಫಿಶಿಂಗ್ ನಡೆಸುವ ಟ್ರಾಲ್ ಮತ್ತು ಪರ್ಸಿನ್ ಬೋಟ್‌ಗಳವರತ್ತ!

ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳು 320 ಕಿ.ಮೀ. ಕರಾವಳಿ ಪ್ರದೇಶ ಹೊಂದಿವೆ. ಈ ಜಿಲ್ಲೆಗಳ ಕರಾವಳಿ ಭಾಗದಲ್ಲಿ ನಾಡದೋಣಿ ಅವಲಂಬಿಸಿರುವ ಮೀನುಗಾರರ ಕುಟುಂಬಗಳ ಸಂಖ್ಯೆ ದೊಡ್ಡದಿದೆ. ಅವುಗಳ ಪೈಕಿ ಬಹುತೇಕ ಕುಟುಂಬಗಳು ಆರ್ಥಿಕವಾಗಿ ಇಂದಿಗೂ ದುರ್ಬಲವಾಗಿವೆ. ಮಕ್ಕಳ ಶಿಕ್ಷಣಕ್ಕೆ, ಆರೋಗ್ಯ ಚಿಕಿತ್ಸೆಗೆ ವೆಚ್ಚ ಹೊಂದಿಸಲು ಪರದಾಡಬೇಕಾಗಿದೆ.

ಅವೈಜ್ಞಾನಿಕ ಮೀನುಗಾರಿಕೆಗೆ ಕಡಿವಾಣ ಹಾಕಿ

ಯಾಂತ್ರಿಕ ಬೋಟ್‌ಗಳು ಬಂದರು ಪ್ರದೇಶಗಳಲ್ಲಿ ಮಾತ್ರ ಲಂಗರು ಹಾಕಿ ಅಲ್ಲಿಂದ ಮೀನುಗಾರಿಕೆಗೆ ತೆರಳುತ್ತವೆ. ನಾಡ ದೋಣಿಗಳು ಬಂದರು ಸೇರಿದಂತೆ ಎಲ್ಲಾ ಕಡೆಗಳಿಂದ ಮೀನುಗಾರಿಕೆಗೆ ತೆರಳುವುದರಿಂದ ಈ ದೋಣಿಗಳಿಂದಲೇ ಅಂದಾಜು ಶೇ 70ರಷ್ಟು ಮೀನುಗಳು ಸಿಗುತ್ತಿದ್ದವು. ಅದು ಈಗ ಶೇ 30ಕ್ಕೆ ಇಳಿದಿದೆ.

ಲೈಟ್‌ಫಿಶಿಂಗ್‌ನಂತಹ ಅವೈಜ್ಞಾನಿಕ ಮೀನುಗಾರಿಕೆ ಕಣ್ಣೆದುರು ನಡೆದರೂ ಸಂಬಂಧಪಟ್ಟ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ನಾಡದೋಣಿ ಮೀನುಗಾರರು ಉಳಿಯಬೇಕಾದರೆ ಇಂತಹ ಮೀನುಗಾರಿಕೆಗೆ ಸಂಪೂರ್ಣ ಕಡಿವಾಣ ಹಾಕಬೇಕಾಗಿದೆ. ಸಮುದ್ರದಲ್ಲಿ ಕಲ್ಲುಗಳಿರುವ ಪ್ರದೇಶದಲ್ಲಿ ಲೈಟ್‌ಫಿಶಿಂಗ್ ನಡೆಸಲಾಗುತ್ತದೆ. ಇದರಿಂದ ಹಲವು ಬಗೆಯ ಮೀನುಗಳ ಸಂತತಿಯೇ ಅಳಿವಿನಂಚಿಗೆ ತಲುಪಿದೆ. ಇಂತಹ ಅವೈಜ್ಞಾನಿಕ ಮೀನುಗಾರಿಕೆ ತಡೆಗೆ ಸರ್ಕಾರ ಮುಂದಾಗದಿದ್ದರೆ ಮುಖ್ಯಮಂತ್ರಿ ನಿವಾಸದ ಮುಂದೆ ಪ್ರತಿಭಟನೆ ನಡೆಸುತ್ತೇವೆ.

ನಾಗೇಶ ಖಾರ್ವಿ, ಅಧ್ಯಕ್ಷ, ಕರ್ನಾಟಕ ರಾಜ್ಯ ಸಾಂಪ್ರದಾಯಿಕ ನಾಡದೋಣಿ ಮೀನುಗಾರರ ಒಕ್ಕೂಟ

ರಾಜ್ಯದಲ್ಲಿರುವ ನಾಡದೋಣಿ ಸಂಖ್ಯೆ

ಆಧಾರ: ಮೀನುಗಾರಿಕೆ ಇಲಾಖೆ

310 ಮಂಗಳೂರು	263 ಮಲ್ಪೆ	174 ಗಂಗೊಳ್ಳಿ	2,093 ಭಟ್ಕಳ	1,264 ಹೊನ್ನಾವರ
1,890 ತದಡಿ	1,206 ಬೇಲೆಕೇರಿ	1,695 ಕಾರವಾರ	8,895 ಒಟ್ಟು	

ಹಿಂದೆ ತ್ರಾಸಿ ಕಡಲ ತೀರದಲ್ಲಿ ಪ್ರತಿಭಟನೆ ನಡೆಸಿ, ರಸ್ತೆ ತಡೆದು ಆಕ್ರೋಶ ವ್ಯಕ್ತಪಡಿಸಿದ್ದರು. ಎರಡು ವರ್ಷಗಳ ಹಿಂದೆ ಕಾರವಾರದಲ್ಲಿಯೂ ಮೀನುಗಾರರು ದೊಡ್ಡಮಟ್ಟದ ಪ್ರತಿಭಟನೆ ನಡೆಸಿದ್ದರು.

ಹಲವು ವರ್ಷಗಳಿಂದ ಕೆಲ ದೊಡ್ಡ ಬೋಟ್‌ನವರು ಅವೈಜ್ಞಾನಿಕ ರೀತಿಯಲ್ಲಿ ಮೀನುಗಾರಿಕೆ ನಡೆಸುತ್ತಿದ್ದರೂ ಮೀನುಗಾರಿಕೆ ಇಲಾಖೆಯವರು ಅವರ ವಿರುದ್ಧ ಕ್ರಮ ಕೈಗೊಳ್ಳುತ್ತಿಲ್ಲ. ಲೈಟ್ ಫಿಶಿಂಗ್ ಹಾಗೂ ಬುಲ್‌ಟ್ರಾಲಿಂಗ್ ಪದ್ಧತಿಗೆ ನಮ್ಮಲ್ಲಿ ನಿಷೇಧ ಇದೆ. ಆದರೂ, ಅದು ನಡೆಯುತ್ತಲೇ ಇದೆ. ಮೀನುಗಾರಿಕೆ ಇಲಾಖೆಯವರು ಕ್ರಮ ತೆಗೆದುಕೊಳ್ಳದೆ ಕಣ್ಮುಚ್ಚಿ ಕುಳಿತಿದ್ದಾರೆ. ಕರಾವಳಿಯಲ್ಲಿ ಅಂದಾಜು ಒಂದು ಲಕ್ಷ ಕುಟುಂಬಗಳು ನಾಡದೋಣಿ ಮೀನುಗಾರಿಕೆಯನ್ನೇ ನಂಬಿವೆ. ಅಂದಾಜು 50 ಸಾವಿರ ಕುಟುಂಬಗಳು ಪರೋಕ್ಷವಾಗಿ ಅವಲಂಬಿತವಾಗಿವೆ. ಅಕ್ರಮ ಮೀನುಗಾರಿಕೆಯು ಇವರೆಲ್ಲರ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ ಎಂದು ನಾಡದೋಣಿ ಮೀನುಗಾರರು ಆಪಾದಿಸುತ್ತಾರೆ.

ಎರಡು ಬೋಟ್‌ಗಳನ್ನು ಪರಸ್ಪರ ನಿರ್ದಿಷ್ಟ ದೂರದಲ್ಲಿರಿಸಿ ಬೋಟ್‌ಗಳಿಗೆ 150 ಮೀಟರ್‌ಗೂ ದೊಡ್ಡಬಲೆ ಕಟ್ಟಿ ಸಮುದ್ರದಾಳದಿಂದ ಮೀನನ್ನು ಹಿಡಿಯುವ ವಿಧಾನಕ್ಕೆ ‘ಬುಲ್ ಟ್ರಾಲಿಂಗ್ ಫಿಶಿಂಗ್’ ಎನ್ನುತ್ತಾರೆ. ಸಣ್ಣ ಕಣ್ಣಿನ ಬಲೆ ಬಳಸುವುದರಿಂದ ಮರಿ ಮೀನುಗಳು ಸಹ ಬಲೆಗೆ ಸಿಲುಕಿ ಸಾಯುತ್ತವೆ. ಲೈಟ್ ಫಿಶಿಂಗ್‌ನಲ್ಲಿ ಪ್ರಖರವಾದ ಬೆಳಕನ್ನು ಸಮುದ್ರಕ್ಕೆ ಹಾಯಿಸಲಾಗುತ್ತದೆ. ಬೆಳಕಿಗೆ ಆಕರ್ಷಿತಗೊಂಡು ಮೀನು ಬರುತ್ತವೆ. ದೊಡ್ಡ ಬಲೆ ಬಳಸಿ ಅವುಗಳನ್ನು ಹಿಡಿಯುತ್ತಾರೆ. ಎರಡೂ ವಿಧಾನಗಳಲ್ಲಿ ಮೀನಿನ ಮರಿಗಳನ್ನು ಹಿಡಿಯುವುದರಿಂದಲೂ ಮೀನಿನ ಸಂತತಿ ಕಡಿಮೆಯಾಗುತ್ತಿದೆ. ಲೈಟ್ ಫಿಶಿಂಗ್‌ಗಾಗಿ ಜನರೇಟರ್‌ಗಳನ್ನು ಬೋಟ್‌ಗಳಲ್ಲಿ ಕೊಂಡು ಹೋದರೂ ಯಾರೂ ಪರಿಶೀಲಿಸುವವರೇ ಇಲ್ಲದಾಗಿದೆ. ಇಂದು ದೊಡ್ಡ ಯಾಂತ್ರಿಕ ಬೋಟ್‌ಗಳು ಮೀನುಗಾರರಿಗಿಂತ ಉದ್ಯಮಿಗಳ ಕೈಯಲ್ಲಿವೆ ಎನ್ನುತ್ತಾರೆ ನಾಡದೋಣಿ ಮೀನುಗಾರರು.

‘ರಾಜ್ಯದ ಕರಾವಳಿಯಲ್ಲಿ ಒಟ್ಟಾರೆ ಮೀನು ವಹಿವಾಟು ವಾರ್ಷಿಕ ₹10 ಸಾವಿರ ಕೋಟಿಗೂ ಮಿಕ್ಕಿದೆ. ರಫ್ತು ಸಹ ಆಗುತ್ತದೆ. ಹೇಗಾದರೂ ಹಿಡಿದು ತರಲಿ, ರಫ್ತಿಗೆ ಮೀನು ಸಿಕ್ಕರೆ ಸಾಕು ಎಂಬಂತಹ ಸ್ಥಿತಿ ಸರ್ಕಾರಗಳದ್ದು. ಮೀನು ಸಂತತಿ ವೃದ್ಧಿಗೆ ಸಮುದ್ರದಲ್ಲಿ ಕೃತಕ ಬಂಡೆ ಹಾಕುವ ಯೋಜನೆ ಜಾರಿ ಬಿಟ್ಟರೆ ನಾಡದೋಣಿ ಮೀನುಗಾರರ ಈ ಸಮಸ್ಯೆ ಪರಿಹಾರಕ್ಕೆ ಪರಿಣಾಮಕಾರಿಯಾದ ಕೆಲಸ ರಾಜ್ಯ ಸರ್ಕಾರದಿಂದ ಆಗಿಲ್ಲ. ಸ್ಥಳೀಯ ಮಟ್ಟದಲ್ಲಿಯೂ ಅಷ್ಟೇ’ ಎನ್ನುತ್ತಾರೆ ಅವರು.

‘ಪ್ರತಿವರ್ಷ ಮಳೆಗಾಲದಲ್ಲಿ ಮೀನುಗಾರಿಕೆಗೆ ಇಳಿಯುವ ಮೊದಲು ಬಲೆಗಳ ರಿಪೇರಿ, ಸಲಕರಣೆಗಳ ಖರೀದಿಗೆ ದೊಡ್ಡ ಮೊತ್ತ ವಿನಿಯೋಗಿಸುತ್ತೇವೆ. ಮೀನುಗಾರಿಕೆಗೆ ತೆರಳುವುದಕ್ಕೂ ಮೊದಲು ಕೆಲಸದವರಿಗೆ ಮುಂಗಡ ಹಣ ನೀಡಬೇಕು. ಅದಕ್ಕಾಗಿ ನಾವು ಸೊಸೈಟಿಗಳಿಂದ ಸಾಲ ಪಡೆಯುತ್ತೇವೆ. ಮೀನುಗಾರಿಕೆ ಉತ್ತಮವಾಗಿ ನಡೆದರೆ ಸುಲಭವಾಗಿ ಸಾಲ ತೀರಿಸಬಹುದು. ಈ ವರ್ಷ ನವೆಂಬರ್ ನಂತರ ಮೀನು ಸಿಗುತ್ತಿಲ್ಲ. ಸಾಲ ತೀರಿಸಲಾಗದೆ ಸಂಕಷ್ಟದಲ್ಲಿದ್ದೇವೆ’ ಎನ್ನುತ್ತಾರೆ ಉಪ್ಪುಂದದ ನಾಡ ದೋಣಿ ಮೀನುಗಾರ ಜನಾರ್ದನ.

‘ಕೆಲ ವರ್ಷಗಳ ಹಿಂದೆ ಮೆಲು ಮೀನು, ತೇಡೆ ಮೀನುಗಳು ನಾಡದೋಣಿಯವರಿಗೆ ದೊಡ್ಡ ಪ್ರಮಾಣದಲ್ಲಿ ಸಿಗುತ್ತಿದ್ದವು. ಈಗ ಈ ಮೀನುಗಳು ಕಣ್ಣಿಗೇ ಬೀಳುವುದಿಲ್ಲ. ಅಲ್ಲದೆ ಯಥೇಚ್ಛವಾಗಿ ಸಿಗುತ್ತಿದ್ದ ಬೈಗೆ, ಬಂಗುಡೆ ಮೀನುಗಳ ಪ್ರಮಾಣವೂ ತೀರಾ ಕಡಿಮೆಯಾಗಿದೆ. ಲೈಟ್ ಫಿಶಿಂಗ್‌ನಿಂದಾಗಿ ಇಂತಹ ಮೀನುಗಳ ಸಂತತಿ ನಾಶವಾಗುತ್ತಿರುವ ಸಾಧ್ಯತೆಯೂ ಇರಬಹುದು’ ಎಂದು ಅನುಮಾನಿಸುತ್ತಾರೆ ಮೀನುಗಾರ ಚಂದ್ರಶೇಖರ್.

ಬುಲ್ ಟ್ರಾಲಿಂಗ್ ಮತ್ತು ಲೈಟ್ ಫಿಶಿಂಗ್ ಹಾವಳಿ ಆರಂಭವಾದ ನಂತರ ನಮಗೆ ಮೀನು ಲಭ್ಯತೆಯಲ್ಲಿ ಶೇ 75ರಷ್ಟು ಕಡಿಮೆಯಾಗಿದೆ. ಇತ್ತೀಚಿನ ವರ್ಷಗಳಲ್ಲಂತೂ ಈ ಹಾವಳಿ ಹೆಚ್ಚಿದೆ. ಎರಡು ಬೋಟ್‌ಗಳಿಗೆ ಬಲೆ ಕಟ್ಟಿ ಕಿಲೋ ಮೀಟರ್‌ಗಟ್ಟಲೆ ಎಳೆದುಕೊಂಡು ಹೋಗಿ ಮೀನು ಹಿಡಿಯುತ್ತಾರೆ. ಲೈಟ್‌ಫಿಶಿಂಗ್‌ನಲ್ಲಿ ಒಂದು ಕಿ.ಮೀ. ದೂರದ ವರೆಗೂ ಪ್ರಖರ ಬೆಳಕು ಹಾಯಿಸಲಾಗುತ್ತದೆ. ಬೆಳಕಿನತ್ತ ಆಕರ್ಷಿತವಾಗಿ ಎಲ್ಲ ಮೀನುಗಳು ಹೋಗುತ್ತವೆ. ಆಗ ಮೀನಿಗೆ ಬಲೆ ಹಾಕಿ ಹಿಡಿಯುತ್ತಾರೆ. ಹೀಗಾಗಿ ಮೀನುಗಳು ದಡಕ್ಕೆ ಬರುತ್ತಿಲ್ಲ. ನಾವು ಹೆಚ್ಚೆಂದರೆ 8 ರಿಂದ 10 ನಾಟಿಕಲ್ ಮೈಲಿ ದೂರದ ವರೆಗೆ ಮಾತ್ರ ಸಾಗಬಹುದು. ಕೇರಳದಲ್ಲಿ ಇಂತಹ ಕೆಟ್ಟ ವಹಿವಾಟಿಗೆ ಕಡಿವಾಣ ಹಾಕಲಾಗಿದೆ. ನಿಯಮ ಉಲ್ಲಂಘಿಸಿ ಹೀಗೆ ಮೀನುಗಾರಿಕೆ ಮಾಡುವವರಿಗೆ ಅಲ್ಲಿ ದೊಡ್ಡಮೊತ್ತದ ದಂಡ ವಿಧಿಸಲಾಗುತ್ತಿದೆ. ನಮ್ಮ ರಾಜ್ಯದಲ್ಲಿ ಮಾತ್ರ ಏನೂ ನಡೆದಿಲ್ಲ ಎಂಬಂತೆ ಎಲ್ಲರೂ ಮೌನವಾಗಿದ್ದಾರೆ’ ಎಂದು ಉದಯ ಆಕ್ರೋಶ ವ್ಯಕ್ತಪಡಿಸುತ್ತಾರೆ.

ನಾಡದೋಣಿ ಮೀನುಗಾರರ ಸಮಸ್ಯೆಯು ಸ್ವಾವಲಂಬಿಯಾಗಿ ದುಡಿಯುವ ಮೀನುಗಾರ ಮಹಿಳೆಯರ ಮೇಲೂ ಪರಿಣಾಮ ಬೀರಿದೆ. ನಾಡದೋಣಿಗಳು ಕಡಲಿಗಿಳಿಯುವುದೇ ಅಪರೂಪವಾದ ಕಾರಣ ಈ ಮಹಿಳೆಯರು ಹೆಚ್ಚಿನ ದರ ನೀಡಿ ಯಾಂತ್ರಿಕ ಬೋಟ್‌ನವರಿಂದ ಮೀನುಗಳನ್ನು ಖರೀದಿಸಿ ಮಾರಾಟ ಮಾಡಬೇಕಾದ ಅನಿವಾರ್ಯತೆಯೂ ಎದುರಾಗಿದೆ.

‘25 ವರ್ಷಗಳಿಂದ ಮೀನು ಮಾರಾಟ ಮಾಡುತ್ತಿದ್ದೇನೆ. ನಾಡದೋಣಿಯವರ ಹತ್ತಿರ ಮೀನು ಖರೀದಿಸಿ ಮಾರಾಟ ಮಾಡುತ್ತಿದ್ದೆ. ನಮ್ಮೂರ ಬಳಿಯೇ ಮೀನು ಸಿಗುತ್ತಿತ್ತು. ಮೇಲಾಗಿ ವರ್ತಕರಿಗೆ ಕೊಡುವುದಕ್ಕಿಂತ ಕಡಿಮೆ ದರದಲ್ಲಿ ನಾಡದೋಣಿಯವರು ನಮಗೆ ಮೀನು ಕೊಡುತ್ತಾರೆ. ಆದರೆ, ಈಗ ಅವರಿಗೇ ಸರಿಯಾಗಿ ಮೀನು ಸಿಗುತ್ತಿಲ್ಲ. ಹೀಗಾಗಿ ಮಂಗಳೂರು ದಕ್ಕೆಗೆ ಹೋಗಿ ಮೀನು ಖರೀದಿಸಿ ತರಬೇಕಿದೆ. ಹಿಂದೆ ದಿನಕ್ಕೆ ₹500ರಿಂದ ₹600 ಸಂಪಾದನೆಯಾಗುತ್ತಿತ್ತು. ಈಗ ಅದರ ಅರ್ಧದಷ್ಟೂ ಸಂಪಾದನೆ ಇಲ್ಲ’ ಎಂದು ಗೋಳುತೋಡಿಕೊಂಡರು ಗುಡ್ಡೆಕೊಪ್ಪಲು ಗ್ರಾಮದ ಮೀನುಮಾರುವ ಮಹಿಳೆಯೊಬ್ಬರು. ‘ಬಹುತೇಕ ಮಹಿಳೆಯರು ಮೀನುಮಾರಿ ಕುಟುಂಬ ನಿರ್ವಹಿಸುತ್ತಿದ್ದೇವೆ. ಒಂದೆಡೆ ಆದಾಯ ಕಡಿಮೆಯಾಗಿದ್ದರೆ, ಇನ್ನೊಂದೆಡೆ ಬೆಲೆ ಏರಿಕೆಯ ಬಿಸಿ. ಮಕ್ಕಳ ಶಿಕ್ಷಣಕ್ಕೆ ಹಣಹೊಂದಿಸುವುದೂ ಕಷ್ಟವಾಗಿದೆ’ ಎಂದು ಇನ್ನೊಬ್ಬ ಮಹಿಳೆ ಕಣ್ಣೀರಾದರು.

‘ನಾಡದೋಣಿಯಲ್ಲಿ 8 ಜನ ಮೀನುಗಾರಿಕೆಗೆ ತೆರಳುತ್ತೇವೆ. ಅವರ ಕೂಲಿ, ಸೀಮೆ ಎಣ್ಣೆ ವೆಚ್ಚ ನಿಭಾಯಿಸಲೂ ಆಗುತ್ತಿಲ್ಲ. ಮಕ್ಕಳ ಶಿಕ್ಷಣಕ್ಕೆ ಸಾಲ ಮಾಡಿದ್ದೇನೆ. ಅದನ್ನು ತೀರಿಸುವುದು ಹೇಗೆ ಎಂಬ ಚಿಂತೆ’ ಎಂದು ಮೀನುಗಾರರೊಬ್ಬರು ಹೇಳಿಕೊಂಡರು.

ಕೇರಳ ಸರ್ಕಾರವು ಮಿನುಗಾರರಿಗೆ ಬಲೆ, ಸೀಮೆ ಎಣ್ಣೆ ಖರೀದಿಗೆ ಸಹಾಯಧನ ನೀಡುತ್ತಿದೆ. ಮೀನುಗಾರರಿಗೆ ಮನೆ ನಿರ್ಮಾಣಕ್ಕೆ ಅವರ ಮಕ್ಕಳ ಶಿಕ್ಷಣಕ್ಕೂ ಯೋಜನೆಗಳನ್ನು ಜಾರಿಗೊಳಿಸಿದೆ. ನಮ್ಮ ರಾಜ್ಯದಲ್ಲೂ ಅಂತಹ ಯೋಜನೆಗಳು ಜಾರಿಯಾಗಬೇಕು ಎನ್ನುತ್ತಾರೆ ನಾಡದೋಣಿ ಮೀನುಗಾರರು.

ಪೂರಕ ಮಾಹಿತಿ: **ಗಣಪತಿ ಹೆಗಡೆ, ನವೀನ್‌ಕುಮಾರ್ ಜಿ.**

ಸರ್ವಋತು ಬಂದರಿನ ಕನಸು

ಮಂಗಳೂರಿನ ನವಮಂಗಳೂರು ಬಂದರು ನಿರ್ಮಾಣಕ್ಕಾಗಿ ಜಾಗ ಬಿಟ್ಟುಕೊಟ್ಟ ಮೀನುಗಾರರಿಗೆ ಪ್ರತ್ಯೇಕ ಮೀನುಗಾರಿಕಾ ಬಂದರು ನಿರ್ಮಿಸಬೇಕು ಎಂಬ ಬೇಡಿಕೆ ಐದು ದಶಕ ಕಳೆದರೂ ಈಡೇರಿಲ್ಲ.

ಮಂಗಳೂರಿನ ಕುಳಾಯಿಯಲ್ಲಿ ನಾಡದೋಣಿ ಮೀನುಗಾರಿಕೆಗೆ ಆದ್ಯತೆ ಸಿಗುವಂತೆ ಸರ್ವಋತು ಬಂದರನ್ನು ನವಮಂಗಳೂರು ಬಂದರು ಪ್ರಾಧಿಕಾರದ ಸಹಕಾರದಲ್ಲಿ ₹ 196.51 ಕೋಟಿ ವೆಚ್ಚದಲ್ಲಿ ನಿರ್ಮಿಸುವ ಕಾಮಗಾರಿ 2023ನೇ ಸಾಲಿನಲ್ಲಿ ಶುರುವಾಗಿತ್ತು. ಈ ಬಂದರಿನ ವಿನ್ಯಾಸವನ್ನು ಸ್ಥಳೀಯ ಮೀನುಗಾರರು ಒಪ್ಪದ ಕಾರಣ ಕಾಮಗಾರಿಯೂ ಅರ್ಧದಲ್ಲೇ ಸ್ಥಗಿತಗೊಂಡಿದೆ.

ಕುಳಾಯಿ ಬಂದರಿನ ಉತ್ತರದಲ್ಲಿ 831 ಮೀ ಉದ್ದದ ಹಾಗೂ ದಕ್ಷಿಣದಲ್ಲಿ 262 ಮೀ ಉದ್ದದ ಬ್ರೇಕ್ ವಾಟರ್ ನಿರ್ಮಿಸಲು ನಿರ್ಧರಿಸಲಾಗಿತ್ತು. ಕುಳಾಯಿ ಪ್ರದೇಶದಲ್ಲಿ ಮೇ–ಸೆಪ್ಟೆಂಬರ್‌ವರೆಗೆ ಕಿನಾರೆಯಿಂದ ಸುಮಾರು 600–800 ಮೀ ದೂರದವರೆಗೂ ಸಮುದ್ರದಲ್ಲಿ ಅಲೆಗಳ ಅಬ್ಬರ ಇರುತ್ತದೆ. ಈಗ ಪ್ರಸ್ತಾಪಿಸಿದಷ್ಟು ಉದ್ದದ ಬ್ರೇಕ್ ವಾಟರ್‌ಗೆ ಅಲೆಗಳ ಆರ್ಭಟ ತಡೆಯಲು ಸಾಕಾಗದು. ಉತ್ತರದ ಬ್ರೇಕ್ ವಾಟರ್‌ನ ಉದ್ದವನ್ನು 1,081 ಮೀಟರ್‌ಗೆ ಹಾಗೂ ದಕ್ಷಿಣದ ಬ್ರೇಕ್ ವಾಟರ್ ಉದ್ದವನ್ನು 981 ಮೀಟರ್‌ಗೆ ವಿಸ್ತರಿಸಬೇಕು ಎಂಬುದು ಸ್ಥಳೀಯ ಮೀನುಗಾರರ ಬೇಡಿಕೆ. ಅದಕ್ಕೆ ತಗಲುವ ಹೆಚ್ಚುವರಿ ವೆಚ್ಚ ಭರಿಸುವ ವಿಚಾರದಲ್ಲಿ ಕಾಮಗಾರಿ ನಿಂತಿದೆ. ಈ ಕಾಮಗಾರಿ ಪೂರ್ಣಗೊಳಿಸುವುದಕ್ಕೆ ಸರ್ಕಾರ ಮುಂದಾಗಬೇಕು ಎಂಬುದು ಮೀನುಗಾರರ ಬೇಡಿಕೆ.



ನಿಷೇಧಿತ ಬೆಳಕಿನ ಮೀನುಗಾರಿಕೆಗೆ ಕಡಿವಾಣ ಹಾಕಬೇಕು ಎಂದು ಆಗ್ರಹಿಸಿ ಕರಾವಳಿ ಮೀನುಗಾರರ ಹಿತರಕ್ಷಣಾ ಸಂಘದ ನೇತೃತ್ವದಲ್ಲಿ ನಾಡದೋಣಿ ಮೀನುಗಾರರು ಕಾರವಾರದ ಜಿಲ್ಲಾಧಿಕಾರಿ ಕಚೇರಿ ಎದುರು ಇತ್ತೀಚೆಗೆ ಪ್ರತಿಭಟನೆ ನಡೆಸಿದರು

ನಾಡದೋಣಿ ಮೀನುಗಾರರ ಅನುಕೂಲಕ್ಕಾಗಿ ಕೃತಕ ಬಂಡೆ ಅಳವಡಿಸುವ ಯೋಜನೆಯನ್ನು ರಾಜ್ಯದಲ್ಲಿ ಮೊದಲ ಬಾರಿಗೆ ಪರಿಚಯಿಸಿದ್ದೇವೆ. ಬೆಳಕಿನ ಮೀನುಗಾರಿಕೆ ನಿಷೇಧ ಅಕ್ಕಪಕ್ಕದ ರಾಜ್ಯಗಳಲ್ಲಿ ಕಟ್ಟುನಿಟ್ಟಾಗಿ ಜಾರಿಗೆ ಮಾಡಲು ಕೇಂದ್ರ ಸರ್ಕಾರ ಪ್ರಯತ್ನಿಸಿಲ್ಲ. ರಾಜ್ಯದ ಸಮುದ್ರ ಗಡಿಯಲ್ಲಿ ಅನ್ಯ ರಾಜ್ಯದವರಿಂದ ಬೆಳಕಿನ ಮೀನುಗಾರಿಕೆ ನಡೆಯುತ್ತಿರುವ ಕಾರಣ ಸಮಸ್ಯೆ ಉಂಟಾಗಿದೆ

ಮಂಕಾಳ ವೈದ್ಯ, ಮೀನುಗಾರಿಕೆ ಸಚಿವ

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಭಾನುವಾರ ಮಾರ್ಚ್ 16, 2025

ಶ್ರೀಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಕೃಷ್ಣ ದ್ವಿತೀಯ ಗಂ. 16-59 ನಕ್ಷತ್ರ: ಹಸ್ತ ಗಂ. 11-45 ಯೋಗ: ವೃದ್ಧಿ ಗಂ. 14-49 ಕರಣ: ಗರ ಗಂ. 16-59, ಮೀನ ಮಾಸದ 02 ನೇ ದಿನ, **ಮಳೆನಕ್ಷತ್ರ:** ಪೂರ್ವಾಭಾದ್ರ 4.
ರಾಹುಕಾಲ: ಸಾಯಂಕಾಲ 04-30–06-00
ಸೂರ್ಯೋದಯ: 06-41 **ಸೂರ್ಯಾಸ್ತ:** 06-38
ಮುಸ್ಲಿಂ ದಿನಾಂಕ: 15 ರ

ಕೃತ್ಯಕ್ಕೆ ಬಳಸಿದ್ದ ಎರಡು ಕಾರುಗಳನ್ನು ವಶಪಡಿಸಿಕೊಂಡ ಪೊಲೀಸರು

ಶುಶ್ರೂಷಕಿ ಹತ್ಯೆ: ಮತ್ತಿಬ್ಬರ ಸೆರೆ

ಪ್ರಜಾವಾಣಿ ವಾರ್ತೆ

ಹಾವೇರಿ ಜಿಲ್ಲೆಯ ರಟ್ಟೀಹಳ್ಳಿ ತಾಲ್ಲೂಕಿನ ಮಾಸೂರಿನಲ್ಲಿರುವ ಸ್ವಾತಿ ಬ್ಯಾಡಗಿ ಅವರ ಮನೆಗೆ ಸಂಸದ ಬಸವರಾಜ ಬೊಮ್ಮಾಯಿ, ಮಾಜಿ ಸಚಿವ ಬಿ.ಸಿ.ಪಾಟೀಲ ಶನಿವಾರ ಭೇಟಿ ನೀಡಿದರು

ಹಾವೇರಿ: ಜಿಲ್ಲೆಯ ರಾಣೆಬೆನ್ನೂರಿನ ಆಸ್ಪತ್ರೆಯೊಂದರ ಶುಶ್ರೂಷಕಿ ಸ್ವಾತಿ ಬ್ಯಾಡಗಿ (22) ಎಂಬುವರ ಹತ್ಯೆ ಪ್ರಕರಣದ ಇನ್ನಿಬ್ಬರು ಆರೋಪಿಗಳಾದ ದುರ್ಗಾಚಾರಿ ಬಸವರಾಜಚಾರಿ ಬಡಿಗೇರ (25) ಹಾಗೂ ವಿನಾಯಕ ನಾಗಪ್ಪ ಪೂಜಾರ (27) ಎಂಬುವರನ್ನು ಚಿತ್ರದುರ್ಗದಲ್ಲಿ ಶುಕ್ರವಾರ ರಾತ್ರಿ ಪೊಲೀಸರು ಬಂಧಿಸಿದ್ದಾರೆ.

ರಟ್ಟೀಹಳ್ಳಿ ತಾಲ್ಲೂಕಿನ ಮಾಸೂರಿನ ಸ್ವಾತಿ ಅವರನ್ನು ಮಾರ್ಚ್ 3ರಂದು ಕೊಲೆ ಮಾಡಿ ಮೃತದೇಹವನ್ನು ತುಂಗ ಭದ್ರಾ ನದಿಯಲ್ಲಿ ಎಸೆಯಲಾಗಿತ್ತು. ಕೃತ್ಯದ ಪ್ರಮುಖ ಆರೋಪಿ ನಯಾಜ್ ಇಮಾಮ್‌ಸಾಬ್ ಬೆಣ್ಣೆಗೇರಿಯ ಈ ಇಬ್ಬರೂ ಸ್ನೇಹಿತರು ತಲೆಮರೆಸಿ ಕೊಂಡಿದ್ದರು.

'ಸ್ವಾತಿ ಅವರನ್ನು ರಟ್ಟೀಹಳ್ಳಿಯಿಂದ ರಾಣೆಬೆನ್ನೂರಿಗೆ ಕರೆದೊಯ್ಯಲು ಒಂದು ಕಾರು ಮತ್ತು ರಾಣೆಬೆನ್ನೂರಿನಿಂದ ರಟ್ಟೀಹಳ್ಳಿಯ ಪಾಳು ಬಿದ್ದ ಶಾಲೆಗೆ ಕರೆದೊಯ್ಯಲು ಮತ್ತೊಂದು ಕಾರು ಬಳಸಲಾಗಿತ್ತು. ಒಂದು ಬಾಡಿಗೆ ಕಾರು, ಇನ್ನೊಂದು ಕಾರು ಆರೋಪಿ ವಿನಾಯಕ ನದ್ದು. ಎರಡನ್ನೂ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಬೊಮ್ಮಾಯಿ ಭೇಟಿ: ಹಾವೇರಿ ಜಿಲ್ಲೆಯ ರಟ್ಟೀಹಳ್ಳಿ ತಾಲ್ಲೂಕಿನ ಮಾಸೂರಿನಲ್ಲಿರುವ ಸ್ವಾತಿ ಬ್ಯಾಡಗಿ ಅವರ ಮನೆಗೆ ಸಂಸದ ಬಸವರಾಜ ಬೊಮ್ಮಾಯಿ ಮತ್ತು ಮಾಜಿ ಸಚಿವ ಬಿ.ಸಿ. ಪಾಟೀಲ ಶನಿವಾರ ಭೇಟಿ ನೀಡಿ, ತಾಯಿ ಮತ್ತು ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದರು.

'ಸ್ವಾತಿ ಕೊಲೆ ಪ್ರಕರಣದಲ್ಲಿ ಪೊಲೀಸರಿಂದ ಲೋಪವಾಗಿದೆ. ಈ ಬಗ್ಗೆ ಸಂಪೂರ್ಣ ತನಿಖೆಯಾಗಬೇಕು. ಸ್ವಾತಿಯವರ ತಾಯಿ, ಸಣ್ಣ ವಯಸ್ಸಿನಲ್ಲೇ ಗಂಡನನ್ನು ಕಳೆದುಕೊಂಡಿದ್ದಾರೆ. ಕಷ್ಟಪಟ್ಟು ತಮ್ಮ ಮೂವರು ಮಕ್ಕಳನ್ನು ಬೆಳೆಸಿದ್ದಾರೆ. ಚೆನ್ನಾಗಿ ಓದಿಸಿದ್ದಾರೆ. ಇಂಥ ಕುಟುಂಬಕ್ಕೆ ಈಗ ಅನ್ಯಾಯವಾಗಿದೆ. ಕೌಟುಂಬಿಕ ವಿಚಾರವಿದ್ದರೆ ಬಗೆಹರಿಸಬಹುದಿತ್ತು. ಅದರ ಬದಲು ಅಮಾನವೀಯವಾಗಿ ವರ್ತಿಸಿ ಕೊಲೆ ಮಾಡಿರುವುದು ಹೀನ ಕೃತ್ಯ' ಎಂದು ಸಂಸದ ಬಸವರಾಜ ಬೊಮ್ಮಾಯಿ ಸುದ್ದಿಗಾರರಿಗೆ ತಿಳಿಸಿದರು.

ಮಹಾರಾಷ್ಟ್ರ ಗೀತೆ ಪ್ರಸಾರ: ಎಂಇಎಸ್ ಪುಂಡಾಟ

ಪ್ರಜಾವಾಣಿ ವಾರ್ತೆ

ಬೆಳಗಾವಿ: ನಗರದ ಚವಾಟ ಗಲ್ಲಿಯಲ್ಲಿ ಶುಕ್ರವಾರ ಹೋಳಿ ಹಬ್ಬದ ವೇಳೆ 'ಜೈ ಜೈ ಮಹಾರಾಷ್ಟ್ರ ಮಾಝಾ (ನನ್ನ ಮಹಾರಾಷ್ಟ್ರಕ್ಕೆ ಜಯವಾಗಲಿ)' ಎಂಬ ಮರಾಠಿ ಹಾಡಿಗೆ ಯುವಕ- ಯುವತಿಯರ ದಂಡು ಕುಣಿದು ಕುಪ್ಪಳಿಸಿದೆ.

ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ನಾಯಕರೇ ಆಯೋಜಿಸಿದ್ದ ಹೋಳಿಯಲ್ಲಿ ನಾಡದ್ರೋಹದ ಕೆಲಸ ನಡೆದಿದೆ. ಬೆಳಿಗ್ಗೆಯಿಂದ ತಡರಾತ್ರಿಯವರೆಗೆ ನಡೆದ ಆಚರಣೆ ವೇಳೆ ಡಿಜೆ ಸೌಂಡ್ ಸಿಸ್ಟಮ್ ಬಳಸಿ ಇದೇ ಹಾಡನ್ನು ಪದೇಪದೇ ಕೇಳಿಸಲಾಗಿದೆ.

'ಮಹಾರಾಷ್ಟ್ರದ ವೈಭವ್ ಸೌಂಡ್ಸ್ ಎಂಬ ತಂಡ ಈ ಗೀತೆ ಪ್ರಸಾರ ಮಾಡಿ, ಕನ್ನಡಿಗರನ್ನು ಕೆಣಕಲಾಗಿದೆ. ಸ್ಥಳದಲ್ಲಿದ್ದ ಪೊಲೀಸರೂ ಇದನ್ನು ತಡೆದಿಲ್ಲ. ದೂರು ಕೂಡ ದಾಖಲಿಸಿಕೊಂಡಿಲ್ಲ. ಇದು ಖಂಡನೀಯ' ಎಂದು ಹೋರಾಟಗಾರ ವಾಜೀದ್ ಹಿರೇಕೋಡಿ ಕಿಡಿ ಕಾರಿದ್ದಾರೆ.

6 ಮಂದಿಗೆ ವಾರ್ಷಿಕ ಪ್ರಶಸ್ತಿ

ಕೊಡವ ಸಾಹಿತ್ಯ ಅಕಾಡೆಮಿಯಿಂದ 30ರಂದು ಪ್ರದಾನ

ಕೋಡಿಮಣಿಯಂಡ ತಮ್ಮುಣಿ ಬೋಪಯ್ಯ ಆಣ್ಣಯ್ಯ

ಕಾಟಿಮಡ ಜಿಮ್ಮಿ ಅಣ್ಣಯ್ಯ

ಚೇನಂಡ ರಘು ಉತ್ತಪ್ಪ

ಕೈಬುಲಿರ ಪಾರ್ವತಿ ಬೋಪಯ್ಯ

ಚೀಯಕಪೂವಂಡ ಬಿ.ದೇವಯ್ಯ

ಹೀರಕುಟ್ಟಡ ಟಸ್ಸಿ ಸದನ್

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯಿಂದ ನೀಡಲಾಗುವ 2022-23ನೇ ಮತ್ತು 2023-24ನೇ ಸಾಲಿನ ವಾರ್ಷಿಕ ಪ್ರಶಸ್ತಿಗೆ 6 ಮಂದಿಯನ್ನು ಆಯ್ಕೆ ಮಾಡಲಾಗಿದೆ.

ವಾರ್ಷಿಕ ಪ್ರಶಸ್ತಿಯು ತಲಾ ₹50 ಸಾವಿರ ಬಹುಮಾನವನ್ನು ಒಳಗೊಂಡಿದೆ.

'ಕೋಡಿಮಣಿಯಂಡ ತಮ್ಮುಣಿ ಬೋಪಯ್ಯ (ಕೊಡವ ಸಂಸ್ಕೃತಿ, ಪಾಟ್-ಪಡಿಪು ಕ್ಷೇತ್ರ), ಕಾಟಿಮಡ ಜಿಮ್ಮಿ ಅಣ್ಣಯ್ಯ (ಕೊಡವ ಸಾಹಿತ್ಯ ಮತ್ತು ಶಿಕ್ಷಣ ಕ್ಷೇತ್ರ), ಚೇನಂಡ ರಘು ಉತ್ತಪ್ಪ (ಕೊಡವಜಾನಪದ ಕ್ಷೇತ್ರ), ಕೈಬುಲಿರ ಪಾರ್ವತಿ ಬೋಪಯ್ಯ (ಸಮಾಜ ಸೇವಾ ಕ್ಷೇತ್ರ), ಚೀಯಕಪೂವಂಡ ಬಿ. ದೇವಯ್ಯ (ಕೊಡವ ಆಟ್-ಪಾಟ್, ಸಂಸ್ಕೃತಿ ಕ್ಷೇತ್ರ), ಹೀರಕುಟ್ಟಡ ಟಸ್ಸಿ ಸದನ್ (ಜನ ಸೇವಾ ಕ್ಷೇತ್ರ) ಗೌರವ ಪ್ರಶಸ್ತಿಗೆ ಆಯ್ಕೆ ಯಾಗಿದ್ದಾರೆ' ಎಂದು ಅಕಾಡೆಮಿ ಅಧ್ಯಕ್ಷ ಅಜ್ಜಿನಿಕಂಡ ಸಿ. ಮಹೇಶ್ ನಾಚಯ್ಯ ಅವರು ಇಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಮಾರ್ಚ್ 29 ಹಾಗೂ 30ರಂದು ಅಮ್ಮತ್ತಿಯ ಕೊಡವ ಸಮಾಜದಲ್ಲಿ 'ಕೊಡವ ಬಲ್ಯನಮ್ಮೆ'ಯನ್ನು ಆಯೋಜಿಸಿದ್ದು, 9 ಪುಸ್ತಕಗಳ ಬಿಡುಗಡೆ ನಡೆಯಲಿದೆ' ಎಂದು ಅವರು ಮಾಹಿತಿ ನೀಡಿದರು.

'ಸಿ.ಎಂ ಬದಲಾವಣೆ ಚರ್ಚೆ ನಡೆದಿಲ್ಲ'

ಪ್ರಜಾವಾಣಿ ವಾರ್ತೆ

ಅಭಿಷೇಕ್ ಮನು ಸಿಂಘ್ವಿ

ಮೈಸೂರು: 'ಕರ್ನಾಟಕದಲ್ಲಿ ಅಧಿಕಾರ ಹಂಚಿಕೆ ಅಥವಾ ಮುಖ್ಯಮಂತ್ರಿ ಬದಲಾವಣೆ ಎಂಬುದೆಲ್ಲ ಮಾಧ್ಯಮಗಳ ಸೃಷ್ಟಿ. ನಾಯಕತ್ವ ಬದಲಾವಣೆಯಂತಹ ಯಾವುದೇ ಚರ್ಚೆಗಳು ಸದ್ಯ ಪಕ್ಷದ ಮಟ್ಟದಲ್ಲಿ ನಡೆದಿಲ್ಲ' ಎಂದು ಎಐಸಿಸಿ ವಕ್ತಾರ ಅಭಿಷೇಕ್ ಮನು ಸಿಂಘ್ವಿ ಹೇಳಿದರು.

ಇಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಉತ್ತಮ ಆಡಳಿತ ನೀಡುತ್ತಿದ್ದಾರೆ. ಉತ್ತಮ ಸಮನ್ವಯವಿದೆ. ಅನಿವಾರ್ಯ ಆದಾಗ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಹೈಕಮಾಂಡ್ ತೀರ್ಮಾನ ಕೈಗೊಳ್ಳುತ್ತದೆ' ಎಂದರು.

'ಲೋಕಸಭಾ ಕ್ಷೇತ್ರಗಳ ಪುನರ್ ವಿಂಗಡಣೆ ವಿಚಾರದಲ್ಲಿ ಪ್ರಧಾನಿ ಮೋದಿ ಹಾಗೂ ಕೇಂದ್ರದ ಗೃಹ ಸಚಿವ ಅಮಿತ್ ಶಾ ದಕ್ಷಿಣ ರಾಜ್ಯಗಳ ಕ್ಷೇತ್ರ ಕಡಿಮೆ ಆಗುವುದಿಲ್ಲ ಎಂದು ಹೇಳುತ್ತಿದ್ದಾರೆಯೇ ಹೊರತು ಉತ್ತರ ಭಾರತದ ಕ್ಷೇತ್ರಗಳ ಹೆಚ್ಚಳ ಆಗುವುದಿಲ್ಲ ಎಂದು ಹೇಳುತ್ತಿಲ್ಲ. ಈ ಕುರಿತು ಸರ್ವಪಕ್ಷಗಳನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ನಿರ್ಣಯ ಕೈಗೊಳ್ಳುವ ಅಗತ್ಯವಿದೆ' ಎಂದರು.

'ಚುನಾವಣೆಗಳಲ್ಲಿ ಇವಿಎಂ ಬಳಕೆ ಬಗ್ಗೆ ನಮಗೆ ತಕರಾರಿಲ್ಲ. ಆದರೆ, ಚುನಾವಣೆ ಪ್ರಕ್ರಿಯೆಯಲ್ಲಿ ಕೆಲವು ಗೊಂದಲಗಳಿವೆ. ಇವಿಎಂಗಳಲ್ಲಿ ಚಲಾವಣೆಯಾದ ಮತಗಳ ತಾಳೆ ಹಾಕುವ ಪ್ರಕ್ರಿಯೆಯನ್ನು ಕನಿಷ್ಠ ಶೇ 25ರಿಂದ 33ರಷ್ಟನ್ನು ನಡೆಸಬೇಕು ಎನ್ನುವುದು ನಮ್ಮ ಒತ್ತಾಯ. ಆದರೆ, ಕೇಂದ್ರ ಹಾಗೂ ಚುನಾವಣಾ ಆಯೋಗವು ಸುಪ್ರೀಂ ಕೋರ್ಟ್ ಆದೇಶದ ನಂತರ ಕೇವಲ ಶೇ 5ರಷ್ಟು ಮತಗಳ ಪರಿಶೀಲನೆ ನಡೆಸುತ್ತಿದೆ. ಇಂತಹ ಬೆಳವಣಿಗೆಗಳು ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕವಾಗಿವೆ' ಎಂದು ಹೇಳಿದರು.

ಆನೆ, ಚಿರತೆ ಕಳೇಬರ ಪತ್ತೆ

ಅರಕಲಗೂಡು (ಹಾಸನ ಜಿಲ್ಲೆ): ತಾಲ್ಲೂಕಿನಲ್ಲಿ ಎರಡು ಪ್ರತ್ಯೇಕ ಘಟನೆಗಳಲ್ಲಿ ಆನೆ ಮತ್ತು ಚಿರತೆಯ ಕಳೇಬರ ಪತ್ತೆಯಾಗಿವೆ.

ಶನಿವಾರ ನೆಲಬಳ್ಳಿ ಗ್ರಾಮದಲ್ಲಿ ನೀಳವಾದ ಎರಡು ದಂತಗಳನ್ನು ಹೊಂದಿರುವ ಸುಮಾರು 25 ವರ್ಷದ ಗಂಡಾನೆ ಕೃಷಿ ಜಮೀನಿನಲ್ಲಿ ಮೃತಪಟ್ಟಿದೆ. ಸಾವಿಗೆ ನಿಖರ ಕಾರಣ ತಿಳಿದುಬಂದಿಲ್ಲ. ವಿದ್ಯುತ್ ತಗುಲಿ ಮೃತಪಟ್ಟಿರಬಹುದು ಎಂದು ಅರಣ್ಯ ಅಧಿಕಾರಿಗಳು ಶಂಕಿಸಿದ್ದಾರೆ.

ಸಂತೆಮರೂರು ಗ್ರಾಮದ ಕೆರೆ ಏರಿಯನ್ನು ಶುಕ್ರವಾರ ಮಧ್ಯಾಹ್ನ ಸ್ವಚ್ಛ ಮಾಡುವ ವೇಳೆ ಚಿರತೆ ಕಳೇಬರ ಪತ್ತೆಯಾಗಿದೆ. ಅದು ಕೊಳೆತ ಸ್ಥಿತಿಯಲ್ಲಿದ್ದು, ಚರ್ಮ, ಹಲ್ಲು, ಉಗುರುಗಳು ಯಥಾಸ್ಥಿತಿಯಲ್ಲಿವೆ. ಚಿರತೆಯ ಚರ್ಮದ ಮೇಲೆ ಮುಳ್ಳು ಹಂದಿಯ ಮುಳ್ಳುಗಳು ಚುಚ್ಚಿರುವುದು ಕಂಡುಬಂದಿದೆ ಎಂದು ಅರಣ್ಯ ಅಧಿಕಾರಿಗಳು ತಿಳಿಸಿದ್ದಾರೆ.

THE RAICHUR DISTRICT CENTRAL CO OPERATIVE BANK LTD., RAICHUR

Ref: RKDCC/HO/Securityguard3/ Date :15.03.2025

e-Procurement Tender Notice

The Raichur and Koppal District Central Co-Operative Bank Ltd., Raichur invites e-Tender reference no: RDCCB/2024-25/SE0006 "Tender for Providing 30 Nos Security Guards to Watch & Ward Duties at RKDCC BANK LTD, RAICHUR, Head Office and Bank Branches situated across Raichur and Koppal District on Contract Basis for 3 Years ."Tender Schedule and details can be obtained from KPP Portal https://kppp.karnataka.gov.in

Sd/- **(M B Pujar)** Chief Executive Officer
R K D C C BANK Ltd., Raichur.

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ
ವಾರಾಹಿ ಯೋಜನಾ ವಿಭಾಗ, ಸಿದ್ಧಾಪುರ, ಉಡುಪಿ ಜಿಲ್ಲೆ–576229
ಕಛೇರಿ ಟೆಂಡರ್ ತಿದ್ದುಪಡಿ ಪ್ರಕಟಣೆ ಸಂಖ್ಯೆ:ಕಾಇಂ/ಕನೀನಿನಿ/ವಾಯೋವಿ/ಪಿಬಿ/ಟೆಂಡರ್/20/2024–25/1662 ದಿನಾಂಕ: 14/03/2025

ಟೆಂಡರ್ ತಿದ್ದುಪಡಿ ಪ್ರಕಟಣೆ

ವಾರಾಹಿ ಯೋಜನಾ ವಿಭಾಗದ ಕಾರ್ಯ ವ್ಯಾಪ್ತಿಯಲ್ಲಿ ಬರುವ ವಾರಾಹಿ ಎಡದಂಡೆ ವಿತರಣಾ ನಾಲೆ – 32ರ ನಿರ್ಮಾಣ ಕಾಮಗಾರಿ ಇಂಡೆಂಟ್ ಸಂಖ್ಯೆ: (KNNL/202425/CN/WORK_INDENT2443) ದಿನಾಂಕ: 31.01.2025 ರಂದು ಟೆಂಡರ್ ಪ್ರಕಟಿಸಲಾಗಿದ್ದು, ಪ್ರಸ್ತುತ ಈ ಕೆಳಕಂಡ ದಿನಾಂಕಕ್ಕೆ ತಿದ್ದುಪಡಿಯಾಗಿರುತ್ತದೆ.
1. ಗುತ್ತಿಗೆದಾರರು ಅಂತರ್ಜಾಲದ ಮೂಲಕ ಇ-ಪ್ರಕ್ಯೂರ್‌ಮೆಂಟ್ ವೇದಿಕೆಯಲ್ಲಿ ಟೆಂಡರಿಗೆ ನಲ್ಲಿ ಭಾಗವಹಿಸಲು ಕೊನೆಯ ದಿನಾಂಕ: 21.03.2025 ಸಂಜೆ 5.00 ಗಂಟೆಯವರೆಗೆ.
2. ಟೆಂಡರ್‌ನ್ನು ತೆರೆಯುವ ದಿನಾಂಕ: 24/03/2025 ಸಂಜೆ 5.15 ಗಂಟೆಗೆ
3. ಹೆಚ್ಚಿನ ವಿವರಗಳಿಗಾಗಿ https://kppp.karnataka.gov.in ಅಂತರ್ಜಾಲ ಅಥವಾ ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ವಾರಾಹಿ ಯೋಜನಾ ವಿಭಾಗ, ಇವರನ್ನು ಸಂಪರ್ಕಿಸುವುದು.
4. ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ, ಮಾರ್ಪಾಡು ಅಥವಾ ಇತರ ಬದಲಾವಣೆಗಳಿದ್ದಲ್ಲಿ https://kppp.karnataka.gov.in ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸಲಾಗುವುದು.

ಸಹಿ/– **ಕಾರ್ಯಪಾಲಕ ಇಂಜಿನಿಯರ್,**
ಕನೀನಿನಿ, ವಾರಾಹಿ ಯೋಜನಾ ವಿಭಾಗ, ಸಿದ್ಧಾಪುರ, ಉಡುಪಿ ಜಿಲ್ಲೆ

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ
ಪ್ರಧಾನ ಕಛೇರಿ: ಕೆ.ಎಸ್.ಎಫ್.ಸಿ ಭವನ, ನಂ.1/1, ತಿಮ್ಮಯ್ಯ ರಸ್ತೆ
ಕಂಟೋನ್ಮೆಂಟ್ ರೈಲು ನಿಲ್ದಾಣದ ಹತ್ತಿರ, ಬೆಂಗಳೂರು–560 052.
ದೂರವಾಣಿ ಸಂಖ್ಯೆ: 080–22282507 Website: https://ksfc.karnataka.gov.in

ಸಂಖ್ಯೆ: ಕರಾಹಸಂ/ಪ್ರಕ/ಆಡಳಿತ/ಕಾಫಿ/4/2024–25/Call-II/297, ದಿನಾಂಕ: 15.03.2025

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಪ್ರಧಾನ ಕಛೇರಿ, ಬೆಂಗಳೂರು, ಇಲ್ಲಿನ ಸಿಬ್ಬಂದಿಗಳಿಗೆ ಕಾಫಿ/ಟೀ ಸರಬರಾಜು ಮಾಡುವ ಸಲುವಾಗಿ ಒಂದು ವರ್ಷದ ಅವಧಿಗೆ ಅನುಭವಸ್ಥ ವ್ಯಕ್ತಿಗಳು/ಏಜೆನ್ಸಿಗಳಿಂದ ಇ-ಟೆಂಡರ್‌ಗಳನ್ನು ಕರ್ನಾಟಕ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಕರೆಯಲಾಗಿದೆ. ಸಮಯಾನುಸಾರ ಘಟನೆಗಳ ವಿವರ: (1) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 15.04.2025 ಮಧ್ಯಾಹ್ನ 4.00 ಗಂಟೆ. (2) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 17.04.2025. ಆಸಕ್ತಿಯುಳ್ಳವರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್–www.eproc.karnataka.gov.in ಮೂಲಕ ಟೆಂಡರ್ ವಿವರಗಳನ್ನು ಡೌನ್‌ಲೋಡ್ ಮಾಡಿ ಅವುಗಳನ್ನು ಭರ್ತಿ ಮಾಡಿ ಇದೇ ವೆಬ್‌ಸೈಟ್ ಮೂಲಕ ಸಲ್ಲಿಸಬೇಕಾಗಿರುತ್ತದೆ. ಇ.ಎಂ.ಡಿ ಮತ್ತು ಟೆಂಡರ್ ಪ್ರೊಸೆಸಿಂಗ್ ಶುಲ್ಕವನ್ನು ವಿದ್ಯುನ್ಮಾನ ಮೂಲಕವೇ ಸಲ್ಲಿಸತಕ್ಕದ್ದು. ಟೆಂಡರ್ ಪ್ರಕ್ರಿಯೆಯಲ್ಲಿ ಏನಾದರೂ ಬದಲಾವಣೆಗಳಿದ್ದರೆ, ಇದೇ ವೆಬ್‌ಸೈಟ್ ಮೂಲಕ ತಿಳಿಸಲಾಗುವುದು. ವಿವರಗಳಿಗಾಗಿ ಸಂಪರ್ಕಿಸಿ ವ್ಯವಸ್ಥಾಪಕರು (ಆಡಳಿತ) 080–22282507.

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು (ಪಿ ಮತ್ತು ಆ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಸರ್ವಜ್ಞನಗರ ವಿಭಾಗ, 7ನೇ ಮಹಡಿ
ಪಿ.ಯು. ಕಟ್ಟಡ, ಎಂ.ಜಿ ರಸ್ತೆ, ಬೆಂಗಳೂರು–560001.
ಸಂ: ಕಾಪಾಅ(ಸನ)/ಕೆಪಿಪಿಪಿ/ಟೆಂಡ್/18/2024–25 ದಿನಾಂಕ: 15.03.2025

ಟೆಂಡರ್‌ಗಾಗಿ ಆಹ್ವಾನ

(ಜಿಓಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ) (ದ್ವಿಲಕೋಟೆ ಪದ್ಧತಿ)

ಕಾರ್ಯಪಾಲಕ ಅಭಿಯಂತರರು, ಸರ್ವಜ್ಞನಗರ ವಿಭಾಗ, ಪೂರ್ವ ವಲಯ ಇವರು ಬ್ಯ.ಬೆಂ.ಮ.ಪಾಲಿಕೆಯಲ್ಲಿ ನೋಂದಾಯಿಸಿರುವ ಅಥವಾ ತತ್ಸಮಾನ ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ರೈಲ್ವೇಸ್ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ / ರಾಜ್ಯ ಸರ್ಕಾರದಲ್ಲಿ ನೋಂದಾಯಿಸಿರುವ 1ನೇ ದರ್ಜೆ ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ.ಸಂ.	ಕಾಮಗಾರಿಗಳ ವಿವರ
1	ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ಧೋಬಿ ಘಾಟ್, ಲಾಜರ್ ರಸ್ತೆ, ಎಂ.ಎಸ್. ನಗರಕ್ಕೆ ಯಂತ್ರೋಪಕರಣಗಳನ್ನು ಒದಗಿಸುವುದು ಮತ್ತು ಸ್ಥಾಪಿಸುವ ಕಾಮಗಾರಿ. **ಅಂದಾಜು ಮೊತ್ತ:** ರೂ. 200.00 ಲಕ್ಷಗಳು, **ಇಎಂಡಿ:** ರೂ. 3.00 ಲಕ್ಷಗಳು (1 ಲಕ್ಷ ರೂ. ಇ-ಪಾವತಿ ಮೂಲಕ ಮತ್ತು ಬಾಕಿ ರೂ. 2,00,000/– ಬ್ಯಾಂಕ್ ಗ್ಯಾರಂಟಿ/ಎಫ್‌ಡಿಆರ್ ಮೂಲಕ)
2	ಎಚ್‌ಬಿಆರ್ ಲೇಔಟ್‌ನಲ್ಲಿರುವ ಮಲ್ಲಿಸೆಷಾಲಿಟಿ ಆಸ್ಪತ್ರೆಗೆ ಹೆಚ್ಚಿವರಿ ಮತ್ತು ಸಮತೋಲನ ನಿರ್ಮಾಣಗಳ ಕಾಮಗಾರಿ. **ಅಂದಾಜು ಮೊತ್ತ:** ರೂ. 500.00 ಲಕ್ಷಗಳು, **ಇಎಂಡಿ:** ರೂ. 7,50,000/– (1 ಲಕ್ಷ ರೂ. ಇ-ಪಾವತಿ ಮೂಲಕ ಮತ್ತು ಬಾಕಿ ರೂ. 6,50,000/– ಬ್ಯಾಂಕ್ ಗ್ಯಾರಂಟಿ/ಎಫ್‌ಡಿಆರ್ ಮೂಲಕ)

1) ಟೆಂಡರ್ ಡಾಕ್ಯುಮೆಂಟ್‌ಗಳು ಕೆಪಿಪಿ ಪೋರ್ಟಲ್‌ನಿಂದ **20.03.2025ರಂದು 4:00 ಗಂಟೆಯಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಪೂರ್ವಭಾವಿ ಸಭೆಯ **ದಿನಾಂಕ: 26.03.2025ರಂದು ಸಂಜೆ 4:00 ಗಂಟೆಗೆ.** 3) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **01.04.2025 ಸಂಜೆ 4.00 ಗಂಟೆಯವರೆಗೆ.** 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **02.04.2025 ರ ಸಂಜೆ 4.30 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: **https://kppp.karnataka.gov.in** ನಲ್ಲಿ ಲಾಗಿನ್ ಮಾಡಿ ಪಡೆಯಬಹುದು ಅಥವಾ 080–22485867ನ್ನು ಅಥವಾ ಕೆಳಸಹಿದಾರರ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಸರ್ವಜ್ಞನಗರ ವಿಭಾಗ.

ಮೈಸೂರು ಸಕ್ಕರೆ ಕಂಪನಿ ನಿಯಮಿತ,
(ಕರ್ನಾಟಕ ಸರ್ಕಾರದ ಒಳಸ್ವಾಮ್ಯಕ್ಕೆ ಒಳಪಟ್ಟಿದೆ)
ಸಕ್ಕರೆ ನಗರ, ಮಂಡ್ಯ–571 402.
ಎಂಎಸ್‌ಕೋ/ಆಡಳಿತ / 763/2024–25 ದಿ:14–03–2025

ಇ–ಟೆಂಡರ್ ಪ್ರಕಟಣೆ ಸಂಖ್ಯೆ:MSCO/2024-25/SE0009

ಮೈಸೂರು ಸಕ್ಕರೆ ಕಂಪನಿ ನಿಯಮಿತ ಮಂಡ್ಯ, ಕಾರ್ಖಾನೆಯ ದೈನಂದಿನ ಕಾರ್ಯಗಳನ್ನು ಅನುಷ್ಠಾನಗೊಳಿಸಲು ಕಂಪನಿಯ ವಿವಿಧ ವಿಭಾಗಗಳಲ

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100ಕ್ಕೆ ₹435
12 ಕ್ಕೆ ₹60
ಮೈಸೂರು
100ಕ್ಕೆ ₹430

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹193
ಆರ್‌ಎಸ್‌ಎಸ್-5 ₹187
ಗುಡ್ ಲಾಟ್ ₹181
(ಪ್ರತಿ ಕೆ.ಜಿಗೆ)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹311-662
ದ್ವಿತಳಿ (ಬಿ.ಎ)	₹232-825

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು
ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

16x365 DAYS PASSED
CHETAN B.E. MBA
18-4-80 16-03-09
'ಓ ನನ್ನ ಚೇತನ ಆಗು ನೀ ಅನಿಕೇತನ'
ಎಂ. ಮಹಾಲಕ್ಷ್ಮೀ ನಾಗರಾಜ್

ವಿದೇಶಿ ವಿನಿಮಯ ಸಂಗ್ರಹ ಏರಿಕೆ

ಮುಂಬೈ (ಪಿಟಿಐ): ಕಳೆದ ವಾರ ಇಳಿಕೆ ಕಂಡಿದ್ದ ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹವು ಮಾರ್ಚ್ 7ಕ್ಕೆ ಕೊನೆಗೊಂಡ ವಾರದಲ್ಲಿ ಏರಿಕೆಯಾಗಿದೆ. ಕಳೆದ ಎರಡು ವರ್ಷದ ಅವಧಿಯಲ್ಲಿ ಆಗಿರುವ ಅತಿಹೆಚ್ಚು ಏರಿಕೆ ಇದಾಗಿದೆ.

ಒಟ್ಟು ₹1.32 ಲಕ್ಷ ಕೋಟಿ ಹೆಚ್ಚಳವಾಗಿದ್ದು, ಒಟ್ಟು ಮೀಸಲು ಸಂಗ್ರಹವು ₹56.85 ಲಕ್ಷ ಕೋಟಿಗೆ ಮುಟ್ಟಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಶನಿವಾರ ತಿಳಿಸಿದೆ.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಇಳಿಕೆ ಕಂಡಿತ್ತು. ದೇಶದ ಆಮದು ಮತ್ತು ರಫ್ತು ವಹಿವಾಟು ನಡುವಿನ ವ್ಯತ್ಯಾಸವಾದ ವ್ಯಾಪಾರ ಕೊರತೆಯು ಈ ಮೌಲ್ಯ ಕುಸಿತಕ್ಕೆ ಕಾರಣವಾಗಿತ್ತು. ಆರ್‌ಬಿಐನ ಮಧ್ಯಪ್ರವೇಶದಿಂದಾಗಿ ಸದ್ಯ ರೂಪಾಯಿ ಬಲಗೊಳ್ಳುತ್ತಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಕಳೆದ ವರ್ಷದ ಸೆಪ್ಟೆಂಬರ್ ಅಂತ್ಯದಲ್ಲಿ ವಿದೇಶಿ ವಿನಿಮಯ ಮೀಸಲು ಸಂಗ್ರಹವು ₹61.28 ಲಕ್ಷ ಕೋಟಿಗೆ ತಲುಪುವ ಮೂಲಕ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೇರಿತ್ತು.

ಆರ್‌ಬಿಐ ಇತ್ತೀಚೆಗೆ ಬ್ಯಾಂಕ್‌ಗಳಿಂದ ₹86 ಸಾವಿರ ಕೋಟಿ ಮೌಲ್ಯದ ಡಾಲರ್‌ಗಳನ್ನು ಖರೀದಿಸಿದೆ. ಇದರಿಂದ ರೂಪಾಯಿ ಮೌಲ್ಯ ಬಲಗೊಂಡಿದ್ದು, ವಿದೇಶಿ ವಿನಿಮಯ ಮೀಸಲು ಸಂಗ್ರಹದಲ್ಲೂ ಏರಿಕೆಯಾಗಿದೆ ಎಂದು ತಜ್ಞರು ಹೇಳಿದ್ದಾರೆ.

ವಿದೇಶಿ ವಿನಿಮಯ ಸಂಗ್ರಹದ ಪ್ರಮುಖ ಭಾಗವಾದ ವಿದೇಶಿ ಕರೆನ್ಸಿಗಳ ಸಂಗ್ರಹವು ಈ ವಾರದ ಅವಧಿಯಲ್ಲಿ ₹1.21 ಲಕ್ಷ ಕೋಟಿ ಏರಿಕೆಯಾಗಿದ್ದು, ಒಟ್ಟು ಸಂಗ್ರಹವು ₹48.45 ಲಕ್ಷ ಕೋಟಿ ಆಗಿದೆ.

ಚಿನ್ನದ ಮೀಸಲು ಸಂಗ್ರಹವು ₹9,154 ಕೋಟಿ ಹೆಚ್ಚಳವಾಗಿದ್ದು, ಒಟ್ಟು ₹6.46 ಲಕ್ಷ ಕೋಟಿಗೆ ಮುಟ್ಟಿದೆ.

ಸ್ಪೆಷಲ್ ಡ್ರಾಯಿಂಗ್ ರೈಟ್ಸ್ (ಎಸ್‌ಡಿಆರ್) ₹1,840 ಕೋಟಿ ಹೆಚ್ಚಳವಾಗಿದ್ದು, ₹88,765 ಕೋಟಿ ಆಗಿದೆ. ಅಂತರರಾಷ್ಟ್ರೀಯ ಹಣಕಾಸು ನಿಧಿಯಲ್ಲಿನ (ಐಎಂಎಫ್) ಮೀಸಲು ಸಂಗ್ರಹವು ₹599 ಕೋಟಿ ಕಡಿಮೆಯಾಗಿದ್ದು, ₹36 ಸಾವಿರ ಕೋಟಿ ಆಗಿದೆ.

ಲೆಕ್ಕಪತ್ರ ವ್ಯತ್ಯಾಸ ಸರಿಪಡಿಸಿಕೊಳ್ಳಲು ಇಂಡಸ್ ಬ್ಯಾಂಕ್‌ಗೆ ಸೂಚನೆ

ಮುಂಬೈ (ಪಿಟಿಐ): ಇಂಡಸ್ ಇಂಡ್ ಬ್ಯಾಂಕ್‌ನ ವಾಯಿದೆ ವಹಿವಾಟಿನ ಲೆಕ್ಕಪತ್ರದಲ್ಲಿ ಕಂಡುಬಂದಿರುವ ವ್ಯತ್ಯಾಸ ಸರಿಪಡಿಸಿಕೊಳ್ಳಲು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಸೂಚಿಸಿದೆ.

ಬ್ಯಾಂಕ್‌ನ ಲೆಕ್ಕಪತ್ರದಲ್ಲಿ ₹2,100 ಕೋಟಿ ವ್ಯತ್ಯಾಸ ಕಂಡುಬಂದಿದೆ. ಪ್ರಸಕ್ತ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದ ಅಂತ್ಯದೊಳಗೆ ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕು ಎಂದು ಸೂಚಿಸಿದೆ.

ಬ್ಯಾಂಕ್‌ನ ಹಣಕಾಸು ಸ್ಥಿತಿಯನ್ನು ಪರಿಶೀಲಿಸಿದ್ದು, ಸ್ಥಿರವಾಗಿದೆ. ಹಾಗಾಗಿ, ಗ್ರಾಹಕರು ಮತ್ತು ಹೂಡಿಕೆದಾರರು ಊಹಾಪೋಹಗಳ ಬಗ್ಗೆ ಆತಂಕಪಡುವ ಅಗತ್ಯವಿಲ್ಲ. ಬ್ಯಾಂಕ್‌ನ ಆಡಳಿತ ಮಂಡಳಿಯು ಸಮಸ್ಯೆ ಬಗೆಹರಿಸಲು ತ್ವರಿತವಾಗಿ ಕ್ರಮವಹಿಸಬೇಕಿದೆ ಎಂದು ನಿರ್ದೇಶನ ನೀಡಿದೆ.

ಡಿಸೆಂಬರ್ ತ್ರೈಮಾಸಿಕದ ಅಂತ್ಯಕ್ಕೆ ಬ್ಯಾಂಕ್‌ನ ಸಮರ್ಪಕ ಬಂಡವಾಳ ಅನುಪಾತವು (ಸಿಎಆರ್) ಶೇ 16.46ರಷ್ಟಿದೆ. ಗ್ರಾಹಕರಿಂದ ಠೇವಣಿ ಸಂಗ್ರಹಿಸುವ ಬ್ಯಾಂಕ್‌ಗಳ ನಗದು ರಕ್ಷಣೆ ಅನುಪಾತವು (ಎಲ್‌ಸಿಆರ್) ಶೇ 113ರಷ್ಟಿದೆ.

ಸುಂಕ ಸಮರ: ಜನವರಿಯಿಂದ ಇಲ್ಲಿಯವರೆಗೆ ಚಿನ್ನದ ಧಾರಣೆ ಶೇ 14ರಷ್ಟು ಏರಿಕೆ

ಹಳದಿ ಲೋಹ ಬಲು ದುಬಾರಿ

ಬೆಂಗಳೂರು (ರಾಯಿಟರ್ಸ್): ಅಮೆರಿಕದ ಸುಂಕ ನೀತಿಯು ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರ ಏರಿಕೆಗೆ ಕಾರಣವಾಗಿದೆ. ಪ್ರಸಕ್ತ ವರ್ಷದ ಜನವರಿಯಿಂದ ಇಲ್ಲಿಯವರೆಗೆ ಹಳದಿ ಲೋಹದ ಬೆಲೆಯಲ್ಲಿ ಶೇ 14ರಷ್ಟು ಹೆಚ್ಚಳವಾಗಿದೆ.

ಕಳೆದ ವರ್ಷವೂ ಚಿನ್ನದ ಬೆಲೆಯು ಶೇ 27ರಷ್ಟು ಏರಿಕೆ ಕಂಡಿತ್ತು. ಇಸ್ರೇಲ್ ಮತ್ತು ಹಮಾಸ್, ರಷ್ಯಾ ಮತ್ತು ಉಕ್ರೇನ್ ನಡುವಿನ ಸಂಘರ್ಷವು ಜಾಗತಿಕ ಬಿಕ್ಕಟ್ಟು ಸೃಷ್ಟಿಸಿದೆ. ಈಗ ಸುಂಕ ಸಮರವು ಚಿನ್ನದ ಧಾರಣೆಯ ಏರಿಕೆಗೆ ಕಾರಣವಾಗಿದೆ ಎಂದು ಚಿನಿವಾರ ಪೇಟೆಯ ತಜ್ಞರು ಹೇಳಿದ್ದಾರೆ.

ಕೆನಡಾ ಮತ್ತು ಮೆಕ್ಸಿಕೊದ ಸರಕುಗಳ ಮೇಲೆ ಅಮೆರಿಕವು ಶೇ 25ರಷ್ಟು ಸುಂಕ ವಿಧಿಸುತ್ತಿದೆ. ಚೀನಾದ ಸರಕುಗಳಿಗೂ ಸುಂಕದ ಬಿಸಿ ತಟ್ಟಿದೆ. ಇದಕ್ಕೆ ಪ್ರತಿಯಾಗಿ ಈ ಮೂರು ರಾಷ್ಟ್ರಗಳು, ಅಮೆರಿಕದ ಸರಕುಗಳ ಮೇಲೆ ಸುಂಕ ಹೇರಿಕೆಗೆ ಮುಂದಾಗಿವೆ. ಮತ್ತೊಂದೆಡೆ ಏಪ್ರಿಲ್ 2ರಿಂದ ಭಾರತದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೂ ಹೆಚ್ಚು ಸುಂಕ ವಿಧಿಸುವುದಾಗಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ.

'ಸುಂಕ ಸಮರದಿಂದಾಗಿ ಜಾಗತಿಕ ಷೇರುಪೇಟೆಗಳು ಇಳಿಕೆ ಕಾಣುತ್ತಿವೆ. ಹಲವು ದೇಶಗಳ ಆರ್ಥಿಕತೆ ಬೆಳವಣಿಗೆ ದರವು ಮಂದಗತಿಯಲ್ಲಿದೆ. ಇದು ಸಹಜವಾಗಿ ಚಿನ್ನದ ಮೇಲಿನ ಹೂಡಿಕೆ ಹೆಚ್ಚಳಕ್ಕೆ ಕಾರಣವಾಗಿದೆ' ಎಂದು ಡೆನ್ಮಾರ್ಕ್‌ನ ಸ್ಕಾಕ್ಸೋ ಬ್ಯಾಂಕ್‌ನ ಸರಕು ವಿಭಾಗದ ಮುಖ್ಯಸ್ಥ ಓಲೆ ಹ್ಯಾನ್ಸೆನ್ ಹೇಳುತ್ತಾರೆ.

'ಡಾಲರ್ ಮೌಲ್ಯ ಏರಿಳಿತ ಕಾಣುತ್ತಿರುವುದರಿಂದ ಕೇಂದ್ರೀಯ ಬ್ಯಾಂಕ್‌ಗಳು ಚಿನ್ನದ ಮೀಸಲು ಸಂಗ್ರಹಕ್ಕೆ ಮುಂದಾಗಿವೆ. ಇದು ಹಳದಿ ಲೋಹದ ಬೆಲೆ ಏರಿಕೆಗೆ ಕಾರಣವಾಗಿದೆ' ಎಂದು ಐಲ್ಯಾಂಡ್‌ನ ಚಿನ್ನ ವಹಿವಾಟು ಕಂಪನಿಯಾದ ಗೋಲ್ಡ್‌ಕೋರ್ ಸಿಇಒ ಡೇವಿಡ್ ರಸೆಲ್ ಹೇಳುತ್ತಾರೆ.

'ಚಿನ್ನದ ಬೆಲೆ ಏರಿಕೆ ಹಿಂದೆ ಹಲವು ಕಾರಣಗಳಿವೆ. ಜಾಗತಿಕ ಬಿಕ್ಕಟ್ಟು ಇನ್ನೂ ಶಮನಗೊಂಡಿಲ್ಲ. ಇದರಿಂದ ಜಾಗತಿಕ ಮಟ್ಟದಲ್ಲಿ ಹಣದುಬ್ಬರ ಏರಿಕೆಯಾಗುವ ಆತಂಕವಿದೆ' ಎಂಬುದು ವಿಶ್ವ ಚಿನ್ನದ ಸಮಿತಿಯ (ಡಬ್ಲ್ಯುಜಿಸಿ) ಸಂಶೋಧನಾ ವಿಭಾಗದ ಮುಖ್ಯಸ್ಥ ಜುವಾನ್ ಕಾರ್ಲೋಸ್ ಅರ್ಟಿಗಾಸ್ ಅವರ ವಿವರಣೆ.

ಬ್ಯಾಂಕ್‌ಗಳಿಂದ ಖರೀದಿ ಹೆಚ್ಚಳ

ವಿಶ್ವದ ವಿವಿಧ ರಾಷ್ಟ್ರಗಳ ಕೇಂದ್ರೀಯ ಬ್ಯಾಂಕ್‌ಗಳು ಮೀಸಲು ಉದ್ದೇಶಕ್ಕಾಗಿ ಅತಿಹೆಚ್ಚು ಪ್ರಮಾಣದಲ್ಲಿ ಚಿನ್ನ ಖರೀದಿಸುತ್ತಿವೆ. ಇದರಿಂದ ಭಾರತವೂ ಹೊರತಲ್ಲ.

ಚೀನಾವು ಸತತ ನಾಲ್ಕು ತಿಂಗಳಿನಿಂದ ಚಿನ್ನದ ಮೀಸಲು ಸಂಗ್ರಹದ ಹೆಚ್ಚಳಕ್ಕೆ ಒತ್ತು ನೀಡಿದೆ. ಜನವರಿ ಅಂತ್ಯಕ್ಕೆ ಚಿನ್ನದ ಮೀಸಲು ಮೌಲ್ಯ ₹17.95 ಲಕ್ಷ ಕೋಟಿ ಇತ್ತು. ಫೆಬ್ರುವರಿ ಅಂತ್ಯಕ್ಕೆ ₹18.13 ಲಕ್ಷ ಕೋಟಿಗೆ ತಲುಪಿದೆ.

ವಿಶ್ವ ಚಿನ್ನದ ಸಮಿತಿಯ ವರದಿ ಪ್ರಕಾರ, ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಸೇರಿ ವಿಶ್ವದ ವಿವಿಧ ದೇಶಗಳ ಕೇಂದ್ರೀಯ ಬ್ಯಾಂಕ್‌ಗಳು ಕಳೆದ ವರ್ಷದ ನವೆಂಬರ್‌ನಲ್ಲಿ 53 ಟನ್ ಚಿನ್ನದ ಮೀಸಲು ಸಂಗ್ರಹಿಸಿವೆ.

ಫೆಡರಲ್ ರಿಸರ್ವ್‌ನತ್ತ ಚಿತ್ತ

ಅಮೆರಿಕದ ಕೇಂದ್ರೀಯ ಬ್ಯಾಂಕ್ ಆದ ಫೆಡರಲ್ ರಿಸರ್ವ್, ಕಳೆದ ವರ್ಷ ಮೂರು ಬಾರಿ ಬಡ್ಡಿದರ ಇಳಿಕೆ ಮಾಡಿತ್ತು. ಪ್ರಸಕ್ತ ವರ್ಷದ ಜನವರಿಯಲ್ಲಿ ನಡೆದ ಹಣಕಾಸು ನೀತಿ ಸಮಿತಿ ಸಭೆಯಲ್ಲಿ ಯಥಾಸ್ಥಿತಿ ಕಾಯ್ದುಕೊಂಡಿತ್ತು.

ಮಾರ್ಚ್ 18 ಮತ್ತು 19ರಂದು ನಡೆಯುವ ಸಭೆಯಲ್ಲಿ ಬಡ್ಡಿದರ ಕಡಿತ ಸಂಬಂಧ ಯಾವ ನಿರ್ಧಾರ ಕೈಗೊಳ್ಳಲಿದೆ ಎಂದು ಹೂಡಿಕೆದಾರರು ಎದುರು ನೋಡುತ್ತಿದ್ದಾರೆ. ಸಭೆಯ ನಿರ್ಧಾರವು ಹಳದಿ ಲೋಹದ ಬೆಲೆ ಏರಿಕೆ ಮೇಲೆ ಪರಿಣಾಮ ಬೀರಲಿದೆ ಎಂದು ತಜ್ಞರು ಹೇಳಿದ್ದಾರೆ.

ಭಾರತದ ಚಿನಿವಾರ ಪೇಟೆಯ ಕಥೆ

ದೆಹಲಿಯ ಚಿನಿವಾರ ಪೇಟೆಯಲ್ಲೂ ಚಿನ್ನದ ಧಾರಣೆಯು ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ತಲುಪಿದೆ. ಆಭರಣ ತಯಾರಕರು, ದಾಸ್ತಾನುಗಾರರಿಂದ ಖರೀದಿ ಹೆಚ್ಚಳವು ಇದಕ್ಕೆ ಕಾರಣವಾಗಿದೆ.

ಅಲ್ಲದೆ, ಜಾಗತಿಕ ಮಾರುಕಟ್ಟೆಯಲ್ಲಿ ಹೂಡಿಕೆದಾರರಿಂದ ಚಿನ್ನದ ಖರೀದಿಯು ಹೆಚ್ಚಳವಾಗಿರುವುದು ದೇಶೀಯ ಮಾರುಕಟ್ಟೆ ಮೇಲೂ ಪರಿಣಾಮ ಬೀರಿದೆ.

ಮೂರು ದಿನದ ಹಿಂದೆ ನಡೆದ ವಹಿವಾಟಿನಲ್ಲಿ 10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹89,450 ಹಾಗೂ ಆಭರಣ ಚಿನ್ನದ ದರವು (ಶೇ 99.5 ಪರಿಶುದ್ಧತೆ) ₹89,050ಕ್ಕೆ ಮುಟ್ಟಿದೆ. ಇದು ಸಾರ್ವಕಾಲಿಕ ಗರಿಷ್ಠ ಮಟ್ಟವಾಗಿದೆ.

ಚಿಲ್ಲರೆ ಹಣದುಬ್ಬರದ ಏರಿಕೆ ಆತಂಕ

ಟ್ರಂಪ್ ಸುಂಕ ನೀತಿಯಿಂದಾಗಿ ಅಮೆರಿಕದಲ್ಲಿ ಚಿಲ್ಲರೆ ಹಣದುಬ್ಬರ ಏರಿಕೆ ಆಗುವ ಆತಂಕ ಎದುರಾಗಿದೆ. ಹಾಗಾಗಿ, ಫೆಡರಲ್ ರಿಸರ್ವ್ ಎಚ್ಚರಿಕೆಯ ಹೆಜ್ಜೆ ಇಡುತ್ತಿದೆ.

ಗ್ರಾಹಕರ ವಿಶ್ವಾಸ ಸೂಚ್ಯಂಕವು ಹೂಡಿಕೆದಾರರಿಗೆ ಪ್ರಮುಖ ಆರ್ಥಿಕ ಸೂಚಕವಾಗಿದೆ. ದೇಶದ ಆರ್ಥಿಕತೆ ಬೆಳವಣಿಗೆ ಬಗ್ಗೆ ಗ್ರಾಹಕರು ಎಷ್ಟು ಆಶಾವಾದಿಗಳಾಗಿದ್ದಾರೆ ಎಂಬುದನ್ನು ಅಳೆಯುತ್ತದೆ. ಅಮೆರಿಕದಲ್ಲಿ ಈ ಸೂಚ್ಯಂಕವು ಮಾರ್ಚ್‌ನಲ್ಲಿ ಎರಡೂವರೆ ವರ್ಷದ ಕನಿಷ್ಠ ಮಟ್ಟವಾದ 57.9ಕ್ಕೆ ಇಳಿದಿದೆ. ಸುಂಕ ಸಮರದಿಂದಾಗಿ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗಬಹುದು. ಇದರಿಂದ ಹಣದುಬ್ಬರ ಹೆಚ್ಚಳವಾಗಲಿದೆ ಎಂಬ ಆತಂಕ ಗ್ರಾಹಕರಿಗೆ ಕಾಡುತ್ತಿದೆ ಎಂದು ತಜ್ಞರು ಹೇಳುತ್ತಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ರಿಯಲ್ ಎಸ್ಟೇಟ್ ಸೆಲ್ಲಿಂಗ್
House
Multiple Locations
ಮಲ್ಲೇಶ್ವರಂ 10TH ಕ್ರಾಸಿನಲ್ಲಿ ಬಿಲ್ಡಿಂಗ್ ಖಾಲಿ ಇದೆ. ಶೇಷಾದ್ರಿಪುರಂನಲ್ಲಿ 2BHK ಮನೆ ಖಾಲಿಇದೆ ದೊಡ್ಡಕಲ್ಲಸಂದ್ರದಲ್ಲಿ ಸೈಟ್ ಮಾರಾಟಕ್ಕಿದೆ Ph: 9019626612
Industrial & Factory
Tumkur
1.5 ACRE Industrial Converted Land for Sale A K kaval village Tumkur. Contact: 7349028592
Sites
Devanahalli
PLOT FOR SALE @ Jangammakote 1200Sqft N/F in Gated Layout Near Sugaturu Village. Via Hoskote. Whatsapp/ Call: 9972528503
ಉದ್ಯೋಗಾವಕಾಶ
Drivers
ಕವಿ ಲಾಜಿಸ್ಟಿಕ್ಸ್: ಬೆಂಗಳೂರು ಹೈದರಾಬಾದ್ ಮಾರ್ಗದಲ್ಲಿ ಚಲಾಯಿಸಲು ಡ್ರೈವರ್ಸ್ ಬೇಕಾಗಿದ್ದಾರೆ, ಹೆವಿ ಡ್ರೈವಿಂಗ್ ಲೈಸೆನ್ಸ್ ನೊಂದಿಗೆ, ನಂ. 4/1, 2ನೇ ಮುಖ್ಯ ರಸ್ತೆ, ಶ್ರೀರಾಂಪುರಂ, ಬೆಂಗಳೂರು: 9738421001, 9886683188
WANTED DRIVER for CYL Truck. Contact No: 9591997024
General
ಆನೇಕಲ್ ತಿಮ್ಮಯ್ಯ ಬಲಿಜಹಾಸ್ಟೆಲ್ ಚಾಮರಾಜಪೇಟೆ, ಬೆಂಗಳೂರು-560018ಲೇಡಿ ವಾರ್ಡನ್ ಬೇಕಾಗಿದ್ದಾರೆ. ಮನೆಹಾಗೂ ಸೂಕ್ತ ವೇತನನೀಡಲಾಗುವುದು. ಸಂಪರ್ಕಿಸಿ : 9448024699/ 9060241370
ಪ್ರಜಾವಾಣಿ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

Wanted
ತಕ್ಷಣ ಬೇಕಾಗಿದ್ದಾರೆ
ಬೆಂಗಳೂರಿನ ದೇವನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಎಲೆಕ್ಟ್ರಾನಿಕ್ಸ್ MNC ಕಂಪನಿಗೆ
18-36 ವರ್ಷದೊಳಗಿನ ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ.
ವಿದ್ಯಾರ್ಹತೆ : 8th, 10th, ಪಿಯುಸಿ, ಐಟಿಐ, ಡಿಪ್ಲೋಮಾ, ಬಿ ಇ, ಬಿ ಟೆಕ್ ಹಾಗೂ ಯಾವುದೇ ಪದವಿ.
ಮೂಲ ವೇತನ : ರೂ.15000/- ಕೊಡಿ ವೇತನ ರೂ.5000/- ಅಥವಾ ಉಚಿತ PG ಸೇರಿದಂತೆ ಒಟ್ಟು ಟೇಕ್ ಹೋಮ್ ವೇತನ ರೂ. 20000/-
ಕಂಪನಿಯು ಉಚಿತ ಊಟ ಮತ್ತು ವಸತಿಯನ್ನು ಒದಗಿಸುತ್ತದೆ.
ಉಚಿತ ಕ್ಯಾಬ್ ಸೌಲಭ್ಯವಿರುವ ಸ್ಥಳಗಳು : ಬಾಗೇಪಲ್ಲಿ, ಚಿಂತಾಮಣಿ, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ, ಶ್ರೀನಿವಾಸಪುರ. ಗೌರಿಬಿದನೂರು, ವಿಜಯಪುರ, ವೇಮಗಲ್, ಕೋಲಾರ, ತುಮಕೂರು, ದೊಡ್ಡಬಳ್ಳಾಪುರ, ದಾಬಸ್ ಪೇಟೆ, ನೆಲಮಂಗಲ, ಮಾಲೂರು, ಹೊಸಕೋಟೆ, ದೇವನಹಳ್ಳಿ ಹಾಗೂ ಬೆಂಗಳೂರಿನಾದ್ಯಂತ.
PF ಮತ್ತು ESI ಸೌಲಭ್ಯವಿದೆ.
3 ಶಿಫ್ಟ್ ಕೆಲಸ ಕಡ್ಡಾಯ.
ಸಂಪರ್ಕಿಸಿ : Southern Supplies HR Solutions Pvt. Ltd.
ಆರ್ಪಿತಾ : 9035076512 / ಮುನೋಜ್ : 9035076511
ಮೇಘನಾ : 90350 84928 / ಅನನ್ಯ : 9035084925
Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000 ರಿಂದ 20,000, ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 6366625808, 6366627808.
Teachers/ Professors
VISHWA CHETHANA school Muthagatti road Anekal Pin: 562106 Wanted CBSE Experienced & trained Academic Co-ordinator TGT in English Kannada Soc- sci Comp- sci Lady PET and Art & craft Teacher for the Academic year 2025-26. Apply immediately. Email: vcschool23@gmail.com.
Matrimonial Bureaus
ಬ್ರಾಹ್ಮಣ ವಧು ವರಗಳಿಗಾಗಿ ಸಂಪರ್ಕಿಸಿ
ಪಿ.ಎಸ್. ಗುರುರಾಜ
ನಂ. 359, "ಶ್ರೀನಿಧಿ" 11ನೇ ಮುಖ್ಯ ರಸ್ತೆ, ವಿಷ್ಣುವರ್ಧನ್ ವೃತ್ತ ಹಿಂಬಾಗ, ಪೂರ್ಣಪ್ರಜ್ಞಾ ನಗರ, ಉತ್ತರಹಳ್ಳಿ.
ದೂರವಾಣಿ: 080-26730287
ವಾಟ್ಸ್‌ಪ್ ಮಾಡಿ 94483 68257
ಭವಿಷ್ಯ
Astrology
★ಓಂ ದುರ್ಗಾಂಜನಂ★ ಇಚ್ಛಾಸಿದ್ಧಿ ಶಕ್ತಿಪೀಠ, ಭಾರತದ ಪ್ರಖ್ಯಾತ ಲಕ್ಷಾಂತರ ಗ್ರಾಹಕರ ಪರಮಶ್ರೇಷ್ಠ ಬಾಬಾ ಶ್ರೀದೇವಾನಂದ ಮಹಾರಾಜ, ನಿಮ್ಮೆಲ್ಲಾ ಸಂಕಷ್ಟಗಳಿಗೆ ಪರಿಹಾರ, ಬೆಂಗಳೂರು. 9845005009
ಪ್ರವಾಸ
Travel
★ಶ್ರೇಯಸ್ ಟೂರ್ಸ್★ 06.04.2025,27.04.2025 18.05.2024 12/15/21ದಿನ ಈಶಾನ್ಯ ರಾಜ್ಯಗಳ(ಸೆವೆನ್ ಸಿಸ್ಟರ್ಸ್)ಅಸ್ಸಾಂ,ಅರುಣಾಚಲ ಮೇಘಾಲಯ,ಮಣಿಪುರ,ತ್ರಿಪುರ ನಾಗಲ್ಯಾಂಡ್,ಮಿಝೋರಾಂ 25.03.2025,25.04.2025 25.5.2025 7ದಿನಗಳು ಭೂತಾನ್ ರಾಷ್ಟ್ರದ ತಿಂಪೂ ಪಾರೋ,ಪುನಕಾ,ಪೂಚಲಿಂಗ್ 14.05.2025 12ದಿನಗಳು ಆದಿಕೈಲಾಸ&ಓಂಪರ್ವತ್ ನೈನಿತಾಲ್,ಭೀಮ್‌ತಾಲ್ ಜಾಗೇಶ್ವರ,ಪಾತಾಳೇಶ್ವರ. 9743351212 9206979202
ಚಾರ್‌ಧಾಮ್ ಸ್ಪೆಷಲ್ ಯಾತ್ರೆ: 28.5.2025 ರಿಂದ 14ದಿನಗಳು ಕೇದಾರನಾಥ್,ಬದರಿನಾಥ್ (ಪುಷ್ಕರ ಸರಸ್ವತಿ ನದಿಸ್ನಾನ) ಯಮುನೋತ್ರಿ,ಗಂಗೋತ್ರಿ ಇತ್ಯಾದಿ.ಕೆಲವೇ ಸೀಟುಗಳಿವೆ. ಸಂಪರ್ಕಿಸಿ:ಕೆಪಿ ಟೂರ್ಸ್ ಅಂಡ್ ಟ್ರಾವೆಲ್ಸ್,ಬೆಂಗಳೂರು. 9741024122, 9740311411.
ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
ಶಿಕ್ಷಣ
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ

ಪದ್ಮ ಪ್ರಶಸ್ತಿಗಳಿಗೆ ನಾಮನಿರ್ದೇಶನ ಆರಂಭ

ನವದೆಹಲಿ (ಪಿಟಿಐ): 2026ರ ಪದ್ಮ ಪ್ರಶಸ್ತಿಗಳಿಗೆ ನಾಮನಿರ್ದೇಶನ ಹಾಗೂ ಶಿಫಾರಸು ಪ್ರಕ್ರಿಯೆಗೆ ಶನಿವಾರ ಚಾಲನೆ ನೀಡಲಾಗಿದೆ.

ನಾಮನಿರ್ದೇಶನ ಹಾಗೂ ಶಿಫಾರಸುಗಳ ಸಲ್ಲಿಕೆಗೆ ಜುಲೈ 31 ಕೊನೆ ದಿನಾಂಕವಾಗಿದೆ. ಆನ್‌ಲೈನ್‌ನಲ್ಲಿ ರಾಷ್ಟ್ರೀಯ ಪುರಸ್ಕಾರ್ ಪೋರ್ಟಲ್ (https://awards.gov.in) ನಲ್ಲಿ ಮಾತ್ರವೇ ಅರ್ಜಿಗಳನ್ನು ಸ್ವೀಕರಿಸಲಾಗುವುದು ಎಂದು ಸರ್ಕಾರವು ಅಧಿಕೃತ ಹೇಳಿಕೆಯಲ್ಲಿ ತಿಳಿಸಿದೆ.

ಪದ್ಮ ಪ್ರಶಸ್ತಿಗಳಾದ 'ಪದ್ಮ ವಿಭೂಷಣ, ಪದ್ಮ ಭೂಷಣ ಹಾಗೂ ಪದ್ಮ ಶ್ರೀ'ಗಳು ದೇಶದ ಅತ್ಯುನ್ನತ ನಾಗರಿಕ ಗೌರವ ಪ್ರಶಸ್ತಿಗಳಲ್ಲಿ ಸೇರಿವೆ. 1954ರಲ್ಲಿ ಪ್ರಾರಂಭಿಸಲಾದ ಈ ಪ್ರಶಸ್ತಿ ಗಳನ್ನು ಪ್ರತೀ ಗಣರಾಜ್ಯೋತ್ಸವ-ದಂದು ಘೋಷಿಸಲಾಗುತ್ತದೆ.

ಕಲೆ, ಸಾಹಿತ್ಯ, ವೈದ್ಯಕೀಯ, ಶಿಕ್ಷಣ, ಕ್ರೀಡೆ, ಸಾಮಾಜಿಕ ಕಾರ್ಯ, ವಿಜ್ಞಾನ, ನಾಗರಿಕ ಸೇವೆ, ವ್ಯಾಪಾರ ಮತ್ತು ಕೈಗಾರಿಕೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ವ್ಯಕ್ತಿಗಳಿಗೆ ಈ ಪ್ರಶಸ್ತಿಗಳನ್ನು ನೀಡಲಾಗುತ್ತದೆ.

ಲಾಭಕ್ಕಾಗಿ ತಮಿಳು ಚಿತ್ರಗಳ ಡಬ್ಬಿಂಗ್: ಆಂಧ್ರ ಡಿಸಿಎಂ ಆರೋಪ

ಹಿಂದಿಗೇಕೆ ಡಬ್?: ಪವನ್

ಪ್ರಜಾವಾಣಿ ವಾರ್ತೆ

ಯಾವುದನ್ನೇ ಆಗಲಿ ಧ್ವಂಸ ಮಾಡುವುದು ಸುಲಭದ ಕಾರ್ಯ. ಅದನ್ನೇ ಮರುನಿರ್ಮಾಣ ಮಾಡುವುದು ಕಷ್ಟದ ಕೆಲಸ
ಪವನ್ ಕಲ್ಯಾಣ್, ಆಂಧ್ರಪ್ರದೇಶ ಡಿಸಿಎಂ

ಹೈದರಾಬಾದ್: ಭಾಷೆ ವಿಚಾರದಲ್ಲಿ ತಮಿಳು ನಾಡು ಸರ್ಕಾರ ತಳೆದಿರುವ ವಿರೋಧಾಭಾಸದ ನಿಲುವು ಪ್ರಶ್ನಿಸಿರುವ ಆಂಧ್ರಪ್ರದೇಶ ಉಪ ಮುಖ್ಯಮಂತ್ರಿ ಪವನ್ ಕಲ್ಯಾಣ್ ಅವರು, 'ಭಾಷಾ ಸಾಮರಸ್ಯ ಅಗತ್ಯ. ಆದರೆ, ಈ ವಿಚಾರದಲ್ಲಿ ದ್ವೇಷ ಬೆಳೆಸುವುದು ಬುದ್ಧಿವಂತಿಕೆಯಲ್ಲ' ಎಂದು ಟೀಕಿಸಿದ್ದಾರೆ.

'ತಮಿಳುನಾಡು, ಹಿಂದಿಯನ್ನು ತಿರಸ್ಕರಿ ಸುತ್ತದೆ. ಆದರೆ, ಉತ್ತರ ಪ್ರದೇಶ, ಬಿಹಾರ ಮತ್ತು ಛತ್ತೀಗಢದಂತಹ ಹಿಂದಿ ಭಾಷಿಕರ ಬಾಹುಳ್ಯವಿರುವ ಪ್ರದೇಶಗಳಿಂದ ಲಾಭ ಮಾಡಿ-ಕೊಳ್ಳುವುದಕ್ಕಾಗಿ ತಮಿಳು ಚಿತ್ರಗಳನ್ನು ಹಿಂದಿಗೆ ಡಬ್ಬಿಂಗ್ ಮಾಡುತ್ತಿರುವುದೇಕೆ' ಎಂದು ಪ್ರಶ್ನಿಸಿದ್ದಾರೆ.

ಇದರೊಂದಿಗೆ, ಹಿಂದಿ ಹೇರಿಕೆ ವಿಚಾರವಾಗಿ ಎದ್ದಿರುವ ವಿವಾದ ಮತ್ತಷ್ಟು ತೀವ್ರ ಸ್ವರೂಪ ಪಡೆದಂತಾಗಿದೆ.

ಪವನ್ ಕಲ್ಯಾಣ್ ಅವರ ಟೀಕೆಗೆ ಆಡಳಿತಾರೂಢ ಡಿಎಂಕೆ ಸೇರಿ ತಮಿಳುನಾಡಿನ ಅನೇಕ ರಾಜಕೀಯ ಪಕ್ಷಗಳು ತಿರುಗೇಟು ನೀಡಿವೆ.

ತಮ್ಮ ಕ್ಷೇತ್ರ ಪೀಠಾಪುರಂನಲ್ಲಿ ಹಮ್ಮಿಕೊಂಡಿದ್ದ ಜನ ಸೇನಾ ಪಕ್ಷದ 12ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಈ ವೇಳೆ ಅವರು ಹಿಂದಿ, ತಮಿಳು, ಮರಾಠಿ, ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿಯೂ ಭಾಷಣ ಮಾಡಿದರು.

'ಅನೇಕ ಭಾಷೆಗಳಿರುವುದು ದೇಶಕ್ಕೇ ಒಳ್ಳೆಯದು. ತಮಿಳುನಾಡು ಸೇರಿ ಎಲ್ಲ ರಾಜ್ಯ ಗಳಿಗೂ ಇದು ಅನ್ವಯಿಸಲಿದೆ' ಎಂದಿದ್ದಾರೆ.

'ತಮಿಳುನಾಡು, ಮಹಾರಾಷ್ಟ್ರ ಹಾಗೂ ಕರ್ನಾಟಕದಲ್ಲಿ ನಮ್ಮ ಪಕ್ಷದ ಬೆಂಬಲಿಗರು ಇದ್ದಾರೆ. ತೆಲುಗಿನಲ್ಲಿ ನಾನು ಮಾಡುವ ಭಾಷಣಗಳನ್ನು ತಮಿಳು ಜನರು ಆಲಿಸುತ್ತಾರೆ ಎಂಬುದು ನನಗೆ ಗೊತ್ತು. ಇದಕ್ಕಾಗಿ ತಮಿಳು ಭಾಷಿಕರಿಗೆ ನಾನು ಕೃತಜ್ಞ' ಎಂದು ಹೇಳಿದ್ದಾರೆ.

'ಮುಸ್ಲಿಮರು ಎಲ್ಲಿಯೇ ಇರಲಿ, ಅರೇಬಿಕ್ ಅಥವಾ ಉರ್ದುವಿನಲ್ಲಿ ಪ್ರಾರ್ಥನೆ ಸಲ್ಲಿಸುತ್ತಾರೆ. ದೇಗುಲಗಳಲ್ಲಿ ಪೂಜೆ ವೇಳೆ ಸಂಸ್ಕೃತ ಬಳಸಲಾಗುತ್ತದೆ. ಈ ಪ್ರಾರ್ಥನೆ/ಪೂಜಾ ವಿಧಿಗಳನ್ನು ತಮಿಳು ಇಲ್ಲವೇ ತೆಲುಗಿನಲ್ಲಿ ಹೇಳಬಹುದೇ?' ಎಂದಿದ್ದಾರೆ.

'ದೇಶದ ಹಿತಾಸಕ್ತಿಗಳನ್ನು ಕಾಪಾಡಲು ಹಾಗೂ ಅಭಿವೃದ್ಧಿಗೆ ಶ್ರಮಿಸುವ ಪಕ್ಷವನ್ನು ಆಯ್ಕೆ ಮಾಡಿ' ಎಂದು ಮನವಿ ಮಾಡಿದ್ದಾರೆ.

'ಉತ್ತರ-ದಕ್ಷಿಣ ಎಂಬ ಭೇದ ತೊಡೆದು, ಮುಂದೆ ಸಾಗಬೇಕು. ದೇಶದ ಏಕತೆ ಮತ್ತು ಸಮಗ್ರತೆಯೇ ನಮ್ಮ ಆದ್ಯತೆಯಾಗಬೇಕು' ಎಂದೂ ಹೇಳಿದ್ದಾರೆ.

'ತಮಿಳುನಾಡಿನ ಇತಿಹಾಸ ತಿಳಿಯಿರಿ'

ಚೆನ್ನೈ: 'ತಮಿಳು ಚಿತ್ರಗಳನ್ನು ಹಿಂದಿಗೆ ಏಕೆ ಡಬ್ ಮಾಡಲಾಗುತ್ತದೆ' ಎಂದು ಪ್ರಶ್ನಿಸಿರುವ ಆಂಧ್ರ ಪ್ರದೇಶ ಡಿಸಿಎಂ ಪವನ್ ಕಲ್ಯಾಣ್ ಅವರಿಗೆ ಡಿಎಂಕೆ, ಎಐಎಡಿಎಂಕೆ, ಕಾಂಗ್ರೆಸ್ ಸೇರಿದಂತೆ ಹಲವು ಪಕ್ಷಗಳು ಶನಿವಾರ ತೀಕ್ಷ್ಣ ಪ್ರತಿಕ್ರಿಯೆ ನೀಡಿವೆ.

'ಭಾಷಾ ವಿವಾದದಂಥ ಸೂಕ್ಷ್ಮ ವಿಚಾರಗಳ ಕುರಿತು ಮಾತನಾಡುವುದಕ್ಕೂ ಮೊದಲು ತಮಿಳುನಾಡಿನ ಇತಿಹಾಸ ತಿಳಿದುಕೊಳ್ಳಿ. ಬೇಡಿಕೆ ಮತ್ತು ಹಕ್ಕುಗಳ ನಡುವಿನ ವ್ಯತ್ಯಾಸ ಅರ್ಥ ಮಾಡಿಕೊಳ್ಳಿ' ಎಂದು ತಿವಿದಿವೆ.

'ದೇಶದ ಸಾಂಸ್ಕೃತಿಕ ವೈವಿಧ್ಯವನ್ನು ಅರ್ಥ ಮಾಡಿ-ಕೊಳ್ಳುವಂತಹ ನಾಯಕತ್ವ ಉತ್ತರ ಭಾರತಕ್ಕೆ ಅಗತ್ಯವಿದೆ' ಎಂದು ಪವನ್ ಕಲ್ಯಾಣ್ ಅವರು 2017ರಲ್ಲಿ ಮಾಡಿದ್ದ ಟ್ವೀಟ್‌ಅನ್ನು (ಈಗ ಎಕ್ಸ್) ಡಿಎಂಕೆ ಸಂಸದೆ ಕನಿಮೋಳಿ ಕರುಣಾನಿಧಿ ಹಂಚಿಕೊಂಡಿದ್ದಾರೆ.

ಈ ಪೋಸ್ಟ್‌ಗೆ, 'ಬಿಜೆಪಿಗೂ ಮೊದಲು, ಬಿಜೆಪಿ ಜೊತೆ ಕೈಜೋಡಿಸಿದ ನಂತರ' ಎಂಬ ಶೀರ್ಷಿಕೆ ಬರೆದು ತಿರುಗೇಟು ನೀಡಿದ್ದಾರೆ.

ತಿರುವಳ್ಳೂರು ಕ್ಷೇತ್ರದ ಕಾಂಗ್ರೆಸ್ ಸಂಸದ ಹಾಗೂ ಕರ್ನಾಟಕ ಕೇಡರ್‌ನ ಮಾಜಿ ಐಎಎಸ್ ಅಧಿಕಾರಿ ಸಸಿಕಾಂತ್ ಸೆಂಥಿಲ್, 'ತಮ್ಮ ಅಭಿಪ್ರಾಯಗಳನ್ನು ಹೊರ ಹಾಕುವುದಕ್ಕೂ ಮುನ್ನ ಆಡಳಿತ ಏನು ಎಂಬುದನ್ನು ಪವನ್ ಕಲ್ಯಾಣ್ ಅರ್ಥ ಮಾಡಿಕೊಳ್ಳಲಿ' ಎಂದಿದ್ದಾರೆ.

ಎಐಎಡಿಎಂಕೆ ವಕ್ತಾರ ಕೋವೈ ಸತ್ಯನ್, 'ತಮಿಳು ನಾಡಿನ ಸಾಂಸ್ಕೃತಿಕ ಸಂರಚನೆಯೊಂದಿಗೆ ವ್ಯವಹಾರವನ್ನು ತಳುಕು ಹಾಕಬೇಡಿ' ಎಂದು ಹೇಳಿದ್ದಾರೆ.

'ಮರುವಿಂಗಡಣೆ: ನಿರ್ಧಾರವಾಗಿಲ್ಲ'

ಪ್ರಜಾವಾಣಿ ವಾರ್ತೆ/ಪಿಟಿಐ

ಹೈದರಾಬಾದ್/ಕರೀಮ್‌ನಗರ: ಲೋಕಸಭಾ ಕ್ಷೇತ್ರಗಳ ಮರು ವಿಂಗಡಣೆ ಕಾರ್ಯ ಕೈಗೊಳ್ಳುವ ಕುರಿತಂತೆ ಯಾವ ನಿರ್ಧಾರವನ್ನೂ ಮಾಡಿಲ್ಲ. ಈ ವಿಚಾರವಾಗಿ ಯಾವುದೇ ಮಾರ್ಗಸೂಚಿಗಳನ್ನೂ ರಚಿಸಲಾಗಿಲ್ಲ ಎಂದು ಕೇಂದ್ರ ಸಚಿವರಾದ ಜಿ.ಕಿಶನ್ ರೆಡ್ಡಿ ಹಾಗೂ ಬಂಡಿ ಸಂಜಯ ಕುಮಾರ್ ಶನಿವಾರ ಹೇಳಿದ್ದಾರೆ.

'ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ದೇಶದ ಎಲ್ಲ ಭಾಷೆಗಳನ್ನೂ ಪ್ರೋತ್ಸಾಹಿಸುತ್ತಿದೆ. ಆದರೆ, ಈ ವಿಚಾರ ಮುಂದಿಟ್ಟುಕೊಂಡು ಜನರನ್ನು ಪ್ರಚೋದಿಸುವ ರಾಜಕೀಯ ಪ್ರೇರಿತ ಪ್ರಯತ್ನಗಳು ವಿಫಲವಾಗಲಿವೆ' ಎಂದು ಉಭಯ ಸಚಿವರು ಪ್ರತಿಪಾದಿಸಿದ್ದಾರೆ.

ಸುದ್ದಿಗಾರರ ಜೊತೆ ಪ್ರತ್ಯೇಕವಾಗಿ ಮಾತನಾಡಿರುವ ಅವರು, ಕ್ಷೇತ್ರಗಳ ಮರುವಿಂಗಡಣೆ ಹಾಗೂ ಹಿಂದಿ ಹೇರಿಕೆ ವಿಚಾರವಾಗಿ ಕಂಡುಬಂದಿರುವ ಸಂಘರ್ಷ ಶಮನ ಮಾಡುವ ಪ್ರಯತ್ನಗಳನ್ನು ಮಾಡಿದ್ದಾರೆ.

ಹೈದರಾಬಾದ್‌ನಲ್ಲಿ ಮಾತನಾಡಿದ ಸಚಿವ ಕಿಶನ್ ರೆಡ್ಡಿ, ಹಿಂದಿ ಹೇರಿಕೆ ವಿಚಾರವಾಗಿ ತಮಿಳನಾಡಿನಲ್ಲಿ ವ್ಯಕ್ತವಾಗುತ್ತಿರುವ ವಿರೋಧ ಕುರಿತು ಪ್ರಸ್ತಾಪಿಸಿದರು.

'ದಕ್ಷಿಣ ಭಾರತದ ಚಲನಚಿತ್ರಗಳು ರಾಷ್ಟ್ರ ಮಟ್ಟದಲ್ಲಿ ಯಶಸ್ಸು ಕಾಣುತ್ತಿವೆ. ಅದರಲ್ಲೂ, ತಮಿಳು ಹಾಗೂ ತೆಲುಗು ಚಿತ್ರಗಳು ಉತ್ತರ ಭಾರತದಲ್ಲಿ ಜನಪ್ರಿಯವಾಗಿವೆ. ಚಿತ್ರಗಳ ಹಿಂದಿ ಅವತರಣಿಕೆ ಗಳಿಂದ ಭಾರಿ ಆದಾಯವೂ ಲಭಿಸಿದೆ' ಎಂದರು.

'ತೆಲಂಗಾಣವು ಬಹುಸಂಸ್ಕೃತಿಯ ನೆಲೆ. ಜಾರ್ಖಂಡ್, ಪಶ್ಚಿಮ ಬಂಗಾಳದ ಕಾರ್ಮಿಕರು ಇಲ್ಲಿ ಬದುಕು ಕಟ್ಟಿಕೊಳ್ಳುತ್ತಿದ್ದಾರೆ. ಇಲ್ಲಿನ ಪ್ರಗತಿಗೂ ಕೊಡುಗೆ ನೀಡುತ್ತಿದ್ದಾರೆ' ಎಂದರು.

'ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ಐದು ವರ್ಷಗಳಲ್ಲಿ ತಾವು ಮಾಡಿರುವ ಸಾಧನೆಗಳನ್ನು ಹೇಳಲಿ' ಎಂದು ಸವಾಲು ಹಾಕಿದ ಅವರು, 'ತಮ್ಮ ವೈಫಲ್ಯಗಳನ್ನು ಮರೆಮಾಚುವುದಕ್ಕಾಗಿ ಅವರು ಕ್ಷೇತ್ರಗಳ ಮರುವಿಂಗಡಣೆ, ಭಾಷೆಯಂತ ವಿಚಾರಗಳನ್ನು ಪ್ರಸ್ತಾಪಿಸುತ್ತಿದ್ದಾರೆ' ಎಂದರು.

ಕರೀಮ್‌ನಗರದಲ್ಲಿ ಮಾತನಾಡಿದ ಸಚಿವ ಬಂಡಿ ಸಂಜಯ ಕುಮಾರ್, 'ದಕ್ಷಿಣ ಭಾರತ ಕುರಿತು ಕೇಂದ್ರ ಸರ್ಕಾರ ಪಕ್ಷಪಾತ ಮಾಡುತ್ತಿದೆ ಎಂಬ ಆರೋಪಗಳು ಆಧಾರರಹಿತ ಹಾಗೂ ಹಾಸ್ಯಾಸ್ಪದ' ಎಂದರು.

'ತಮಿಳುನಾಡು, ಕರ್ನಾಟಕ, ತೆಲಂಗಾಣ ರಾಜ್ಯ ಸರ್ಕಾರಗಳು ಎಲ್ಲ ರಂಗಗಳಲ್ಲಿ ವಿಫಲವಾಗಿದ್ದು, ಅಲ್ಲಿನ ಆಡಳಿತದಿಂದ ಜನರು ಬೇಸತ್ತಿದ್ದಾರೆ. ಈ ರಾಜ್ಯಗಳಲ್ಲಿನ ಆಡಳಿತಾರೂಢ ಪಕ್ಷಗಳು ವಿವಾದಗಳನ್ನು ಸೃಷ್ಟಿಸುವುದು ಹಾಗೂ ಕೇಂದ್ರ ಸರ್ಕಾರಕ್ಕೆ ಕೆಟ್ಟ ಹೆಸರು ತರುವ ಪ್ರಯತ್ನದಲ್ಲಿ ನಿರತವಾಗಿವೆ' ಎಂದೂ ಟೀಕಿಸಿದರು.

ದಕ್ಷಿಣ ರಾಜ್ಯಗಳ ಕುರಿತು ಕೇಂದ್ರ ಸರ್ಕಾರ ಸಂವೇದನಾರಹಿತವಾಗಿದೆ. ಎಲ್ಲ ಭಾಷೆಗಳಿಗೂ ಸಮಾನ ಮಹತ್ವ ನೀಡಬೇಕು
ಪ್ರಕಾಶ ಕಾರಟ್, ಸಿಪಿಎಂ ನಾಯಕ

ರಾಜಕೀಯ ಲಾಭ ಪಡೆಯುವುದಕ್ಕಾಗಿ ಡಿಎಂಕೆ ಪಕ್ಷ ಕ್ಷೇತ್ರ ಮರುವಿಂಗಡಣೆ ವಿರೋಧಿಸಿ ಸಭೆ ಕರೆದಿದೆ
ಇ.ಕೆ.ಪಳನಿಸ್ವಾಮಿ, ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿ

ತಮಿಳು ಹೊಗಳಿದ ವೈಷ್ಣವ್

ಚೆನ್ನೈ: 'ತಮಿಳು ಸುಮಧುರವಾದ ಭಾಷೆ. ದೇಶದ ಮತ್ತು ವಿಶ್ವದ ಆಸ್ತಿಗಳಲ್ಲೊಂದು. ದೇಶದ ಪ್ರತಿಯೊಂದು ಭಾಷೆಯೂ ತನ್ನ ಗೌರವ ಸಿಗುವುದನ್ನು ಪ್ರಧಾನಿ ನರೇಂದ್ರ ಮೋದಿ ಖಾತ್ರಿಪಡಿಸಿದ್ದಾರೆ' ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಶನಿವಾರ ಹೇಳಿದ್ದಾರೆ.

ಶ್ರೀಪೆರಂಬದೂರುವಿನಲ್ಲಿ ಜೆಟ್‌ವರ್ಕ್ ಎಲೆಕ್ಟ್ರಾನಿಕ್ಸ್ ಕಂಪನಿಯ ಉತ್ಪಾದನಾ ಘಟಕದ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಭಿಕರನ್ನು ಉದ್ದೇಶಿಸಿ 'ವಣಕ್ಕಂ' ಎಂದು ತಮಿಳಿನಲ್ಲಿ ಹೇಳುವ ಮೂಲಕ ಮಾತು ಆರಂಭಿಸಿದರು.

'ನಾನು ಐಐಟಿ-ಕಾನ್ಪುರದಲ್ಲಿ ಅಧ್ಯಯನ ಮಾಡುತ್ತಿದ್ದಾಗ, ನಮ್ಮ ಪ್ರಾಧ್ಯಾಪಕರಾಗಿದ್ದ ಸಡಗೋಪನ್ ತಮಿಳು ಭಾಷೆ ಕುರಿತು ನನಗೆ ತಿಳಿಸಿಕೊಟ್ಟರು' ಎಂದರು.

'ತಮಿಳು ಸುಮಧುರವಾದ ಭಾಷೆ. ವಣಕ್ಕಂ, ಎಪ್ಪಡಿ ಇರುಕ್ಕುಂಗಾ (ಹೇಗಿದ್ದೀರಿ) ಹಾಗೂ ನಂಡ್ರಿ(ಧನ್ಯವಾದ) ಎಂಬ ಮೂರು ಪದಗಳು ನನಗೆ ಗೊತ್ತು' ಎಂದರು.

ಹೋಳಿ.... ಹೋಳಿ ಅಂಗವಾಗಿ ಉತ್ತರ ಪ್ರದೇಶದ ಮಥುರಾ ಜಿಲ್ಲೆಯ ಬಲದೇವ್ ಗ್ರಾಮದ ದಾವೂಜಿ ದೇವಸ್ಥಾನದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ 'ಹುರಂಗಾ' ಉತ್ಸವದಲ್ಲಿ ಭಕ್ತರು ಬಣ್ಣಗಳಲ್ಲಿ ಮಿಂದೆದ್ದರು -ಎಎಫ್‌ಪಿ ಚಿತ್ರ

ಯುವಜನರಿಗೂ ಹೃದ್ರೋಗ

ಒಂದನೇ ಪುಟದಿಂದ...

ರಸ್ತೆ ಬದಿ ಪಾರ್ಕ್ ಮಾಡಿದ್ದ ಕಾರಿನಲ್ಲಿಯೇ ಯುವಕನೊಬ್ಬ ಹೃದಯಾಘಾತದಿಂದ ಸಾವಿಗೀಡಾದ ಘಟನೆ ಬೆಂಗಳೂರಿನ ಬ್ರೂಕ್‌ಫೀಲ್ಡ್ ರಸ್ತೆಯಲ್ಲಿ ಫೆಬ್ರುವರಿಯಲ್ಲಿ ನಡೆದಿತ್ತು. ಇದೇ ರೀತಿ ರಾಜ್ಯದ ವಿವಿಧೆಡೆ ಇತ್ತೀಚಿನ ತಿಂಗಳುಗಳಲ್ಲಿ ಆರೋಗ್ಯವಂತರಿಗೂ ಕಿರಿಯ ವಯಸ್ಸಿನಲ್ಲಿಯೇ ಹೃದಯಾಘಾತ ಸಂಭವಿಸುತ್ತಿದೆ.

ದೈಹಿಕವಾಗಿ ಸದೃಢರಾಗಿರು-ವವರೂ ತೀವ್ರ ಹೃದಯಾಘಾತ, ಹೃದಯ ಸ್ತಂಭನದಿಂದ ಮೃತ-ಪಡುತ್ತಿದ್ದಾರೆ. ಹೃದಯ ಸಂಬಂಧಿ ಸಮಸ್ಯೆಗಳ ಕಾರಣ ಆಸ್ಪತ್ರೆಗಳಿಗೆ ಭೇಟಿ ನೀಡುವವರ ಸಂಖ್ಯೆ ಹೆಚ್ಚಳವಾಗಿದೆ. ಆರೋಗ್ಯ ಇಲಾಖೆಯ ಮಾಹಿತಿ ಪ್ರಕಾರ ರಾಜ್ಯದಲ್ಲಿ ಪ್ರತಿವರ್ಷ ಸುಮಾರು 96 ಸಾವಿರ ಮಂದಿ ಹೃದಯಾಘಾತದಿಂದ ಮೃತಪಡುತ್ತಾರೆ. ಹೃದಯದ ಆರೈಕೆಗೆ ಮೀಸಲಾಗಿರುವ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಗೆ ಭೇಟಿ ನೀಡುವ ಹೊರ ರೋಗಿಗಳ ವಾರ್ಷಿಕ ಸಂಖ್ಯೆ 8 ಲಕ್ಷದ ಗಡಿ ದಾಟಿದೆ. ವರ್ಷದಿಂದ ವರ್ಷಕ್ಕೆ ಹೊರ ರೋಗಿಗಳ ಸಂಖ್ಯೆ ಹೆಚ್ಚುತ್ತಲೇ ಇದ್ದು, ಸಂಸ್ಥೆಯ ನೋಂದಣಿ ಪ್ರಕಾರ ಐದು ವರ್ಷಗಳಲ್ಲಿ 28.10 ಲಕ್ಷ ಹೊರರೋಗಿಗಳು ಭೇಟಿ ನೀಡಿದ್ದಾರೆ.

ಒಳ ರೋಗಿಗಳು ಹೆಚ್ಚಳ: 20ರಿಂದ 40 ವರ್ಷದೊಳಗಿನವರೂ ಹೃದಯಾಘಾತಕ್ಕೆ ಒಳಪಡುತ್ತಿರುವುದರಿಂದ ಸಂಸ್ಥೆಗೆ ಭೇಟಿ ನೀಡುವ ಒಳ ರೋಗಿಗಳ ಸಂಖ್ಯೆಯೂ ಏರಿಕೆ ಕಂಡಿದೆ. 2024ರಲ್ಲಿ 76 ಸಾವಿರಕ್ಕೂ ಅಧಿಕ ಒಳ ರೋಗಿಗಳಿಗೆ ಚಿಕಿತ್ಸೆ ಒದಗಿಸಲಾಗಿದೆ. ಸಂಸ್ಥೆಯ ಆರೋಗ್ಯ ಇಲಾಖೆಯು ರಾಜ್ಯದಲ್ಲಿ ಸಾಂಕ್ರಾಮಿಕವಲ್ಲದ ರೋಗಗಳ ಕ್ಲಿನಿಕ್‌ಗಳಲ್ಲಿ (ಎನ್‌ಸಿಡಿ) ಹೃದ್ರೋಗ ಪತ್ತೆಗೆ ತಪಾಸಣೆ ನಡೆಸುತ್ತಿದೆ. ತೀವ್ರ ಹೃದಯಾಘಾತಕ್ಕೆ ಒಳಗಾದವರಿಗೆ 'ಪುನೀತ್ ರಾಜ್‌ಕುಮಾರ್ ಹೃದಯ ಜ್ಯೋತಿ ಯೋಜನೆ'ಯಡಿ 'ಟೆನೆಕ್ಟ್ ಪ್ಲಸ್' ಚುಚ್ಚುಮದ್ದನ್ನು ಉಚಿತವಾಗಿ ಒದಗಿಸುತ್ತಿದೆ. ಪುನೀತ್ ರಾಜ್‌ಕುಮಾರ್ ಅವರ ಸ್ಮರಣಾರ್ಥ 2023ರಲ್ಲಿ ಈ ಯೋಜನೆ ಪ್ರಾರಂಭಿಸಲಾಗಿದೆ.

ಜಯದೇವ ಸಂಸ್ಥೆಗೆ ವರ್ಷವಾರು ರೋಗಿಗಳ ಭೇಟಿ

ವರ್ಷ	ಹೊರ ರೋಗಿಗಳು	ಒಳ ರೋಗಿಗಳು
2020	39,158	4,200
2021	5,27,437	5,383
2022	6,55,484	68,902
2023	7,67,539	74,653
2024	8,21,224	76,707

ಇತಿಹಾಸದಲ್ಲಿ ಒಂದು ವರ್ಷದಲ್ಲಿ ದಾಖಲಾದ ಗರಿಷ್ಠ ಒಳರೋಗಿಗಳ ಸಂಖ್ಯೆ ಇದಾಗಿದೆ. ಐದು ವರ್ಷಗಳಲ್ಲಿ 2.29 ಲಕ್ಷಕ್ಕೂ ಅಧಿಕ ಮಂದಿ ಚಿಕಿತ್ಸೆ ಪಡೆದಿದ್ದಾರೆ. 2020 ಮತ್ತು 2021ರಲ್ಲಿ ಕೋವಿಡ್ ಹಾಗೂ ಕೆಲ ನಿರ್ಬಂಧಗಳ ಕಾರಣ ಒಳ ಹಾಗೂ ಹೊರ ರೋಗಿಗಳ ಸಂಖ್ಯೆ ಕಡಿಮೆಯಿತ್ತು. ಬಳಿಕ ಹೃದಯಾಘಾತ ಪ್ರಕರಣಗಳು ದಿಢೀರ್ ಏರಿಕೆ ಕಂಡಿವೆ. ಸಂಸ್ಥೆಗೆ ಭೇಟಿ ನೀಡುವವರಲ್ಲಿ ಶೇ 20ರಷ್ಟು ಮಂದಿ 40 ವರ್ಷದೊಳಗಿನವರಾಗಿದ್ದಾರೆ.

ಕಲಿಕೆಯಲ್ಲಿ ಹಿಂದೆ: ಇಬ್ಬರು ಪುಟ್ಟ ಮಕ್ಕಳನ್ನು ಕೊಂದು ತಂದೆ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ/ ಪಿಟಿಐ

ಕಾಕಿನಾಡ/ಹೈದರಾಬಾದ್ (ಆಂಧ್ರ ಪ್ರದೇಶ): ಒಎನ್‌ಜಿಸಿ ಉದ್ಯೋಗಿಯೊಬ್ಬರು ಕಲಿಕೆಯಲ್ಲಿ ಹಿಂದುಳಿದಿದ್ದಾರೆ ಎನ್ನುವ ಕಾರಣಕ್ಕೆ 7 ಮತ್ತು 6 ವರ್ಷದ ತನ್ನ ಇಬ್ಬರು ಗಂಡು ಮಕ್ಕಳನ್ನು ಕೊಂದು ತಾನೂ ಆತ್ಮಹತ್ಯೆ ಮಾಡಿಕೊಂಡ ಹೃದಯ ವಿದ್ರಾವಕ ಘಟನೆ ಕಾಕಿನಾಡ ಜಿಲ್ಲೆಯಲ್ಲಿ ನಡೆದಿದೆ.

ಒಂದನೇ ತರಗತಿಯಲ್ಲಿ ಓದುತ್ತಿದ್ದ ಜೋಶಿಲ್ (7) ಮತ್ತು ಯುಕೆಜಿಯಲ್ಲಿದ್ದ ನಿಖಿಲ್ (6) ಕಲಿಕೆಯಲ್ಲಿ ಹಿಂದುಳಿದಿದ್ದಕ್ಕೆ ಈ ಮಕ್ಕಳ ತಂದೆ ವಿ. ಚಂದ್ರಕಿಶೋರ್ (37) ನಿರಾಶೆಗೊಂಡಿದ್ದರು. ಹೋಳಿ ದಿನವೇ, ಶುಕ್ರವಾರ ಬೆಳಿಗ್ಗೆ 10ರ ಸುಮಾರಿಗೆ ಇಬ್ಬರು ಬಾಲಕರ ಕೈಗಳು ಮತ್ತು ಕಾಲುಗಳನ್ನು ಕಟ್ಟಿ, ಬಕೆಟ್‌ಗಳಲ್ಲಿ ತುಂಬಿಸಿಟ್ಟಿದ್ದ ನೀರಿನಲ್ಲಿ ಮುಳುಗಿಸಿ ಸಾಯಿಸಿದ್ದಾರೆ. ನಂತರ ಮಲಗುವ ಕೋಣೆಯಲ್ಲಿ ತಾನೂ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

'ಕಲಿಕೆಯಲ್ಲಿ ಹಿಂದುಳಿದಿದ್ದ ತನ್ನಿಬ್ಬರು ಮಕ್ಕಳು ಸ್ಪರ್ಧಾತ್ಮಕ ಜಗತ್ತಿನಲ್ಲಿ ಮುಂದೆ ಹೆಣಗಾಡಬೇಕಾಗುತ್ತದೆ ಮತ್ತು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ ಎನ್ನುವ ಆತಂಕದಲ್ಲಿ ಕಿಶೋರ್ ಈ ಕೃತ್ಯ ಎಸಗಿದ್ದಾರೆ' ಎಂದಿದ್ದಾರೆ.

ಪಶ್ಚಿಮ ಗೋದಾವರಿ ಜಿಲ್ಲೆಯ ತಾಡೇಪಲ್ಲಿ ಗು

ಎಪಿಕ್–ಆಧಾರ್ ಜೋಡಣೆ: 18ಕ್ಕೆ ಸಭೆ

ಪ್ರಜಾವಾಣಿ ವಾರ್ತೆ

ಜ್ಞಾನೇಶ್ ಕುಮಾರ್

ನವದೆಹಲಿ: ಮತದಾರರ ಗುರುತಿನ ಚೀಟಿಯೊಂದಿಗೆ (ಎಪಿಕ್) ಆಧಾರ್ ಸಂಖ್ಯೆ ಜೋಡಿಸುವ ಕುರಿತು ಚರ್ಚಿಸುವ ಸಂಬಂಧ ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್, ಇದೇ 18ರಂದು ಸಭೆ ಕರೆದಿದ್ದಾರೆ.

ಗೃಹ ಸಚಿವಾಲಯ ಕಾರ್ಯದರ್ಶಿ ಗೋವಿಂದ ಮೋಹನ್, ಶಾಸಕಾಂಗ ಇಲಾಖೆ ಕಾರ್ಯದರ್ಶಿ ರಾಜೀವ್ ಮಣಿ ಹಾಗೂ ಭಾರತೀಯ ವಿಶಿಷ್ಟ ಗುರುತು ಪ್ರಾಧಿಕಾರದ (ಯುಐಡಿಎಐ) ಸಿಇಒ ಭುವನೇಶ ಕುಮಾರ್ ಅವರು ಕೂಡ ಸಭೆಯಲ್ಲಿ ಪಾಲ್ಗೊಳ್ಳುವರು.

ಮತದಾರರ ಪಟ್ಟಿ ಸಿದ್ಧಪಡಿಸುವಲ್ಲಿ ಅಕ್ರಮ ಹಾಗೂ ಒಂದೇ ರೀತಿಯ ಸಂಖ್ಯೆವುಳ್ಳ ಮತದಾರರ ಗುರುತಿನ ಚೀಟಿಗಳ ಕುರಿತು ಸಂಸತ್‌ನ ಒಳಗೆ ಹಾಗೂ ಹೊರಗೆ ವಿರೋಧ ಪಕ್ಷಗಳು ಹೋರಾಟ ನಡೆಸಿದ್ದವು ಅದರಲ್ಲೂ, ಮಹಾರಾಷ್ಟ್ರ ಮತ್ತು ಹರಿಯಾಣದ ಮತದಾರರ ಪಟ್ಟಿಯಲ್ಲಿನ ವ್ಯತ್ಯಾಸ ಕುರಿತು ಪ್ರಶ್ನೆಗಳು ಉದ್ಭವಿಸಿದ್ದವು.

ಈ ಎಲ್ಲ ಕಾರಣಗಳಿಂದ, ಚುನಾವಣಾ ಆಯೋಗವು ಈ ಸಭೆ ಆಯೋಜಿಸಿದೆ ಎಂದು ಮೂಲಗಳು ಹೇಳಿವೆ

ಉದಯಗಿರಿ ಪ್ರಕರಣ: ಗಡೀಪಾರು ನೋಟಿಸ್ ವಜಾ

ಪ್ರಜಾವಾಣಿ ವಾರ್ತೆ

ಮೈಸೂರು: ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಪೋಸ್ಟ್ ಹಾಕಿದ್ದ, ಇಲ್ಲಿನ ಉದಯಗಿರಿ ಪ್ರಕರಣದ ಆರೋಪಿ ಸತೀಶ್ ಗಡೀಪಾರಿಗೆ ಪೊಲೀಸರು ನೀಡಿದ್ದ ನೋಟಿಸ್ ಅನ್ನು ಕೋರ್ಟ್ ವಜಾಗೊಳಿಸಿದೆ.

ವಿವಾದಾತ್ಮಕ ಪೋಸ್ಟ್ ಮೂಲಕ ಗಲಭೆಗೆ ಕಾರಣರಾಗಿದ್ದ ಆರೋಪದಡಿ ಸತೀಶ್ ವಿರುದ್ಧ ಇಲ್ಲಿನ ಪ್ರಕರಣ ದಾಖಲಾಗಿತ್ತು. ಗಡೀಪಾರು ಸಂಬಂಧ ಪೊಲೀಸರು ನೀಡಿದ್ದ ನೋಟಿಸ್ ಅನ್ನು ಕೋರ್ಟ್‌ನಲ್ಲಿ ಪ್ರಶ್ನಿಸಲಾಗಿತ್ತು.

ನ್ಯಾಯಾಲಯ ಈ ಹಿಂದೆ ತಡೆಯಾಜ್ಞೆ ನೀಡಿತ್ತು. ತಡೆಯಾಜ್ಞೆ ತೆರವು ಕೋರಿ ಪೊಲೀಸರು ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ಪರಿಷ್ಕರಣಾ ಅರ್ಜಿ ಸಲ್ಲಿಸಿದ್ದರು.

ಸಿಬ್ಬಂದಿಗೆ ಅಗತ್ಯ ತರಬೇತಿ: 'ಸೈಬರ್ ಅಪರಾಧ ಶೃಂಗಸಭೆ'ಯಲ್ಲಿ ಗೃಹ ಸಚಿವ ಪರಮೇಶ್ವರ ಹೇಳಿಕೆ

ಸೈಬರ್ ಅಪರಾಧ ಪತ್ತೆಯೇ ಸವಾಲು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಈವರೆಗೆ 46 ಸಾವಿರಕ್ಕೂ ಹೆಚ್ಚು ಅಧಿಕಾರಿ, ಸಿಬ್ಬಂದಿಗೆ ತರಬೇತಿ
- 4 ವರ್ಷಗಳಲ್ಲಿ 60 ಸಾವಿರಕ್ಕೂ ಹೆಚ್ಚು ಸೈಬರ್ ಪ್ರಕರಣ ದಾಖಲು
- ಸಾಮಾನ್ಯ ಅಪರಾಧಗಳಿಗಿಂತ ಸೈಬರ್ ಅಪರಾಧ ಕೃತ್ಯಗಳೇ ಅಧಿಕ

ಬೆಂಗಳೂರು: ರಾಜ್ಯದಲ್ಲಿ ಸೈಬರ್ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿದ್ದು, ಇವುಗಳ ಪತ್ತೆಯೇ ಸವಾಲಾಗಿದೆ. ಪ್ರತಿಯೊಬ್ಬ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗೆ ಸೈಬರ್ ಅಪರಾಧಗಳ ಕುರಿತು ಹೆಚ್ಚಿನ ಅರಿವು ಮತ್ತು ತರಬೇತಿ ನೀಡಲಾಗುವುದು ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ಸಿಐಡಿ ಹಾಗೂ ಸೈಬರ್ ಅಪರಾಧ ತನಿಖಾ ತರಬೇತಿ ಮತ್ತು ಸಂಶೋಧನಾ ಕೇಂದ್ರ (ಸಿಸಿಐಟಿಆರ್) ವತಿಯಿಂದ ನಗರದಲ್ಲಿ ಶನಿವಾರ ಆಯೋಜಿಸಿದ್ದ 'ಸೈಬರ್ ಅಪರಾಧ ಶೃಂಗಸಭೆ–2025' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಸೈಬರ್ ಅಪರಾಧಗಳಿಗೆ ಯಾವುದೇ ರೀತಿಯ ಇತಿಮಿತಿಗಳಿಲ್ಲ. ಪ್ರಪಂಚದಲ್ಲಿ ಆಗುತ್ತಿರುವ ಸೈಬರ್ ಅಪರಾಧಗಳ ಕುರಿತು ಅರಿವು ಮೂಡಿಸಬೇಕು ಎಂಬ ಉದ್ದೇಶದಿಂದ ಸಿಸಿಐಟಿಆರ್ ಸ್ಥಾಪಿಸಲಾಗಿದೆ. ಈವರೆಗೆ 46 ಸಾವಿರಕ್ಕೂ ಹೆಚ್ಚು ಅಧಿಕಾರಿ ಮತ್ತು ಸಿಬ್ಬಂದಿಗೆ ತರಬೇತಿ ನೀಡಲಾಗಿದೆ ಎಂದು ತಿಳಿಸಿದರು.

2023ರಲ್ಲಿ 22 ಸಾವಿರ ಸೈಬರ್ ಅಪರಾಧ ಪ್ರಕರಣಗಳು ದಾಖಲಾಗಿದ್ದವು. ಬ್ಯಾಂಕ್ ಖಾತೆ, ದತ್ತಾಂಶ ಕಳವು, ಸರ್ಕಾರಿ ಖಾತೆಗಳು ಹ್ಯಾಕ್ ಆಗುವುದು ಸೇರಿದಂತೆ ನಾನಾ ರೀತಿಯ ಸೈಬರ್ ಅಪರಾಧಗಳು ಆಗುತ್ತಿವೆ. ಇದನ್ನು ತಡೆಗಟ್ಟದೆ ಹೋದರೆ ಮುಂದಿನ ದಿನಗಳಲ್ಲಿ ತೊಂದರೆಗಳಾಗುತ್ತವೆ. ಸಾಮಾನ್ಯ ಅಪರಾಧಗಳಿಗಿಂತ ಸೈಬರ್ ಅಪರಾಧಗಳು ಹೆಚ್ಚಾಗುತ್ತಿವೆ ಎಂದರು.

ಸೈಬರ್ ಅಪರಾಧ ಶೃಂಗಸಭೆ–2025'ಯಲ್ಲಿ ಅಲೋಕ್ ಮೋಹನ್ ಮತ್ತು ಜಿ.ಪರಮೇಶ್ವರ ಚರ್ಚಿಸಿದರು. ಎಸ್.ಆರ್.ಉಮಾಶಂಕರ್ ಇದ್ದಾರೆ.

ಪ್ರಜಾವಾಣಿ ಚಿತ್ರ

ನಗರದಲ್ಲಿ ದಾಖಲಾಗುತ್ತಿರುವ ಅಪರಾಧಗಳಲ್ಲಿ ಶೇಕಡ 30ರಷ್ಟು ಸೈಬರ್ ಅಪರಾಧಗಳು ದಾಖಲಾಗುತ್ತಿವೆ. ಆರಂಭಿಕ ಹಂತದಲ್ಲೇ ಗಮನ ಹರಿಸಿ, ತಡೆಗಟ್ಟಲು ಅಗತ್ಯ ಕ್ರಮ ವಹಿಸಲಾಗುವುದು. ಕಾನೂನು ಸುವ್ಯವಸ್ಥೆಯನ್ನು ಬಲಪಡಿಸಲು ತಂತ್ರಜ್ಞಾನ ಮತ್ತು ತರಬೇತಿಗಳು ನಿರ್ಣಾಯಕ ಪಾತ್ರ ವಹಿಸುತ್ತವೆ. ಜಾಗತಿಕವಾಗಿ ಹೆಚ್ಚುತ್ತಿರುವ ಸೈಬರ್ ಅಪರಾಧಗಳ ತಡೆಗೆ ತಾಂತ್ರಿಕ ಬಲವರ್ಧನೆಯನ್ನು ಹೆಚ್ಚಿಸಿಕೊಳ್ಳಬೇಕಿದೆ ಎಂದರು.

ಪೊಲೀಸ್ ಮಹಾ ನಿರ್ದೇಶಕ ಅಲೋಕ್ ಮೋಹನ್ ಮಾತನಾಡಿ, ಕಳೆದ ನಾಲ್ಕು ವರ್ಷಗಳಲ್ಲಿ 60 ಸಾವಿರಕ್ಕೂ ಹೆಚ್ಚು ಸೈಬರ್ ಅಪರಾಧಗಳು ದಾಖಲಾಗಿವೆ ಎಂದರು.

ಸಿಐಡಿ ಆಯೋಜಿಸಿದ್ದ ಹ್ಯಾಕಥಾನ್ ಮತ್ತು ಸೈಬರ್ ಲಾ ಐಡಿಯಾಥಾನ್‌ಗಳಲ್ಲಿ ಭಾಗವಹಿಸಿ, ಡೀಪ್ ಫೇಕ್ ಪತ್ತೆ, ಬ್ಲಾಕ್ ಚೈನ್ ತಂತ್ರಜ್ಞಾನ ಬಳಕೆ ಸೇರಿದಂತೆ ಇತರೆ ಸೈಬರ್ ಅಪರಾಧಗಳ ಸಮಸ್ಯೆ ಬಗೆಹರಿಸಲು ತಂತ್ರಾಂಶಗಳನ್ನು ಅಭಿವೃದ್ಧಿಪಡಿಸುವ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ನೀಡಲಾಯಿತು.

ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಸ್.ಆರ್. ಉಮಾಶಂಕರ್, ಸಿಐಡಿ ಆರ್ಥಿಕ ಅಪರಾಧಗಳು ಮತ್ತು ವಿಶೇಷ ಘಟಕದ ಡಿಜಿಪಿ ಎಂ.ಎ.ಸಲೀಂ, ಸೈಬರ್ ಕ್ರೈಂ ಮತ್ತು ನಾರ್ಕೋಟಿಕ್ಸ್ ವಿಭಾಗದ ಡಿಜಿಪಿ ಪ್ರಣಬ್ ಮೊಹಂತಿ, ಇನ್ಫೊಸಿಸ್ ಫೌಂಡೇಷನ್ ಟ್ರಸ್ಟಿ ಸುನಿಲ್ ಕುಮಾರ್, ಡೇಟಾ ಸೆಕ್ಯುರಿಟಿ ಕೌನ್ಸಿಲ್ ಆಫ್ ಇಂಡಿಯಾದ ಸಿಇಒ ವಿನಾಯಕ ಗೋಡ್ಸೆ ಹಾಜರಿದ್ದರು.

ವಿಧಾನ ಪರಿಷತ್ತಿನಲ್ಲಿ ಬೆಂಗಳೂರು ಅಭಿವೃದ್ಧಿ ಸಚಿವ ಡಿ.ಕೆ.ಶಿವಕುಮಾರ್ ಹೇಳಿಕೆ

ನೀರಿನ ದರ ಲೀಟರ್‌ಗೆ 1 ಪೈಸೆ ಏರಿಕೆಗೆ ನಿರ್ಧಾರ

ಪ್ರಜಾವಾಣಿ ವಾರ್ತೆ

ಡಿ.ಕೆ ಶಿವಕುಮಾರ್

ಬೆಂಗಳೂರು: 'ನಗರದಲ್ಲಿ ನೀರಿನ ದರ ಪರಿಷ್ಕರಣೆ ಮಾಡಲು ನಿರ್ಧರಿಸಲಾಗಿದ್ದು, ಪ್ರತಿ ಲೀಟರ್‌ಗೆ 1 ಪೈಸೆ ಹೆಚ್ಚಳಕ್ಕೆ ಚಿಂತನೆ ನಡೆದಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ವಿಧಾನಪರಿಷತ್‌ನಲ್ಲಿ ಕಾಂಗ್ರೆಸ್‌ನ ರಾಮೋಜಿ ಗೌಡ ಅವರ ಪ್ರಶ್ನೆಗೆ ಶುಕ್ರವಾರ ಉತ್ತರಿಸಿದ ಅವರು, 2014ರ ನಂತರ ಬೆಂಗಳೂರಿನಲ್ಲಿ ನೀರಿನ ದರ ಪರಿಷ್ಕರಣೆ ಮಾಡಿಲ್ಲ' ಎಂದು ಉಲ್ಲೇಖಿಸಿದರು.

'ಈಗ, ಪ್ರತಿ ಲೀಟರ್‌ಗೆ 7-8 ಪೈಸೆ ಹೆಚ್ಚಿಸಲು ಬೆಂಗಳೂರು ಜಲ ಮಂಡಳಿ ಪ್ರಸ್ತಾವ ಸಲ್ಲಿಸಿದೆ. ಒಮ್ಮೆಗೆ ಹೆಚ್ಚಿಸುವುದು ಸರಿಯಲ್ಲ. ಬಿಬಿಎಂಪಿ ಬಜೆಟ್ ಸಿದ್ಧಪಡಿಸುವಾಗ ಬೆಂಗಳೂರು ನಗರ ವ್ಯಾಪ್ತಿಯ ಶಾಸಕರ ಸಭೆ ಕರೆದು ಈ ಬಗ್ಗೆ ಚರ್ಚಿಸಲಾಗುವುದು. 1 ಪೈಸೆ ಹೆಚ್ಚಳ ಮಾಡಿದರೆ ಮಂಡಳಿಗೆ ಆಗುತ್ತಿರುವ ವಾರ್ಷಿಕ ಸುಮಾರು ₹1 ಸಾವಿರ ಕೋಟಿಯಷ್ಟು ನಷ್ಟ ತಪ್ಪಿಸಬಹುದು ಎಂದರು.

ಬೇಸಿಗೆಯ ತೀವ್ರತೆ ಈಗಾಗಲೇ ಹೆಚ್ಚಾಗಿದೆ. ಕಳೆದ ವರ್ಷ ಸಂಕಷ್ಟದ ಸ್ಥಿತಿ ಇತ್ತು. ಏಳು ಸಾವಿರ ಕೊಳವೆಬಾವಿಗಳು ಬತ್ತಿದ್ದವು. ನೀರಿನ ಬವಣೆ ಇರುವ ಪ್ರದೇಶಗಳಿಗೆ ಟ್ಯಾಂಕರ್ ಮೂಲಕ ನೀರು ಪೂರೈಸಲಾಗಿತ್ತು. ಖಾಸಗಿ ಟ್ಯಾಂಕರ್‌ಗಳನ್ನು ಪಾಲಿಕೆ ಸುಪರ್ದಿಗೆ ಪಡೆಯಲಾಗಿತ್ತು. ಈ ಬಾರಿಯೂ ಅಂತಹ ಮುಂಜಾಗ್ರತೆ ವಹಿಸಲಾಗುತ್ತಿದೆ. ಟ್ಯಾಂಕರ್ ನೀರಿಗೆ ಕನಿಷ್ಠ ದರ ನಿಗದಿ ಮಾಡಲಾಗುತ್ತದೆ ಎಂದು ಹೇಳಿದರು.

ಮಾರ್ಚ್ 22 ಜಲಸಂರಕ್ಷಣಾ ದಿನ. ಒಂದು ತಿಂಗಳು ಜಲ ಸಂರಕ್ಷಣಾ ಜಾಗೃತಿ ಅಭಿಯಾನ ನಡೆಸಲು ತೀರ್ಮಾನಿಸಿದ್ದೇವೆ. ಕಾವೇರಿ 5ನೇ ಹಂತದ ಯೋಜನೆಯನ್ನು ಪೂರ್ಣಗೊಳಿಸಲಾಗಿದೆ. 110 ಹಳ್ಳಿಗಳಿಗೆ ಪೂರೈಸಲು ವ್ಯವಸ್ಥೆ ಮಾಡಲಾಗಿದೆ. ಬತ್ತಿರುವ ಎಲ್ಲಾ ಕೆರೆಗಳಿಗೂ ನೀರು ತುಂಬಿಸಲಾಗುವುದು ಎಂದರು.

ಅಪಾರ್ಟ್‌ಮೆಂಟ್ ಸಮುಚ್ಚಯ ಕಟ್ಟಿದ ಗುತ್ತಿಗೆದಾರರು ಜಲಮಂಡಳಿಗೆ ನೀರಿನ ಸಂಪರ್ಕದ ಠೇವಣಿ ಪಾವತಿ ಮಾಡಿಲ್ಲ. ಅನುಮತಿ ಪಡೆಯದೆ ಅಕ್ರಮವಾಗಿ ಸಂಪರ್ಕ ಪಡೆದಿದ್ದಾರೆ. ಅವರಿಗೆ ನೋಟಿಸ್ ನೀಡಲಾಗಿದೆ ಎಂದು ಹೇಳಿದರು.

ಕಾವೇರಿ 6ನೇ ಹಂತ; ಡಿಪಿಆರ್ ಸಿದ್ಧ

ಕಾವೇರಿ 6ನೇ ಹಂತದ ಕುಡಿಯುವ ನೀರಿನ ಯೋಜನೆಗೆ ಡಿಪಿಆರ್ ಸಿದ್ಧವಾಗಿದ್ದು, ಸಚಿವ ಸಂಪುಟದ ಅನುಮತಿ ಪಡೆದ ನಂತರ ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸಲಾಗುವುದು ಎಂದು ಶಿವಕುಮಾರ್ ಹೇಳಿದರು.

ಮಳೆನೀರು ಸಂಗ್ರಹ ಪದ್ಧತಿ ಕಡ್ಡಾಯಗೊಳಿಸಲಾಗುವುದು. ಕಟ್ಟಡ ನಿರ್ಮಾಣ ಮಾಡುವಾಗ ಮೂರು ಅಡಿ ಜಾಗವನ್ನೂ ಬಿಡದೆ ಕಾಂಕ್ರಿಟ್ ಹಾಕುತ್ತಿದ್ದಾರೆ. ಇದನ್ನು ತಪ್ಪಿಸಲು ಕಡ್ಡಾಯ ನಿಯಮ ರೂಪಿಸಲಾಗುವುದು ಎಂದರು.

ಬಿಬಿಎಂಪಿ ಚುನಾವಣೆಗೆ ಸಿದ್ಧ– ಡಿಕೆಶಿ

ಬೆಂಗಳೂರು: 'ಬಿಬಿಎಂಪಿಗೆ ಚುನಾವಣೆ ನಡೆಸಲು ಸರ್ಕಾರ ತಯಾರಿದೆ' ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಶನಿವಾರ ಪುನರುಚ್ಚರಿಸಿದರು.

ಬಿಬಿಎಂಪಿ ಚುನಾವಣೆಯಲ್ಲಿ ಈ ಹಿಂದೆ ಸ್ಪರ್ಧಿಸಿದ್ದ ಪಕ್ಷದ ಅಭ್ಯರ್ಥಿಗಳ ಜೊತೆ ಕೆಪಿಸಿಸಿ ಕಚೇರಿಯಲ್ಲಿ ಅವರು ಚರ್ಚೆ ನಡೆಸಿದರು. ಈ ವೇಳೆ ಸುದ್ದಿಗಾರರ ಪ್ರಶ್ನೆಗೆ ಅವರು, 'ಬಿಬಿಎಂಪಿ ಚುನಾವಣೆಯಿಂದ ಎಷ್ಟು ದಿನ ನಾವು ತಪ್ಪಿಸಿಕೊಂಡು ಇರಲು ಸಾಧ್ಯ' ಎಂದರು.

'ಕಸ ವಿಲೇವಾರಿ ವಿಚಾರದಲ್ಲಿ ಯಾವ ಶಾಸಕರು ಬ್ಲ್ಯಾಕ್ ಮೇಲ್ ಮಾಡುತ್ತಿದ್ದಾರೆ' ಎಂದು ಕೇಳಿದಾಗ, 'ಎಲ್ಲಿ ಕಸ ನಿಂತಿದೆಯೊ ಅಲ್ಲಿಗೆ ಹೋಗಿ ನೀವೇ (ಮಾಧ್ಯಮದವರು) ನೋಡಿ ಗೊತ್ತಾಗುತ್ತದೆ' ಎಂದರು.

22ರಂದು ತಮಿಳುನಾಡಿಗೆ ಪ್ರಯಾಣ: 'ಕ್ಷೇತ್ರ ಪುನರ್ ವಿಂಗಡಣೆ ಕುರಿತು ಮಾರ್ಚ್ 22ರಂದು ನಡೆಯಲಿರುವ ಸಭೆಯಲ್ಲಿ ಭಾಗವಹಿಸುವಂತೆ ಮುಖ್ಯಮಂತ್ರಿ ಮತ್ತು ನನಗೆ, ತಮಿಳುನಾಡಿನ ಮುಖ್ಯಮಂತ್ರಿ ಸ್ಟಾಲಿನ್ ಆಹ್ವಾನ ನೀಡಿದ್ದಾರೆ. ಆ ಸಭೆಯಲ್ಲಿ ಭಾಗವಹಿಸುವಂತೆ ಹೈಕಮಾಂಡ್ ಹಾಗೂ ಮುಖ್ಯಮಂತ್ರಿಯವರು ನನಗೆ ನಿರ್ದೇಶನ ನೀಡಿದ್ದಾರೆ' ಎಂದು ಶಿವಕುಮಾರ್ ಹೇಳಿದರು.

'ಪಕ್ಷ ಹಾಗೂ ಸರ್ಕಾರದ ವತಿಯಿಂದ ನಾನು ಸಭೆಯಲ್ಲಿ ಭಾಗವಹಿಸಲಿದ್ದೇನೆ' ಎಂದರು.

'ಕ್ಷೇತ್ರ ಮರುವಿಂಗಡಣೆ ವಿಚಾರದ ಕುರಿತು ದೇಶದಲ್ಲಿ ಚರ್ಚೆ ನಡೆದಿದೆ. ನಾವು ನಮ್ಮ ಹಕ್ಕು ಹಾಗೂ ಲೋಕಸಭೆ ಕ್ಷೇತ್ರಗಳ ಸಂಖ್ಯೆಗಳನ್ನು ಬಿಟ್ಟು ಕೊಡಲು ತಯಾರಿಲ್ಲ. ಪಕ್ಷದ ನಿಲುವಿನ ಬಗ್ಗೆ 18ರಂದು ಚರ್ಚಿಸಿ, ತಿಳಿಸುತ್ತೇನೆ' ಎಂದರು.

ಕೆ.ಆರ್.ಪುರದಲ್ಲಿ ಶಾಸಕ ಬೈರತಿ ಬಸವರಾಜ ಅವರು 'ಮಿಡಿದ ಮರಗಳು' ಪುಸ್ತಕ ಲೋಕಾರ್ಪಣೆ ಮಾಡಿದರು

'ಪರಿಸರ ಸಾಹಿತ್ಯ ಕ್ಷೇತ್ರವೂ ವಿಸ್ತರಿಸಲಿ'

ಕೆ.ಆರ್.ಪುರ: 'ಪರಿಸರ ಸಂರಕ್ಷಣೆ ಜೊತೆಗೆ ಪರಿಸರ ಸಾಹಿತ್ಯ ಕ್ಷೇತ್ರವೂ ವಿಸ್ತರಿಸಲಿ' ಎಂದು ಶಾಸಕ ಬೈರತಿ ಬಸವರಾಜ ಆಶಿಸಿದರು.

ಕೆ.ಆರ್.ಪುರ ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ ಮಿಡಿತ ಫೌಂಡೇಶನ್ ಸಹಯೋಗದಲ್ಲಿ ಏರ್ಪಡಿಸಿದ್ದ ಲೇಖಕ ಪರಿಸರ ಮಂಜು ಅವರ ಮೂರನೇ ಕೃತಿ 'ಮಿಡಿದ ಮರಗಳು' ಪುಸ್ತಕ ಲೋಕಾರ್ಪಣೆಗೊಳಿಸಿ ಮಾತನಾಡಿದರು.

'ಬೆಂಗಳೂರಿನಲ್ಲಿ ಪರಿಸರ ಸಂರಕ್ಷಣೆ ಬಹಳ ಮುಖ್ಯ. ಅಭಿವೃದ್ಧಿಗಾಗಿ ಮರ ಕಡಿಯುವುದು ಅನಿವಾರ್ಯ. ಮರ ಕಡಿದರೆ ಪ್ರತಿಯಾಗಿ ಹನ್ನೊಂದು ಗಿಡ ನೆಡುವ ಮೂಲಕ ಪರಿಸರ ಸಂರಕ್ಷಣೆಗೆ ಮುಂದಾಗಬೇಕು ಎಂದರು. ಸಾಹಿತಿ ಪರಿಸರ ಮಂಜು ಅವರು, ಅನಧಿಕೃತವಾಗಿ ಮರಗಳನ್ನು ಕಡಿದವರಿಗೆ ತಕ್ಕ ಶಿಕ್ಷೆಯಾಗಬೇಕು. ಮರ ಸಂರಕ್ಷಣೆ ಕಾಯ್ದೆ ಬಲಿಷ್ಠವಾಗಬೇಕು' ಎಂದು ಅಭಿಪ್ರಾಯಪಟ್ಟರು.

ಸುದ್ದಿ 2 ನಿಮಿಷ

ಶುಲ್ಕ ತಪ್ಪಿಸುವ ಟ್ರಕ್‌ಗಳಿಗಷ್ಟೇ ನಿರ್ಬಂಧ: ಸತೀಶ ಜಾರಕಿಹೊಳಿ

ಬೆಂಗಳೂರು: 'ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ಬಿಡದಿ, ಮಂಡ್ಯ, ಪಾಂಡವಪುರ, ಶ್ರೀರಂಗಪಟ್ಟಣದ ಬಳಿ ನೀಡಲಾಗಿದ್ದ ಪ್ರವೇಶ, ನಿರ್ಗಮನ ಮಾರ್ಗಗಳನ್ನು ಮುಚ್ಚಿಲ್ಲ' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್‌ನ ದಿನೇಶ್ ಗೂಳಿಗೌಡ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, 'ಬೆಂಗಳೂರಿನಿಂದ ಮೈಸೂರು ಕಡೆಗೆ ಸಂಚರಿಸುತ್ತಿರುವ ಭಾರಿ ವಾಹನಗಳು ತೊಬಿನಕೆರೆ ಬಳಿ ಟೋಲ್ ಪ್ಲಾಜಾ ತಪ್ಪಿಸುವ ಮಾಡುವ ಉದ್ದೇಶದಿಂದ ಸರ್ವಿಸ್ ರಸ್ತೆಯಲ್ಲಿ ನಿರ್ಗಮಿಸುತ್ತಿದ್ದವು. ಇಲ್ಲಿನ ಪಕ್ಕದ ಹಳ್ಳಿಗರು, ಸ್ಥಳೀಯ ಸಂಚಾರ ಮತ್ತು ದ್ವಿಚಕ್ರ ವಾಹನಗಳು ಸಂಚರಿಸುತ್ತಿದ್ದರಿಂದ ವಾಹನಗಳ ದಟ್ಟಣೆಯಿಂದ ಸರ್ವಿಸ್ ರಸ್ತೆಯಲ್ಲಿ ಅಪಘಾತಗಳು ಆಗುತ್ತಿದ್ದವು. ಇದನ್ನು ತಪ್ಪಿಸುವ ಉದ್ದೇಶದಿಂದ ಭಾರಿ ವಾಹನಗಳ ನಿರ್ಗಮನ ನಿರ್ಬಂಧಿಸಲಾಗಿದೆ' ಎಂದರು.

'ಇತರೆ ಎಲ್ಲ ಸ್ವರೂಪದ ವಾಹನಗಳಿಗೆ ನಿರ್ಗಮನದ ಅವಕಾಶ ಕಲ್ಪಿಸಲಾಗಿದೆ. ಪಾಂಡವಪುರ ಒಳಗೊಂಡಂತೆ ಪಕ್ಕದ ಹಳ್ಳಿಗಳನ್ನು ತಲುಪಲು ಸೇವಾ ರಸ್ತೆಗೆ ಪ್ರವೇಶಿಸಲು ಮತ್ತು ನಿರ್ಗಮಿಸಲು ಅನುಮತಿ ನೀಡಲಾಗಿದೆ' ಎಂದೂ ಹೇಳಿದರು.

ಬಿ.ಪ್ಯಾಕ್: ತರಬೇತಿಗೆ ಅರ್ಜಿ

ಬೆಂಗಳೂರು: ಪೊಲಿಟಿಕಲ್ ಆ್ಯಕ್ಷನ್ ಕಮಿಟಿಯಿಂದ (ಬಿ-ಪ್ಯಾಕ್) ರಾಜಕೀಯ ಕ್ಷೇತ್ರದಲ್ಲಿ ಆಸಕ್ತಿ ಇರುವವರಿಗಾಗಿ ಬಿ-ಪ್ಯಾಕ್ ನಾಗರಿಕ ನಾಯಕತ್ವ ತರಬೇತಿ (ಬಿ-ಕ್ಲಿಪ್) ಕಾರ್ಯಕ್ರಮದ 10ನೇ ಆವೃತ್ತಿಗೆ ಅರ್ಜಿ ಆಹ್ವಾನಿಸಿದೆ.

ರಾಜಕೀಯ, ನಗರ ಆಡಳಿತ, ನೀತಿ ನಿರೂಪಣೆ, ನಾಯಕತ್ವ, ಚುನಾವಣಾ ಕಾರ್ಯತಂತ್ರ, ಮಾಧ್ಯಮ ನಿರ್ವಹಣೆ ಸೇರಿದಂತೆ ನಾಗರಿಕ ಕ್ಷೇತ್ರದಲ್ಲಿ ಸೇವೆ ಸಲ್ಲಿಸಲು ಅಗತ್ಯವಿರುವ ಎಲ್ಲಾ ರೀತಿಯ ಅರ್ಹತೆಯನ್ನು ಈ ತರಬೇತಿಯಲ್ಲಿ ನೀಡಲಾಗುತ್ತದೆ ಎಂದು ಬಿ.ಕ್ಲಿಪ್ ಕಾರ್ಯಕ್ರಮದ ಮುಖ್ಯಸ್ಥ ಹೆಚ್.ಎಸ್. ರಾಘವೇಂದ್ರ ಪೂಜಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಸಲ್ಲಿಸಲು ಏಪ್ರಿಲ್ 10 ಕೊನೆ ದಿನ. ಬಿಬಿಎಂಪಿ ಚುನಾವಣೆ ಸಮೀಪಿಸುತ್ತಿದ್ದು, ಈ ಚುನಾವಣೆಯಲ್ಲಿ ಸ್ಪರ್ಧಿಸುವವರೂ ಇಲ್ಲಿ ತರಬೇತಿ ಪಡೆದು, ಸೂಕ್ತ ರೀತಿಯಲ್ಲಿ ಆಡಳಿತ ನಡೆಸಲು ಅನುಭವ ಪಡೆದುಕೊಳ್ಳಬಹುದು. ಆಸಕ್ತರು www.bpac.in ಜಾಲತಾಣದ ಮೂಲಕ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ, +91-63648 56147, 080-41521797 ಸಂಪರ್ಕಿಸಬಹುದು.

ಇ-ಖಾತೆ ಅಭಿಯಾನ

ಪ್ರಜಾವಾಣಿ ವಾರ್ತೆ

ಯಲಹಂಕ: ಹುಣಸಮಾರನಹಳ್ಳಿ ಪುರಸಭೆ ವ್ಯಾಪ್ತಿಯ ಭಾರತಿನಗರದಲ್ಲಿ ಇ-ಖಾತಾ ಅಭಿಯಾನಕ್ಕೆ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಕೆ.ಅಶೋಕನ್ ಚಾಲನೆ ನೀಡಿದರು.

ಈ ವೇಳೆ ಅವರು, ನಗರ

‘ಭೂಮಿಕಾ’ದಲ್ಲಿ ಜಾಗೃತಿಯ ಬೆಳಕು

- ‘ಸೆನ್’ ಎಸಿಪಿಯಿಂದ ‘ಡಿಜಿಟಲ್ ಅರೆಸ್ಟ್’ ಕುರಿತು ಮಾತು
- ಮಹಿಳೆಯರ ಆರೋಗ್ಯದ ಅರಿವು
- ಸಾಂಸ್ಕೃತಿಕ ಸಂಭ್ರಮ

ನಟಿ ಅನುಪಾ ರೈ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿವೃತ್ತರೇ ಅಧಿಕ ಸಂಖ್ಯೆಯಲ್ಲಿ ‘ಡಿಜಿಟಲ್ ಅರೆಸ್ಟ್’ ಮೂಲಕ ಹಣ ಕಳೆದುಕೊಳ್ಳುತ್ತಿರುವ ಬಗ್ಗೆ ಮಾಹಿತಿ, ಮಹಿಳೆಯರನ್ನು ಕಾಡುವ ಅನಾರೋಗ್ಯದ ವಿವರಗಳು, ನಡುವೆ ಗಮನ ಸೆಳೆವ ನೃತ್ಯಗಳು..

ಇಂದಿರಾನಗರ ಕ್ಲಬ್‌ನಲ್ಲಿ ‘ಪ್ರಜಾವಾಣಿ’ ಹಾಗೂ ‘ಡೆಕ್ಕನ್ ಹೆರಾಲ್ಡ್’ನ ಭೂಮಿಕಾ ಕ್ಲಬ್ ಶನಿವಾರ ಆಯೋಜಿಸಿದ್ದ 25ನೇ ಆವೃತ್ತಿಯ ಕಾರ್ಯಕ್ರಮದ ಇಣುಕುನೋಟ ಇದು.

‘ಫ್ರೀಡಂ ಆಯಿಲ್’, ‘ಮಣಿಪಾಲ್ ಆಸ್ಪತ್ರೆಗಳ ಸಮೂಹ’, ‘ಇಕೊ ಕ್ರಿಸ್ಟಲ್’ ಸಹಕಾರದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಉದ್ಘಾಟಕರ ಮಾತು, ಉತ್ತರ ಕರ್ನಾಟಕದ ಅಡುಗೆಯ ಪ್ರಾತ್ಯಕ್ಷಿಕೆಗಳು ಉತ್ಸಾಹ ತುಂಬಿದವು.

ಕಾರ್ಯಕ್ರಮಕ್ಕೆ ಚಾಲನೆ ನೀಡಿದ ನಟಿ, ಬಿಗ್‌ಬಾಸ್ ಸ್ಪರ್ಧಿ ಅನುಷಾ ರೈ ಮಾತನಾಡಿ, ‘ನಮ್ಮ ತಪ್ಪುಗಳನ್ನು ಎತ್ತಿ ತೋರಿಸಿ ತಿದ್ದಿಕೊಳ್ಳಲು ಅವಕಾಶ ನೀಡುವ ಟೀಕೆ, ವಿಮರ್ಶೆಗಳು ಬೇಕು. ಆದರೆ, ಸುಮ್ಮನೆ ನಕಾರಾತ್ಮಕವಾಗಿ ಮಾತಾಡುವವರು, ಕೆಟ್ಟದಾಗಿ ಕಮೆಂಟ್ ಮಾಡುವವರು ಕೆಲಸ ಇಲ್ಲದವರು. ಅಂಥವುಗಳನ್ನು ನಿರ್ಲಕ್ಷಿಸಬೇಕು‘ ಎಂದರು.

‘ಅಂಥವರನ್ನು ಬ್ಲಾಕ್ ಮಾಡಿ, ಸ್ವಾಮ್ ಮಾಡಿ. ಕಿರಿಕಿರಿಯಾದರೆ ದೂರು ನೀಡಿ. ಅದನ್ನು ಬಿಟ್ಟು ನೆಮ್ಮದಿ ಕಳೆದುಕೊಳ್ಳಬೇಡಿ. ಹಿಂದಿನಿಂದ ಮಾತನಾಡುವವರ ಬಗ್ಗೆಯೂ ನಿರ್ಲಕ್ಷ್ಯ ವಹಿಸಿ. ಅವರಿಗಿಂತ ನೀವು ಮುಂದೆ ಇದ್ದೀರಿ ಎಂದುತಿಳಿಯಿರಿ‘ ಎಂದರು.

ಅವಮಾನಗಳನ್ನು ಎದುರಿಸಲು ಕಲಿತರೇ ಮುಂದೆ ಸನ್ಮಾನಗಳ ಸುರಿಮಳೆಯಾಗುತ್ತದೆ. ಅವಮಾನಕ್ಕೆ ಕುದ್ದು ಹೋದರೆ ಜೀವನದಲ್ಲಿ ಸಾಧನೆ ಸಾಧ್ಯವಿಲ್ಲ ಎಂದು ಕಿವಿಮಾತು ಹೇಳಿದರು.

ಪಶ್ಚಿಮ ವಿಭಾಗದ ‘ಸೆನ್’ ಎಸಿಪಿ ಉಮಾರಾಣಿ ಎಸ್. ಅವರು ಸೈಬರ್ ಅಪರಾಧದ ಬಗ್ಗೆ ಮಾತನಾಡಿ, ‘ಇತ್ತೀಚೆಗೆ ಡಿಜಿಟಲ್ ಅರೆಸ್ಟ್ ಮೂಲಕ ಹಣ ಕಳೆದುಕೊಳ್ಳುವವರಲ್ಲಿ ಶೇ 80ರಷ್ಟು ಮಂದಿ ಹಿರಿಯ ನಾಗರಿಕರು, ನಿವೃತ್ತರು ಆಗಿದ್ದಾರೆ. ಕೋಟ್ಯಂತರ ರೂಪಾಯಿ ಕಳೆದು ಕೊಂಡಿದ್ದಾರೆ. ಪೊಲೀಸರು ಯಾವತ್ತೂ ವಿಡಿಯೊ ಮೂಲಕ ವಿಚಾರಣೆ ನಡೆಸುವುದಿಲ್ಲ. ಪೊಲೀಸ್ ಹೆಸರಲ್ಲಿ ವಿಡಿಯೊ ಮೂಲಕ ಕರೆ ಬಂದರೆ ಹೆದರಿಕೊಳ್ಳಬೇಡಿ’ ಎಂದು ಮಾಹಿತಿ ನೀಡಿದರು.

ಪಾವನಿ ಡಿ. ಮತ್ತು ಭವಾನಿ ನೃತ್ಯ ಪ್ರದರ್ಶಿಸಿದರು

ಭೂಮಿಕಾ ಕ್ಲಬ್ ಕಾರ್ಯಕ್ರಮದಲ್ಲಿ ಪಶ್ಚಿಮ ವಿಭಾಗದ ‘ಸೆನ್’ ಎಸಿಪಿ ಉಮಾರಾಣಿ ಎಸ್. ಅವರು ಸೈಬರ್ ಅಪರಾಧದ ಬಗ್ಗೆ ಮಾಹಿತಿ ನೀಡಿದರು. ಪ್ರಜಾವಾಣಿ ಚಿತ್ರ: ಎಸ್.ಕೆ. ದಿನೇಶ್

‘ಬ್ಯಾಂಕ್ ಖಾತೆಗಳನ್ನು ಮಾರಿಕೊಳ್ಳುವವರೂ ಇದ್ದಾರೆ. ವಂಚಕರು ನಿಮ್ಮನ್ನು ಸಂಪರ್ಕಿಸಿ ಒಂದು ಬ್ಯಾಂಕ್ ಖಾತೆ ತೆರೆದುಕೊಟ್ಟರೆ ₹ 15,000, ₹ 20,000 ನೀಡುವುದಾಗಿ ಹೇಳಿದಾಗ ದುಡ್ಡಿನ ಆಸೆಗೆ ಚಾಲ್ತಿ ಖಾತೆ ತೆರೆದು ಕೊಡುವವರಿದ್ದಾರೆ. ಆ ಬ್ಯಾಂಕ್‌ನ ನೆಟ್‌ಬ್ಯಾಂಕಿಂಗ್ ಮಾಹಿತಿ ಇಟ್ಟುಕೊಳ್ಳುವ ವಂಚಕರು ಯಾರನ್ನೋ ಮೋಸಗೊಳಿಸಿ ನಿಮ್ಮ ಖಾತೆಗೆ ಹಣ ಹಾಕಿಸುತ್ತಾರೆ. ಆನಂತರ ಹಣವನ್ನು ವಂಚಕರು ತೆಗೆದುಕೊಳ್ಳುತ್ತಾರೆ’ ಎಂದು ತಿಳಿಸಿದರು.

ಇತ್ತೀಚೆಗೆ ಆಟೊ ಚಾಲಕರೊಬ್ಬರು ಈ ರೀತಿ ಏಳು ಖಾತೆ ಮಾಡಿ ಕೊಟ್ಟಿದ್ದರು. ಪ್ರತಿ ಖಾತೆ ಮಾಡಿದಾಗಲೂ ಇವರಿಗೆ ಸ್ವಲ್ಪ ಹಣ ಬಂದಿದೆ. ಆದರೆ, ಇವರ ಖಾತೆಯ ಮೂಲಕ ಬೇರೆಯವರಿಗೆ ಕೋಟಿ ರೂಪಾಯಿ ವಂಚನೆ ಮಾಡಲಾಗಿತ್ತು. ಆಟೊ ಚಾಲಕ ಜೈಲು ಪಾಲಾದರು. ನೈಜ ವಂಚಕರು ತಪ್ಪಿಸಿಕೊಂಡರು ಎಂದು ವಿವರ ನೀಡಿದರು.

‘ಯಾವುದೇ ಕಾರಣಕ್ಕೆ ಒಟಿಪಿ ನೀಡಬೇಡಿ. ಸಾಮಾಜಿಕ ಜಾಲತಾಣಗಳಲ್ಲಿ ತೀರ ವೈಯಕ್ತಿಕ ಮಾಹಿತಿ ಹಂಚಿಕೊಳ್ಳಬೇಡಿ’ ಎಂದರು.

‘ಉತ್ತರ ಕರ್ನಾಟಕ ಅಡುಗೆ ಮನೆ’ ಯೂಟ್ಯೂಬ್‌ನ ತ್ರಿವೇಣಿ ಪಾಟೀಲ ಅವರು ‘ನವಣೆ ಹೋಳಿಗೆ’ಯ ಪ್ರಾತ್ಯಕ್ಷಿಕೆ ನೀಡಿದರು. ಪಾವನಿ ಡಿ. ಮತ್ತು ಭವಾನಿ ಆಕರ್ಷಕ ನೃತ್ಯ ಪ್ರದರ್ಶಿಸಿದರು. ನಿರೂಪಕರಾದ ಆರ್.ಜೆ. ಅಕ್ಷಯ್ ಮತ್ತು ಸ್ನೇಹಾ ನೀಲಪ್ಪ ಗೌಡ ಪ್ರೇಕ್ಷಕರಿಗೆ ವಿವಿಧ ಆಟಗಳನ್ನು ಆಡಿಸಿ ಹುರಿದುಂಬಿಸಿದರು. ತಾರಕ್ ಗ್ರೂಪ್ ಆಫ್ ಡ್ಯಾನ್ಸ್ ನೃತ್ಯ ಪ್ರದರ್ಶನದೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.

ತ್ರಿವೇಣಿ ಪಾಟೀಲ ಅವರು ‘ನವಣೆ ಹೋಳಿಗೆ’ಯ ಪ್ರಾತ್ಯಕ್ಷಿಕೆ ನೀಡಿದರು

‘ಉದ್ಯೋಗಸ್ಥ ಮಹಿಳೆ ಆರೋಗ್ಯ ಕಾಳಜಿ ವಹಿಸಿ’

ಉದ್ಯೋಗದಲ್ಲಿರುವ ಮಹಿಳೆಯರು ಹೆಚ್ಚು ಅನಾರೋಗ್ಯಕ್ಕೆ ಒಳಗಾಗುತ್ತಿದ್ದಾರೆ. ಕೆಲಸದ ಜೊತೆಗೆ ಆರೋಗ್ಯ ಕಾಳಜಿ ವಹಿಸಬೇಕು ಎಂದು ಮಣಿಪಾಲ್ ಆಸ್ಪತ್ರೆಯ ಸ್ತ್ರೀರೋಗ ತಜ್ಞೆ ಡಾ.ಸಸಿಕುಮಾರಿ ಎಂ. ತಿಳಿಸಿದರು.


ಡಾ. ಸಸಿಕುಮಾರಿ ಎಂ.

ಕೆಲಸ ಮಾಡುವ ಸ್ಥಳದ ವಾತಾವರಣ, ಸಂಚಾರ ಸಮಯದ ಮಾಲಿನ್ಯ, ವ್ಯಾಯಾಮ ಇಲ್ಲದೇ ಇರುವುದು, ಪೌಷ್ಟಿಕ ಆಹಾರ ಸೇವಿಸದಿರುವುದು, ಕೆಲಸದ ಒತ್ತಡ, ಅಧಿಕ ಕೆಲಸ, ತಂಬಾಕು ಪದಾರ್ಥ-ಮದ್ಯ ಸೇವನೆ ಇನ್ನಿತರ ಕಾರಣಗಳು ಸ್ತ್ರೀಯರಲ್ಲಿ ಅನಾರೋಗ್ಯ ಹೆಚ್ಚಳ ಕಾರಣ ಎಂದರು.

ಮುಟ್ಟಿನ ವೇಳೆ ವಹಿಸಬೇಕಾದ ಎಚ್ಚರಿಕೆ, ವಿವಿಧ ರೀತಿ ಕ್ಯಾನ್ಸರ್‌ಗಳು ಬಾರದಂತೆ ತಡೆಯುವುದು, ಆರಂಭಿಕ ಹಂತದಲ್ಲೇ ಪತ್ತೆ ಹಚ್ಚುವುದು, ಎಚ್‌ಪಿವಿ ಲಸಿಕೆ ಪಡೆಯುವುದು ಕುರಿತು ಮಾಹಿತಿ ನೀಡಿದರು.

ಇ-ಖಾತಾ: ಉದ್ಯಮಿಗಳಿಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಆಸ್ತಿ ಮಾಲೀಕರಿಗೆ ತ್ವರಿತಗತಿಯಲ್ಲಿ ಇ-ಖಾತಾ ತಲುಪಿಸಲು ಉದ್ಯಮಿಗಳಿಗೆ ಅವಕಾಶ ಮಾಡಿಕೊಡಲಾಗಿದೆ ಎಂದು ಬಿಬಿಎಂಪಿ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದರು.

ಪಾಲಿಕೆ ವ್ಯಾಪ್ತಿಯಲ್ಲಿ ಯುವ/ಸ್ಥಳೀಯ ಖಾಸಗಿ ಉದ್ಯಮಿಗಳು ಪಾಲಿಕೆಯ ವೆಬ್‌ಸೈಟ್ ಮೂಲಕ ನೋಂದಣಿ ಮಾಡಿಕೊಳ್ಳಬೇಕು. ಆ ನಂತರ ನಾಗರಿಕರಿಗೆ ಇ-ಖಾತಾ ಸೇವೆಗಳನ್ನು ನೀಡಿ ಆದಾಯ ಗಳಿಸಬಹುದು ಎಂದು ಹೇಳಿದರು.

ಇ-ಖಾತಾಗಾಗಿ ದತ್ತಾಂಶ ನಮೂದನೆ, ಸ್ವೀಕೃತಿ ಪ್ರತಿ (ಕಪ್ಪು-ಬಿಳುಪು) ಹಾಗೂ ಇ-ಆಸ್ತಿ ಸಲ್ಲಿಸಲು ಒಟ್ಟು ವಹಿವಾಟು ಶುಲ್ಕಕ್ಕಾಗಿ ಉದ್ಯಮಿಗೆ ಪ್ರತಿ ಇ-ಖಾತಾಗೆ ₹45 ಪಾವತಿಸಬೇಕು.

ಆಸ್ತಿ ದಾಖಲೆಗಳು/ಗುರುತಿನ ಚೀಟಿ ದಾಖಲೆಗಳನ್ನು ಸ್ಕ್ಯಾನಿಂಗ್ ಮಾಡಿ ಬಿಬಿಎಂಪಿ ತಂತ್ರಾಂಶದಲ್ಲಿ ಅಪ್ಲೋಡ್ ಮಾಡುವುದಕ್ಕೆ ಉದ್ಯಮಿಗೆ ಪ್ರತಿ ಪುಟಕ್ಕೆ ₹45 ಪಾವತಿಸಬೇಕು.

ಅಂತಿಮ ಇ-ಖಾತಾ ಮುದ್ರಣಕ್ಕಾಗಿ ಉದ್ಯಮಿಗೆ ಪ್ರತಿ ಇ-ಖಾತಾಗೆ ₹45 ಪಾವತಿಸಬೇಕು. ಪಾಲಿಕೆಗೆ ಪ್ರತಿ ಅಂತಿಮ ಇ-ಖಾತಾಗೆ ಆನ್‌ಲೈನ್ ಮೂಲಕ ₹125 ಪಾವತಿಸಬೇಕು.

ಇ-ಖಾತಾ ತಿದ್ದುಪಡಿ, ಮ್ಯುಟೇಷನ್ ಅಥವಾ ಯಾವುದೇ ಇತರೆ ಅರ್ಜಿ ಸಲ್ಲಿಸುವುದಕ್ಕಾಗಿ ಉದ್ಯಮಿಗೆ ಪ್ರತಿ ಇ-ಖಾತಾಗೆ ₹45 ಪಾವತಿಸಬೇಕು. ಪಾಲಿಕೆಗೆ ಮ್ಯುಟೇಷನ್ ಶುಲ್ಕವನ್ನು ಪಾವತಿಸಬೇಕು ಎಂದು ಮುನೀಶ್ ಮಾಹಿತಿ ನೀಡಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಅಕ್ಟೋಬರ್ 1ರಿಂದ 2.25 ಲಕ್ಷ ಅಂತಿಮ ಇ-ಖಾತಾಗಳನ್ನು ಪಡೆದು ಕೊಳ್ಳಲಾಗಿದೆ ಎಂದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಸಂಗ್ರಹಿಸುವ ಕುರಿತು ಹೆಚ್ಚು ಗಮನ ನೀಡಿ, 2024-25ನೇ ಆರ್ಥಿಕ ವರ್ಷದ ಅಂತ್ಯಕ್ಕೆ ಬಾಕಿ ಇರುವ ತೆರಿಗೆಯನ್ನು ಕೂಡಲೇ ಸಂಗ್ರಹಿಸಬೇಕು ಎಂದು ಅಧಿಕಾರಿಗಳಿಗೆ ವರ್ಚುವಲ್ ಸಭೆಯಲ್ಲಿ ಮುನೀಶ್ ಮೌದ್ಗಿಲ್ ಸೂಚಿಸಿದರು.

ಪಾಲಿಕೆ ವ್ಯಾಪ್ತಿಯಲ್ಲಿ 2024-25ನೇ ಸಾಲಿನಲ್ಲಿ ₹5,210 ಕೋಟಿ ಆಸ್ತಿ ತೆರಿಗೆ ಸಂಗ್ರಹಿಸುವ ಗುರಿ ಹೊಂದಲಾಗಿದ್ದು, ₹4,604 ಕೋಟಿ ಸಂಗ್ರಹಿಸಿ, ಶೇ 88.36ರಷ್ಟು ಸಾಧನೆ ಮಾಡಲಾಗಿದೆ ಎಂದರು.

ಯೋಜನಾ ಇಲಾಖೆ ವ್ಯಾಪ್ತಿಗೆ ಗಡಿ ಅಭಿವೃದ್ಧಿ ಪ್ರಾಧಿಕಾರ

ಬೆಂಗಳೂರು: ‘ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ’ವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಯಿಂದ ಹಿಂಪಡೆದು ಯೋಜನಾ ಇಲಾಖೆಗೆ ವರ್ಗಾಯಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ರಾಜ್ಯದ 19 ಗಡಿ ಜಿಲ್ಲೆಗಳು, 63 ಗಡಿ ತಾಲ್ಲೂಕುಗಳು ಹಾಗೂ 6 ಗಡಿ ಭಾಗದ ಹೊರರಾಜ್ಯಗಳು ಸೇರಿದಂತೆ ಗಡಿನಾಡ ಜೊತೆಗೆ ರಾಜ್ಯದಿಂದ ಹೊರಗಿರುವ ಎಲ್ಲ ಪ್ರದೇಶಗಳಲ್ಲಿ ನೆಲೆಸಿರುವ ಕನ್ನಡಿಗರಿಗೆ ಶೈಕ್ಷಣಿಕ, ಸಾಂಸ್ಕೃತಿಕ ಯೋಜನೆಗಳ ಜೊತೆಗೆ ಸಾಮಾಜಿಕ ಹಾಗೂ ಇತರ ಎಲ್ಲ ಅಭಿವೃದ್ಧಿ ಕಾರ್ಯಗಳನ್ನು ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಕೈಗೊಳ್ಳುತ್ತಿದೆ.

ಕೇವಲ ಭಾಷೆಗೆ ಸೀಮಿತವಾಗದೆ ರಾಜ್ಯದ ಹಾಗೂ ಹೊರನಾಡಿನ ಕನ್ನಡಿಗರು ವಾಸವಾಗಿರುವ ಗಡಿ ಭಾಗದ ಪ್ರದೇಶಗಳು ನಿರ್ಲಕ್ಷ್ಯಕ್ಕೆ ಒಳಗಾಗದಂತೆ ಸಮಗ್ರವಾಗಿ ಅಭಿವೃದ್ಧಿಪಡಿಸುವ ಕಾರ್ಯಗಳನ್ನು ಗಡಿ ಅಭಿವೃದ್ಧಿ ಪ್ರಾಧಿಕಾರ ಕೈಗೊಳ್ಳುತ್ತಿರುವುದರಿಂದ ಯೋಜನಾ ಇಲಾಖೆಗೆ ಸೇರಿಸಲಾಗುತ್ತಿದೆ ಎಂದು ಆದೇಶದಲ್ಲಿ ವಿವರಿಸಲಾಗಿದೆ.

₹59.63 ಕೋಟಿ ಮೌಲ್ಯದ ಜಮೀನು ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಒತ್ತುವರಿಯಾಗಿದ್ದ ₹59.63 ಕೋಟಿ ಮೌಲ್ಯದ ಒಟ್ಟು 19 ಎಕರೆ 7 ಗುಂಟೆ ಸರ್ಕಾರಿ ಜಮೀನನ್ನು ಜಿಲ್ಲಾಧಿಕಾರಿ ಜಿ.ಜಗದೀಶ ಅವರ ನೇತೃತ್ವದಲ್ಲಿ ತೆರವುಗೊಳಿಸಿ ವಶಕ್ಕೆ ಪಡೆಯಲಾಯಿತು.

ನಗರ ಜಿಲ್ಲೆಯ ವಿವಿಧ ತಾಲ್ಲೂಕುಗಳ ತಹಶೀಲ್ದಾರ್‌ಗಳು ತಮ್ಮ ವ್ಯಾಪ್ತಿಯಲ್ಲಿನ ಗೋಮಾಳ, ಗುಂಡುತೋಪು, ಸ್ಮಶಾನ ಮತ್ತು ಸರ್ಕಾರಿ ಖರಾಬ್ ಜಾಗಗಳಲ್ಲಿ ಒತ್ತುವರಿಯನ್ನು ತೆರವು ಮಾಡಿದರು ಎಂದು ಪ್ರಕಟಣೆ ತಿಳಿಸಿದೆ.

ದಕ್ಷಿಣ ತಾಲ್ಲೂಕಿನ ಉತ್ತರಹಳ್ಳಿ ಹೋಬಳಿಯ ಉತ್ತರಿ ಗ್ರಾಮದಲ್ಲಿ ಗೋಮಾಳದ ಒಂದು ಎಕರೆ, ಕೆಂಗೇರಿ ಹೋಬಳಿಯ ದೇವಗೆರೆ ಗ್ರಾಮದ ಗೋಮಾಳದ ಮೂರು ಎಕರೆ, ತಾವರೆಕೆರೆ ಹೋಬಳಿಯ ಗಂಗೇನಹಳ್ಳಿ ಗ್ರಾಮದ 'ಬ' ಖರಾಬ್‌ನ 0.14 ಗುಂಟೆ, ಬೇಗೂರು ಹೋಬಳಿಯ ಎಳೇನಹಳ್ಳಿ ಗ್ರಾಮದಲ್ಲಿನ ಸ್ಮಶಾನದ 0.01 ಗುಂಟೆಯನ್ನು ವಶಕ್ಕೆ ಪಡೆಯಲಾಗಿದೆ.

ಆನೇಕಲ್ ತಾಲ್ಲೂಕಿನ ಜಿಗಣಿ ಹೋಬಳಿಯ ದ್ಯಾವಸಂದ್ರ ಗ್ರಾಮದ ಸ್ಮಶಾನದಲ್ಲಿನ 0.03 ಗುಂಟೆ, ಕಸಬಾ ಹೋಬಳಿಯ ಮೆಣಸಿಗನಹಳ್ಳಿ ಗ್ರಾಮದ ಗುಂಡುತೋಪಿನ 0.25 ಗುಂಟೆ, ಅತ್ತಿಬೆಲೆ ಹೋಬಳಿಯ ಜಿಗಳ ಮತ್ತು ಗೊಲ್ಲಹಳ್ಳಿ ಗ್ರಾಮಗಳ ಗುಂಡುತೋಪು ಮತ್ತು ಖರಾಬಿನ 1 ಎಕರೆ 11 ಗುಂಟೆ, ಸರ್ಜಾಪುರ ಹೋಬಳಿಯ ಸರ್ಜಾಪುರ ಮತ್ತು ತಿಗಳಚೌಡೇನಹಳ್ಳಿ ಗ್ರಾಮಗಳ ಕುಂಟೆ, ಕಾಲುವೆಗಳ 0.30 ಗುಂಟೆ ಒತ್ತುವರಿಯನ್ನು ತೆರವುಗೊಳಿಸಲಾಗಿದೆ.

ಯಲಹಂಕ ತಾಲ್ಲೂಕಿನ ಯಲಹಂಕ ಹೋಬಳಿಯ ದೊಡ್ಡಬೆಟ್ಟಹಳ್ಳಿ ಗ್ರಾಮದ ಗೋಮಾಳದ 0.30 ಗುಂಟೆ, ಬೆಳ್ಳಹಳ್ಳಿ ಗ್ರಾಮದ ಗೋಮಾಳದಲ್ಲಿನ ಮೂರು ಎಕರೆ, ಹೆಸರುಘಟ್ಟ ಹೋಬಳಿಯ ವಿಶ್ವನಾಥಪುರ ಗ್ರಾಮದ ಗೋಮಾಳದಲ್ಲಿನ ಒಂದು ಎಕರೆ 30 ಗುಂಟೆ, ಹೆಸರುಘಟ್ಟ ಹೋಬಳಿಯ ಬ್ಯಾಲಕೆರೆ ಗ್ರಾಮದ ಸನ್ನಾನದಲ್ಲಿನ 0.07 ಗುಂಟೆ, ಜಾಲ-3 ಹೋಬಳಿಯ ಮಹದೇವಕೊಡಿಗೆಹಳ್ಳಿ ಗ್ರಾಮದ ಖರಾಬ್‌ನಲ್ಲಿನ 0.09 ಗುಂಟೆಯನ್ನು ವಶಕ್ಕೆ ಪಡೆಯಲಾಗಿದೆ.

ಉತ್ತರ ತಾಲ್ಲೂಕಿನ ದಾಸನಪುರ ಹೋಬಳಿಯ ಮಲ್ಲಸಂದ್ರ, ನಗರೂರು ಮತ್ತು ಕದಲೂರು ಗ್ರಾಮಗಳ ಸರ್ಕಾರಿ ಖರಾಬು ಕಟ್ಟೆ, ಸ್ಮಶಾನ ಮತ್ತು ಗೋಮಾಳದಲ್ಲಿನ 2 ಎಕರೆ 24 ಗುಂಟೆ, ಯಶವಂತಪುರ ಹೋಬಳಿಯ ಶೆಟ್ಟಹಳ್ಳಿ ಗ್ರಾಮದ ಸರ್ಕಾರಿ ಖರಾಬ್‌ನಲ್ಲಿನ 0.06 ಗುಂಟೆ ಒತ್ತುವರಿಯನ್ನು ತೆರವು ಗೊಳಿಸಲಾಗಿದೆ.

ಪೂರ್ವ ತಾಲ್ಲೂಕಿನ ಬಿದರಹಳ್ಳಿ ಹೋಬಳಿಯ ಕಟ್ಟುಗೊಲ್ಲಹಳ್ಳಿಯ ಗೋಮಾಳದಲ್ಲಿ ಎರಡು ಎಕರೆ 15 ಗುಂಟೆ, ಬಿದರಹಳ್ಳಿ ಹೋಬಳಿಯ ಕನ್ನಮಂಗಲ ಗ್ರಾಮದ ಖರಾಬ್‌ನ 0.03 ಗುಂಟೆ, ವರ್ತೂರು ಹೋಬಳಿಯ ಸಿದ್ಧಾಪುರ ಗ್ರಾಮದ ಮುಫತ್ ಕಾವಲ್‌ನಲ್ಲಿನ 0.27 ಗುಂಟೆ ಒತ್ತುವರಿಯನ್ನು ತೆರವುಗೊಳಿಸಿ ವಶಕ್ಕೆ ಪಡೆಯಲಾಗಿದೆ.

2014ರ ಚಿನ್ನ ನಾಪತ್ತೆ ಪ್ರಕರಣದ ತನಿಖೆಗೆ ಆಗ್ರಹ

ಮೈಸೂರು: ‘ಇಲ್ಲಿ 2014ರಲ್ಲಿ ನಡೆದಿದ್ದ ಚಿನ್ನ ಕಳ್ಳಸಾಗಣೆ ಪ್ರಕರಣದ ಸಂಬಂಧ ತನಿಖೆಗೆ ಒತ್ತಾಯಿಸಿ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಸಿಬಿಐ ಬೆಂಗಳೂರು ಎಸ್‌ಪಿ ಕಚೇರಿಗೆ ಅಂಚೆ ಮೂಲಕ ದೂರು ಸಲ್ಲಿಸಿದ್ದಾರೆ.

‘ನಟಿ ರನ್ಯಾ ರಾವ್ ಪ್ರಕರಣದ ಜೊತೆ ಈ ಪ್ರಕರಣದ ತನಿಖೆಯನ್ನೂ ನಡೆಸಬೇಕು. ಐಪಿಎಸ್ ಅಧಿಕಾರಿ, ರನ್ಯಾ ರಾವ್ ಮಲ ತಂದೆ ರಾಮಚಂದ್ರರಾವ್ ದಕ್ಷಿಣ ವಲಯದ ಐಜಿಪಿಯಾಗಿದ್ದಾಗ ಹಣ ಅಕ್ರಮವಾಗಿ ಸಾಗಿಸುತ್ತಿದ್ದ ಪ್ರಕರಣ ಪತ್ತೆ ಹಚ್ಚಿದ್ದರು. ಈಗಿನ ಪ್ರಕರಣ ದಲ್ಲೂ ಅದೇ ರೀತಿ ಅಂಶಗಳು ಗೋಚರಿಸುತ್ತಿದೆ‘ ಎಂದು ಅವರಹ ಅಭಿಪ್ರಾಯ ಪಟ್ಟಿದ್ದಾರೆ.

‘ನಗರದಲ್ಲಿ ನಡೆದ ಪ್ರಕರಣದ ದಾರಿ ತಪ್ಪಿಸಲು ಅನೇಕ ಅಧಿಕಾರಿಗಳು ಪ್ರಯತ್ನ ಮಾಡಿದ್ದರು. ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸದೆ ಕಾನೂನಿಗೆ ವಿರುದ್ಧವಾಗಿ ನಡೆದುಕೊಂಡರು’ ಎಂದು ದೂರಿದ್ದಾರೆ. ಮಾಧ್ಯಮ ಪ್ರತಿ ನಿಧಿಗಳೊಂದಿಗೆ ಮಾತನಾಡಿದ ಅವರು, ‘ಆಗ 9 ಕೆ.ಜಿ. ಚಿನ್ನ ಕಳ್ಳ ಸಾಗಣೆ ಮಾಡಲಾಗಿತ್ತು’ ಎಂದು ಆರೋಪಿಸಿದರು.

‘2014ರ ಮಾರ್ಚ್ 1ರಂದು ರಾಮಚಂದ್ರರಾವ್ ಅವರಿಗೆ ಬೆಂಗಳೂರಿನಿಂದ ಕೇರಳದ ಕ್ಯಾಲಿಕಟ್‌ಗೆ ತೆರಳುತ್ತಿದ್ದ ಖಾಸಗಿ ಬಸ್‌ನಲ್ಲಿ ಚಿನ್ನ ಕಳ್ಳ ಸಾಗಣೆ ಆಗುತ್ತಿರುವ ಮಾಹಿತಿ ಗೊತ್ತಾಗಿ, ಪರಿಶೀಲಿಸಿದಾಗ ವಾರಸುದಾರರಿಲ್ಲದ ₹20 ಲಕ್ಷ ದೊರೆತಿತ್ತು. ಇದರ ತನಿಖೆಗಾಗಿ ಅಂದಿನ ಎಸ್‌ಪಿಗೆ ಅಭಿನವ ಖರೆ ಅವರಿಗೆ ಐಜಿಪಿ ಸೂಚಿಸಿದ್ದರು. ಪೊಲೀಸರೆ ಹಣ ದೋಚಲು ಯತ್ನಿಸಿದ್ದಾರೆ ಎಂದು ಇಲವಾಲ ಠಾಣೆಯಲ್ಲಿ ದೂರು ದಾಖಲಾಗಿತ್ತು’ ಎಂದು ಅವರು ಹೇಳಿದರು.


ಪುಸ್ತಕ ಪ್ರಶಸ್ತಿ

ಕರ್ನಾಟಕ ನಾಟಕ ಅಕಾಡೆಮಿಯ ವಾರ್ಷಿಕ ಪುಸ್ತಕ ಪ್ರಶಸ್ತಿಗಳನ್ನು ಮೈಸೂರಿನಲ್ಲಿ ನಡೆದ ಸಮಾರಂಭದಲ್ಲಿ ಸಾಹಿತಿ ಬಸವರಾಜ ಸಬರದ, ರಾಮೇಶ್ವರಿ ವರ್ಮಾ, ಟಿ.ವಿ. ವೆಂಕಟೇಶಮೂರ್ತಿ ಅವರಿಗೆ ಸಾಹಿತಿ ಚ.ಸರ್ವಮಂಗಳಾ ಪ್ರದಾನ ಮಾಡಿದರು. ಸದಸ್ಯ ಸಂಚಾಲಕಿ ಎಂ.ಎ.ಜಾಹಿದಾ, ರಿಜಿಸ್ಟ್ರಾರ್ ನಿರ್ಮಲಾ ಮಠಪತಿ, ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಅಕಾಡೆಮಿ ಅಧ್ಯಕ್ಷ ಕೆ.ವಿ.ನಾಗರಾಜಮೂರ್ತಿ, ಸಂಗೀತ ವಿ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

CAMLIN HIGH SCHOOL State Board. Nursery to X, 6th 'C' Main, 4th Cross, Near 7th Main Bus Stop Hampinagar Bangalore-560104. Phone: 080-23301363 REQUIRED for TRAINED TEACHERS to Teach English, Kannada, Maths, Hindi, Science, Social Science, Drawing, Physical Education. Apply/ WALK-IN-INTERVIEW 10.a.m. to 2.p.m. with Resume and Latest Passport Size Photo OR send it to our e-mail: camlinschool84@gmail.com

HOLY Angel's High School, Hampinagar, Vijayanagar, Bengaluru-560104 Phone: 23404465/23202042 holyangels.highschoolrpclayout@gmail.com Requires Experienced Trained Teachers for the Academic year 2025-26 for Nursery, Primary, High-School, Music Teacher & P.E.Teacher. STATE & ICSE Qualification: B.A./B.Sc., B.Ed. M.A./M.Sc., M.Ed. N.T.T. CP.Ed. Only English Medium Candidates need to apply

GREEN COUNTRY PUBLIC SCHOOL (ICSE), requires TEACHERS for ENGLISH, HINDI, SOCIAL STUDIES & GEOGRAPHY. Walk in Interview 10.00am to 3.00pm / Apply thro. email : gcps2000@yahoo.co.in, Ph: 9535487053, 9482480397. Add.: KIA Road, Kodigehalli gate, Hebbal, Bangalore-560092.

ARVIND Residential School & PU College, Kunigal
Ph: 08132-210000/ 01. Mob: 9945210041/ 9483683002. Website: www.arvindinternationalschool.com, www.arvindpucollege.com
REQUIRES DEDICATED & PASSIONATE PROFESSIONALS WITH GOOD COMMUNICATION SKILLS
- PUC LECTURERS (Science & Commerce Stream) Well Experienced NEET & JEE faculties
- CO-ORDINATOR (ICSE/ CBSE)
- Nursery/ Primary/ Middle School/ High school Teachers (ICSE/ CBSE)
- Warden (M/F), Nurse (F), Cooks, PE Teachers

Experienced in all streams with desired qualification
Send your resume with recent passport size photo to airsjobs@gmail.com within 7 days

QUALIFIED, EXPERIENCED TEACHERS for Science, Maths, Social, Kannada English Hindi, PE for Primary, Secondary & High School(CBSE). For COLLEGE: Physics Chemistry Maths, Biology Computer Science. Good Salary offered. NEED PRINCIPAL. For Walk-in Interview: 9449835744, 9535601743.

ANGELS HIGH School M.C Layout, Vijayanagar, B'lore. Required Experienced Primary Teachers for all Subjects, PE and Science for High`School. 8431812577, 7204225487.

NIRMAN INTERNATIONAL PUBLIC SCHOOL (CBSE),Near AutomatedRTO,7th Block, Vishweshwaraiah Layout, Bangalore-91 Requires Qualified,Experienced TEACHERS for All Subjects,from Nursery to X. Contact: 8123030731/ 9986055970. Email: nirmaninfo24@gmail.com Walk-in Interview on all working days between 9:30am to 2:00pm

VISHWA CHETHANA school Muthagatti road Anekal Pin: 562106 Wanted CBSE Experienced & trained Academic Co-ordinator TGT in English Kannada Soc- sci Comp- sci Lady PET and Art & craft Teacher for the Academic year 2025-26. Apply immediately. Email: vcschool23@gmail.com.

REQUIRED FEMALE Nursery/Primary Co-ordinator with 5 years Experience and also N.T.T./B.A., M.A./B.Ed/B.Sc., M.Sc./B.Ed. for English, Maths, Science, Hindi & Social Science. Contact Max Muller Public School, Mahalakshmi Layout, B'lore-96. Ph:23376049/50. E.mail-maxmullerpublicschool.mlayout@gmail.com

ST.PHILOMENA PUBLIC SCHOOL, Byalakere, Yelahanka, Bangalore required Trained & Experienced TEACHERS all subjects (Primary & High School) 9480091189/ 9845036582/ stphilomenas118@gmail.com

WANTED TEACHERS ICSE CURRICULUM BA MA ENGLISH HINDI, CHEMISTRY BIOLOGY MSc BEd, BCA MCA COMPUTER DATA ASSISTANT. Salary 15,000 to 30,000 Contact- OXFORD PUBLIC SCHOOL Srikantapura, Anchepalya Near Jindal Public School Tumakur Road, Bangalore Mobile: 9620075574, 9945622240

WANTED M.SC Nursing, B.Sc`Nursing Teaching Faculties. Contact:`MGP Institutions, Bangalore. Phone: 9886236341, mgp_nc2001@yahoo.com

WANTED
St. LAWRENCE HIGH SCHOOL / COLLEGE
Kamakshipalya Main Road, Bangalore - 560 079.
Requires Experienced
TRAINED TEACHERS
for Nursery / Primary/ High School.
Include Computer and PE Teacher.
WALK-IN-INTERVIEW
OR drop your resume through Email
st.lawrence.s.kpalya@gmail.com
Contact: 8951429321, 9448381257

Accounts & Finance

WANTED DIRECT APPOINTMENT LADIES For Accounts (Married), B.com with Tally Knowledge& Around Harohalli: 9980921763/ 9632201671

Engg/ Production Technical

WE REQUIRE below candidates For our special pumps & Motor Manufacturing Unit at Devarachikkanahalli, Bannergatta Road, Bangalore. Email: flowoilpumps@hotmail.com
1.Purchase Executive with experience.
2.Marketing Executive.
3.ITI/Diploma Engineers.

General

PRAKASH POWER PLANNING Pvt Ltd.
SUPERGRADE ELECTRICAL CONTRACTORS
BANGALORE-560 076
www.prakashpower.net
WANTED
HARDWORKING, ENTHUSIASTIC ENGINEERS, TECHNICIANS, SAFETY OFFICERS, HELPERS
QUALIFICATION
Diploma/degree In Electrical Engineering, ITI Qualified Electricians, Welders, Nebosh Certified Safety Officers, SSSLC Pass/Fail Helpers, Experience Minimum 2 years
SALARY
negotiable comparable with peers
SEND YOUR CV TO:
satya.m@prakashpower.net
balaji.m@prakashpower.net
on whatsapp number
63638 87845

FARMERS ASSOCIATION Requires Retired Officers, Experienced in (BBMP/ Govt. Matters). Whatsapp: 8971728777. msrajendra1960@gmail.com

Marketing & Sales

LOOKING FOR experienced ASm/SO/SR in OTC & Cosmetic products to all districts of Karnataka contact -9353420785

Wanted

WANTED A_FEMALE COUNSELOR a MSW-Psychology/ Sociology with`minimum experience of 3`to 5 years for Family Counseling Centre at an NGO in Bangalore. Apply within 15`days. Email: mahiladakshatasamiti@yahoo.co.in Contact-: 080-23641814/ 6366198585.

WANTED SALES Girls For Opticals Showroom in Around Rajajinagar and Srirampura, Contact: 9845359345/ 9880778440

REAL ESTATE SELLING

Sites

Anjanapura

WANTED ANJANAPURA Banashankari 6th Stage JPNagar Near Kanakapura Road Any Measurement Immediate Settlement Call: 9964627255

Banashankari

BANASHANKARI 6TH STAGE- BDA-AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

MANTRALAYA ENTERPRISES: BUYING And SELLING BDA/A Khatha SITES/ BANASHANKARI 6th Stage, Anjanapura, Vishweswaraiah Layout. 9945724472.

BDA SITE for Sale, Residential and Prime Commercial, Banashankari 6th Stage, Banashankari 5th Stage, Uttarahalli, Rajarajeshwarinagara, 30x40, 40x60, 50x80. 9916592400

BANASHANKARI 6TH Stage, 9th Block, BDA, 30x40sft, West Facing, Park attached, Rs.1.08Crore. Owner 9845259332

Bannerghatta Road

BANNERUGHATTA Road Akshaya nagar 2406 sft East Facing A Khata Prime Property For Sale 9845069739 7019619289 9886370968 9380613718

Basaweshwaranagar

SITE FOR sale 40*60 EF BDA with 40 ft road Rs 24000/- per sq/ft slightly negotiable Basaveshwaranagar. Contact: 9916826976.

Hebbal

MANYATA RESIDENCY (Manyata Tech Park) BDA 45x60 South Facing site sale Rs. 17500/- psqft. 9066055999

HEBBAL 30X35 House Sale Ground 1 BHK Two Carparking 1st 2 BHK 2nd 2 BHK 9845623970/ 9739400838

Jayanagar

JAYANAGAR 4TH Block Prime Property 40x52 North Facing Beautiful Location Call:- 7022870168 Brokers Excuse

BDA SITE for Sale, Residential and Prime Commercial, Jayanagara, JP Nagara, BMT Layout, HSR Layout, Koramangala 30x40, 40x60, 50x80. 9916592400

Kumaraswamy Layout

40X60 BDA SITE SALE. Kumaraswamy Layout, South Face, Extra Margin Land, Near 108 Ganesha Temple. Call: 9886913658.

Kanakapura Road

BDA SITE for Sale, Residential and Commercial, Anjanapura, BDA Layout, Narayananagara, BCMC Layout, Judicial Layout, Vakil Garden, Kanakapura Road, 30x40, 40x60, 50x80. 9916592400

BANASHANKARI ANJANAPURA BDA Sites Sale. 3,900 Sqft Site Sale Jayanagar Housing Layout 7,000/- Call-9740150364 /8884707773

Kempegowda Layout

KEMPEGOWDA LAYOUT, COMMERCIAL BDA SITE FOR SALE 20x30, 30x40, 40x60, 50x80, Contact: Kumar 9945119449

BDA-SITE FOR-SALE 20x30 and 40x60 at Good Location In Nadaprabhu Kempegowda Layout Call:7676900174 6363496142

***SITE FOR** SALE* KEMPEGOWDA LAYOUT 7th Block'L' Sector attached(BDA NOC) 30x40,6000/- slightly negotiable. Contact:9008800029

FOR SALE BDA allotted and BDA auction @ KEMPEGOWDA LAYOUT Near to Chalagatta metro station Mysore road. 30x40, 40x60, 50x80 and 15000sqft Corner plot available. 9916592400

SITE FOR-SALE Kempegowda Layout 7th Block'B'Sector 30x40 W/F #1976, 1crore not negotiable.Contact: 9341231231/9980939453

KEMPEGOWDA LAYOUT Site For Sale. 1.4th Block 4160 40X60.2.7th Block 2792 30X40 Call: 9900444944 /9844262220

Magadi Road

30X45 BMRD WEST SITE SALE Raghavendra Layout, Kadabagere, Magadi Road, 5500/-. Sft. Brokers Excuse. Call: 8105688602.

RENT/SALE
PRIME PROPERTY
200 Meters FROM GLOBAL TECH PARK, RR NAGAR
COMMERCIAL BUILDING 13000+ Sq.ft
RENTAL: 4.8 LAKHS / Per Month
SALE PRICE: 7.8 Crores
Call: 7760038250 I 9900596322

ದುರ್ಗಶ್ರೀ ವೆಂಚರ್ಸ್ ಮಧುರ ಫಾರ್ಮ್ಸ್
ನೆಲಮಂಗಲದ ಹತ್ತಿರ
ಫಾರ್ಮ್ ಲ್ಯಾಂಡ್ ಮಾರಾಟಕ್ಕಿದೆ
ಕೇವಲ ರೂ.899/- ಪ್ರತಿ ಅಡಿಗೆ.
ಪ್ರಿ ಲಾಂಚಿಂಗ್ ಆಫರ್
10 ಎಕರೆ ಪ್ರಾಜೆಕ್ಟ್.
ಸಂಪರ್ಕಿಸಿ: 8880660099

FOR SALE
Commercial land in Gouribidanur City for Sale Right Next to State Highway 9 Gouribidanur Hindupur Highway Bypass Consisting 1 Acre 2.5 Gunta, 1.4 km from RMC Market Gauribidanur. Expected Price Rs. 14.75 Lakh per Gunta.
Only genuine buyers need Contact
9902948217 / 8453440291

Dollars Colony

4000 SQFT BDA ALLOTTED VACANT SITE 80 FEET ROAD 12-CRORE 50 LAKHS ONLY: 9035883017

Nagarabhavi

SALE: SITE 30x60 Nagarabhavi 2nd Stage, 'A' Khata. Immediate Registration. Genuine Buyers. Contact: 6361819741.

"SALE 40X60 Commercial Site @ Mallathahalli Layout, Good location Genuine Buyers only Call: 7760388034"

"NAGARABHAVI BDA Complex 30x40 West old House 40`ft Road, 100%`Vasthu BDA Site. 9448432633/ 7022318837"

R T Nagar

R.T.NAGAR HMT LAYOUT 40X60 Site For-Sale with 2 carparking, Excellent Location With old House. 9341260828

Mysore Road

"BMRDA APPROVED 30x40 East Face Near BigBanyan Tree ₹1500/- P.Sft Direct Owner Sitting. Call: 9845178335"

Rajajinagar

SALE 35X45, BDA, Single Owner, West Facing, 17th G main, Rajajinagar, Opp Karur Bank, 28000/sqft, PH 9916800300

EAST WEST INSTITUTIONS

A school that goes
Beyond Academics

Give your child the best start to their future.

Admissions Open For
2025-26

Experienced Faculty | Holistic Learning Approach | Sports & Extracurriculars | Global Curriculum & Values | Safe & Secure Campus.

Scan the QR Code

Our Schools Located at

5th Block Rajajinagar - Bengaluru | 7349577565

Magadi Road - Bengaluru | 7338648664

Hootagalli - Mysuru | 9342752525

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Multiple Locations

Anything and Everything in Real Estate.

FOR SALE

✧ **Plot For Sale** in BTM 2nd Stage, 50,000 Sqft , Rs 16000/ Sqft

✧ **House For Sale** 1350 Sqft, Corner Property with East End Main Road, Jayanagar 4th 'T' Block with Ground +2 Floors, Commercial Property.

✧ **12 Guntas for Sale** , (13000 Sqft) in Nellguli Village, 1.5kms From Kanakpura Main Road, 25 Kms From Bangalore, Bangalore Urban, South.

✧ **10 Guntas for Sale** in Chickandodi, 5kms from Harohalli, off Harohalli-Anekal Road, Near Devasandra.

CONTACT
VICTORY PROPERTIES
(A legend in real estate with 35 years of experience in the industry.)
7411692219
8618576685
info@victoryproperties.in
www.victoryproperties.in

Bangalore South

RESIDENTIAL, COMMERCIAL Properties, K.R.Road, Basavanagudi, Jayanagar, Banasankari`6th stage, Girinagar`30x50, 40x60, 60x80. 9243132082/ 9036756718/ 9019978780.

Vishweshwariah Layout

40X60 NORTH_FACE HIG,KHB LAYOUT Satellite Club Circle Vishweshwaraiah Layout 1st`Block 100`Feet Kengeri Main`Road, Behind Semi`Commercial Site_Sale Reasonable_Price Call:9945191143 9945694783.

"VISHVESWARAIAH 1ST-BLOCK 30x40_South/ West facing Site Sale Near_100`ft_Road Genuine Buyers only: 9845268611"

VISHVESHWARAIAH LAYOUT 3rd Block 40x60 South Facing 10,500/- and East Facing 13,500/-. Contact: 9686469799

VISHWESHWARAIAH LAYOUT 7th Block 20x30 West Facing Sites Available Near Ullal RTO Good Location: 9980433004

"30X40 RESIDENTIAL BDA SITE SALE PARALLEL 100 FEET RING ROAD 1ST BLOCK VISHWESHWARAIAH LAYOUT- 9845143579"

VISHWESHWARAIA LAYOUT 40x60 BDA SITE Sale 3rd Block East Facing 40 Feet Road. Excellent Location. Contact: 9035470616

BDA VISHWESHWARAIAH LAYOUT 4TH BLOCK 50X80 EAST FACE 80FT ROAD PARALLEL 7750 NEGOTIABLE CONTACT: 8892901567

"VISHVESHWARAIAH LAYOUT 1st-Block 30x40 on 40`feet Road 1BHK House`for sale. Owner- 9886294610 (Brokers`Excuse)"

DIRECT OWNER 30x40 BDA Site Sale 'VISHVESWARAIAH LAYOUT' Ready to Construction, Near 100ft Road. 9742681666

Bidadi

EAGLETON GOLF GATED COMMUNITY (BIDADI) NORTH FACING, 5400SFT, FOR SALE FANTASTIC VIEW, BUYERS CONTACT 9845077219

Srirampura

SRIRAMPURAM FOR_SALE SITE_30x100 (3000.Sqft) Single`Owner Walkable`to SRIRAMPURAM Metro Attached`to Malleshwaram, Rajajinagar Nearest to Mantri, Orion, Lulu`Mall. Best_Location for P.G.,Apartment Godown, Especially for Malleshwaram Business,Houses. Brokers`Excuse. Genuine_Buyers Contact: 9916800300.

Ramanagar

RESIDENTIAL CONVERTED RCUDA Approved Site @ Ramanagar 10000Sqft Attached Rajiv Gandhi Health University 1500/- P.Sft Owner - 9900115519

House

Banashankari

HOUSE SALE (G+3) 2BHK Each Floor @ Banashankari 5th Stage BDA 30x40 South Plot Beside POORNAPRAGNA LAYOUT, Near PATALAMMA TEMPLE BUS STOP Rs. 3 Crore Negotiable. Deviprasad 7022063532/ Shivakumar 9845875555

Basavanagudi

SALE 20X40, BDA Site with 3000sft Building, E Katha, Rental income, 2.40Cr. Nego. Owner: 9845743555

Kavalbyrasandra

WELL MAINTAINED 3 BHK GF 700 FF 650 WITH CAR PORCH PLOT SIZE 1500 SFT GENUINE BUYERS CONTACT OWNER 97400 69810

J P Nagar

SALE JPNAGAR 2nd Phase Corner Property 30x40 Duplex-House 3BHK_1700sqft Granite-flooring Price 4cr_Classic Estates 9845302589

Kammanahalli

INDEPENDENT HOUSE Sale 37x25 East Facing 900 Sqft RS Palya Near Kammanahalli Rs. 1.15Cr Slty Negotiable 8989030325

Mallathalli

ITI LAYOUT MALLATHAHALLI 30X50 SOUTH FACINGDUPLEX 3 BEDROOM HOUSE 2,50,00,000/-NEGOTIABLE ABHILASHA CONSULTANT. 9480565758

DUPLEX HOUSE 900 sqft (9 years Building) Available Behind DEEPA COMPLEX ITI layout Mallatahalli. 9353199141

Padmanabha Nagar

PADMANABHA NAGAR, Kidney Foundation 1350sft. (220sft. Extra_land) West, 2 unit House 3,35,00,000/-, excellent location- 9845144365.

R T Nagar

ONE BEDROOM DUPLEX HOUSE A KHATHA GROUND AND 1ST FLOOR OPPOSITE RT-NAGAR POLICE STATION: 9035883017

Whitefield

RENTAL GETTING PG, Building Sale @ Whitefield, 30x60 East Facing, Getting 6L, Price 6.99 Cr A Katha: 9980577227

Andrahalli

FOR SALE 25x33 feet 3000 sqt 2 & 1 BHK 5 house building. good rent income. E Katha. Andrahalli Bangalore. Price 99 laks. Call : 9901889675

Srirampura

HOUSE FOR SALE in Sriramapuram, Land measuring 1500 sqft. Building 4000+. Ground+2. Covered Parking for 2 Cars. Contact: 9500995889, 9171918285.

Flat

Jayanagar

JAYANAGAR 8TH Block, ADARSHA RESIDENTIAL APARTMENT for SALE 3 BHK 2200 sft. All Amenities. 2 Carpark. 9880629468.

Kanakapura Road

SALE- 1 BHK Flat at Provident Parksquare Northface with Car parking, Kanakapura Road, Bengaluru-62. 7892132442

NO BARGAIN Fixed Price Sale of Flats in South Bengaluru. Sarakki Homes 9663676464

Mysore Road

GREATER BANGALORE Beside Eagleton Golf Resort. 15000 Sqft Converted Approved Land 3BHK House. 2300/ Sqft. 9036207777/ 9611146463

Wilson Garden

SALE 2 Contiguous Flats 3BHK 1850Sqft each. Total 3700Sqft. 3rd Floor, Price 3.42Cr. 11th Cross. Owner: 9844005129

Nagarabhavi

PLATS FOR-SALE Near Nagharbhavi Circle 2 & 3 BHK @ Prime-Location Ready to`Move in`Just`1.km from Metro-Station 9538828808 9845066608

Kodigehalli

1475sft, 3BHK flats As Good as **Independent house** KODIGEHALLI, **NORTH BENGALURU** Contact- **88920 04466**

Agricultural Land

Nelamangala

PRIME LOCATION PROPERTY FOR SALE NELMANGLA-KUNIGAL HIGH WAY ATTACHED RASTHE PALYA THIPSANDRA HAND POST 70-GUNTAS 9845007801

2 ACRES Land for Sale near Nelamangala. T.Begur to Thamangondalu Road. Contact owner: 9844296085.

Mysore

100 ACRES AGRICULTURE LAND For SAL Nanjangud Taluk 35 Lakhs /acre Genuine Buyers Contact: 9739627282

Commerical

Basavanagudi

SALE 30X48 NR Colony Semi Commercial South East Corner With Old House Excellent Location ct: 9844134068 8073859758

Jayanagar

SALE SEMI Commercial 36x40 Jayanagar 9th Block With old House Excellent Location Contact: 9844134068 8073859758

Industrial & Factory

Out-Station

IMMEDIATE SALE: INDUSTRIAL LAND-5.71 Acres with 145000 sqft high roof sheds/buildings on Thally road, HOSUR. Call: 9059026979 (Genuine buyers only).

REAL ESTATE BUYING

Sites

Banashankari

BDA-SITE WANTED @ Banashankari 6th Stage any Block 30x40, 40x60, 50x80 Immediate Settlement Contact: 98455-55666

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIA KEMPEGOWDA ANY BDA LAYOUT: 9845062822/ 8660751654

BANASHANKARI 6TH Stage BDA Site's Wanted 50x80 40x60 30x40 20x30 Contact Shivaraju 9741466369 9845146725

Hosur Road

WANTED KARNATAKA Housing Board KHB Sites in Suriyacity Attibele and Chandapura Hosur Road 20x30, 30x40, 30x50. Call: 9900640887

Multiple Locations

REQUIREMENT 30x40, 40x60,`50x80 BDA Commercial &.Residential for`genuine buyers`in Jayanagar, J.P.Nagar, BSK 6th`Stage, Narayan`Nagar, Judicial Layout (Brokers excuse) Suraj Realtors- 9845232711

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

GUARANTEED BUYERS for anykhata sites with construction from Buyers Advance Payments anywhere in Bangalore(T&Capply)PV Infra 9632656944

Nagarabhavi

WANTED BDA_SITE 30x40, 40x60, 50x80 Visweshwarayya Layout, Nagarabhavi RHCS Layout, NGF, Banashankari 6th Stage. 8105688602.

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

16000SQFT_G+3 floors commercial space_for`rent suitable_for Hospital, Diagnostics, Software, e-commerce, Hotels 4th`Block HBR`Layout facing Ring`Road. call- Dr.Syed Inayathulla 8861817913.

BUILDING AVAILABLE for Lease/ Rent suitable to run school with a built up area of 30000sqft approximately with vacant land at Thimmasandra Grama, Doddaballapura (Doddaballapura-Chickallapura Road). 2.5Km from Travellers Bungalow Circle) Bangalore Rural. For details Contact Mob- 9845033041/ 9980620978

TO LET Restaurant space 4450 sqft. available for rent in 80 Ft. road Koramangala 7th block, Next to Van Heusen, 1.5KM from Forum Mall, For Inquiry contact: 9964485388, 6364431666, 9742003920

Flats

3_BHK SEMI Furnished Flat for Rent_in Byrappa Layout, Whitefield. Call:-8861817913

Industrial And Factory

MALUR KIADB Industrial Area- Industrial shed of 14000 sft floor area, 5000 sft mezzanine floor with 220 KVA power with all amenities, Fully Furnished office with epoxy flooring, toilets suitable for industries or ware house available for long term lease call 9880660308

RENT VACANT Industrial. Converted land 4 Acres Near Nelamangala. 1 km from the state highway 74, 40ft Wide Road with acompound wall North Facing Property as per Vastu 9845038343 reddymrr@gmail.com

Godown

HOSKOTE- MALUR Main Road- Ware house 2500 sq feet newly constructed for lease call 9880660308

Accommodation Wanted

House

WANTED FOR RENT BTM 2ND STAGE, JAYANAGAR ALL BLOCKS, INDEPENDENT 4 BHK HOUSE AS PER VAASTU CONTACT 9686894972

MATRIMONIAL

Brides Wanted

Brahmin

WANTED BRIDE
BRAHMIN WIDOWER 70, from Bangalore seeks life partner from widows or spinsters.
Whatsappa 7022307718
kchandra03@gmail.com

Tamil

BUSINESS CLASS Tamil family (700cr+) seeks a match for their 2000 born son (MTech, UK) involved in the family business. Parents are doctors owning hospitals in BLR. Caste is no bar. Contact: (080 69129253)

Telugu

TELUGU BOY 1993 Born/ 5'10 / Networth 200 Cr and above is looking for a suitable match (080-69072049)

Grooms Wanted

Telugu

TELUGU BEAUTIFUL girl 2002 Born/ affluent Family is looking for a Match. Only Serious Marriage seekers are Welcome (080-69072093)

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

EDUCATIONAL

Private Tuitions

10ICSE LIVE ONLINE course --Starts 24th March.Small batch(12) for focussed learning. Test based scholarships.Also for JEE/KCET/NEET/CBSE call 9620000535 or visit www.jaagrut.com

AUTOMOTIVE

Four Wheelers Selling

Toyota

FOR SALE :- Toyota Innova Crysta, Good Condition, Petrol , Model - 2019 , Vehicle in Bangalore, Contact : +91 9036093667

Hyundai

SALE I10 2011, THIRD OWNER, AUTOMATIC, SILVER, 71000 KMS DONE, EXCELLENT CONDITION 7411692219 / 8618576685

TOURS & TRAVEL

Travel

VISIT BHUTAN, the most Wonderful Country with Expert Guide and Best Arrangements. GANESH SHENOY 8310028157

BUSINESS

Business to Business

Consultants

WE NEED Retired_Bank Officials with Experience in NPA Loanclosures, Resolution and Recovery Agents, DSA's for Bank loans, DRT_advocateswith experience in NPA_cases. Arun 9945699789.

Business Offers

Machinery & Tools

PLANT FOR Sale. Packaged Drinking water I.S.I company with vehicle and 800 cans currently selling. 7619405978, 9535088153, 8310818050.

PUBLIC NOTICE

RAJYA VOKKALIGARA SANGHA ®
BANGALORE INSTITUTE OF TECHNOLOGY
(An Autonomous Institution under VTU Belagavi, Approved by AICTE, New-Delhi)
K.R.ROAD, V.V. PURA, BANGALORE – 560 004 Phone: 080-26613237, 26615865
Ref: BIT/EXAM/ 1743/2024-2025 Website: bit-bangalore.edu.in Date: 13/03/2025

SHORT TERM TENDER NOTICE

The short term Tenders are invited from eligible tenderers, registered contractors/Companies/agencies/ suppliers by the Principal, BIT Bangalore for the works detailed in the table below under standard tender document procedure formats (The tenderers who have executed similar nature of single work costing not less than 50% of this tender amount during 2021-24).

Sl. No	Name of work	Approx. Value of the works (in Lakhs)	EMD (Rs)	Cost of tender form (GST Included)	Period of completion
01	Paper Cutter 19 EP(Hi-Tech Systems PFE PLTD)	2.25	5,625	590.00	30 days
02	Kodak Alaris S3120 Document Scanner	10.00	25,000	1,180.00	30 days
03	Multifuncional Printer Model No.Canon iR Adv 6455	14.56	36,400	1,180.00	30 days
04	Server with support for Linux distributedsystem	11.00	27,500	1,180.00	30 days
05	Computer Desktops	40.00	1,00,000	5,900.00	30 days
06	*HRMS, ERP & Examination Complete End to end digitalization Software (E2E), Grade Card and Grade Card Software, Theory Answer Booklets.	25.27	63,175	2,950.00	30 days

Calendar of events:

Tender Documents available at BIT office	18 03 2025 up to 26 03 2025 up to 16.00 hrs
Last date of receipt of tenders	29-03-2025 up to 16.00 hrs
Opening of Tenders	01-04-2025 to 14.00 hrs (If Possible)

01. Tender documents (Specifications, Term & Conditions) may be obtained in the principal office during office hours in all working day.
02. E.M.D in the form of D.D drawn in the name of the Principal, BIT Bengaluru 560004 from any Nationalized bank only, shall accompany the completed tender form, in default of which the tender is liable to be rejected.
03. The Contractors / Agencies / Suppliers shall bear the GST on works contract and any corporation and any other Local Authority & royalty due to the Government of Karnataka at the prevailing rates. Sangha / BIT is not responsible for all taxes with respect to the work.
04. Tenders may be applied to all items or tenders for individual items also accepted
05. Right to reject any or all the tenders without assigning any reason is reserved with the Sangha /BIT authority
06. In the event of any holiday on the notified dates, the next working day will hold good.
07. For any enquiries contact Principal Office at V V Pura, K R Road Bengaluru-04 during office hours.
08. Pre-bid meeting for Sl. 01 to 05 on 27-03-2025 at 11:00am onwards at BIT principal office.
09. Pre-bid meeting and Demo for Sl. 06 on 27-03-2025 at 11:30am onwards at BIT principal office

***Company/Authorized Dealers can only apply.**

-Sd- Principal BIT | -Sd- Chairman BIT | -Sd- Chairman Purchase Committee,RVS | -Sd- Treasurer RVS | -Sd- Joint Secretary RVS
-Sd- General Secretary RVS | -Sd- Vice President RVS | -Sd- President RVS

ಪ್ರಜಾವಾಣಿ

ಭಾನುವಾರದ ಪುರವಣಿ

ಭಾನುವಾರ, 16 ಮಾರ್ಚ್ 2025

ಪುಟ್ಟ ಊರಲ್ಲಿ ನಾಟ್ಯೋತ್ಸವ ಸೊಬಗು
9

ಹುಲಿ ಪಥ ನಾಶವೂ ದುರಂತ ಕಥನವೂ...

ಸಾಗರ-ಶಿಕಾರಿಪುರ ಗಡಿಯಂಚಿನ ಅಂಬ್ಲಿಗೊಳ ಜಲಾಶಯದಲ್ಲಿ ಸಿಕ್ಕ ಹುಲಿಯ ಕಳೇಬರ

ಅಖಿಲೇಶ್ ಚಿಪ್ಪಳಿ

ಈಗೊಂದು 75-80 ವರ್ಷಗಳ ಹಿಂದೆ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ತ್ಯಾಗರ್ತಿ ಭಾಗದಲ್ಲಿ ಹುಲಿಗಳು ಹೇರಳವಾಗಿ ಇದ್ದವು. ಅಲ್ಲಿನ ಕಾಡುಗಳಲ್ಲಿ ಒಂದು ಜಾತಿಯ ಹುಲ್ಲು ಹೆಚ್ಚಾಗಿ ಬೆಳೆಯುತ್ತಿತ್ತು. ಇದನ್ನು ಗಮನಿಸಿದ ಆಗಿನ ಸರ್ಕಾರ ಹಳ್ಳಿಗರಿಗೆ ಜಾನುವಾರು ಸಾಕಲು ಪ್ರೋತ್ಸಾಹ ನೀಡಿದ್ದರಿಂದ, ಹುಲ್ಲು ಮೇಯಲು ಕಾಡಿಗೆ ಜಾನುವಾರುಗಳನ್ನು ಬಿಡುವ ಪರಿಪಾಟ ಪ್ರಾರಂಭವಾಯಿತು. ಆ ಕಾಡಿನ ಹುಲಿಯೊಂದಕ್ಕೆ ಕಾಡುಪ್ರಾಣಿಗಳನ್ನು ಬೇಟೆಯಾಡುವುದಕ್ಕಿಂತ ಸಾಕಿದ ಜಾನುವಾರುಗಳನ್ನು ಬೇಟೆಯಾಡುವುದೇ ಸುಲಭ ಮತ್ತು ಸುರಕ್ಷಿತವೆಂದು ತೋರಿತೆಂದು ಕಾಣುತ್ತದೆ. ಹಳ್ಳಿಗರ ಜಾನುವಾರುಗಳನ್ನು ಹಿಡಿಯಲು ಪ್ರಾರಂಭಿಸಿತು. ಬಲುಬೇಗನೆ ಅದು ವನ್ಯಪ್ರಾಣಿಗಳ ಬೇಟೆ ನಿಲ್ಲಿಸಿತು. ಸಾಕಿದ ದನಗಳನ್ನು ರಾಜಾರೋಷವಾಗಿ ಹಿಡಿದು ತಿನ್ನುವ ಹುಲಿಯನ್ನು ಹೇಗಾದರೂ ಮಾಡಿ ಕೊಲ್ಲಬೇಕೆಂಬ ಹಳ್ಳಿಗರ ಪ್ರಯತ್ನ ವಿಫಲವಾದ ಕಾರಣಕ್ಕೆ ಆ ಹುಲಿ ನರಭಕ್ಷಕವಾಗಿ ಪರಿವರ್ತಿತವಾಯಿತು. ನರಭಕ್ಷಕ ಹುಲಿಗಳನ್ನು ಕೊಲ್ಲುವ ಕೆನೆತ್ ಆಂಡರ್ಸನ್ ಬಂದು ಆ ಹುಲಿಯನ್ನು ಕೊಲ್ಲುತ್ತಾನೆ. ಈ ಘಟನೆಯನ್ನು ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರ 'ಬೆಳ್ಳಂದೂರಿನ ನರಭಕ್ಷಕ' ಎಂಬ ಕಾಡಿನಕಥೆಯಲ್ಲಿ ವಿವರಿಸಲಾಗಿದೆ.

ನಿರಂತರ ಬೇಟೆ ಕಾರಣಕ್ಕೆ ಈಗ್ಗೆ ನೂರು ವರ್ಷಗಳ ಹಿಂದೆ ಭಾರತದ ಕಾಡುಗಳಲ್ಲಿದ್ದ ಹುಲಿಗಳ ಸಂಖ್ಯೆ ಲಕ್ಷದಿಂದ ಸಾವಿರಕ್ಕಿಳಿಯಿತು. ಸ್ವಾತಂತ್ರ್ಯ ಪೂರ್ವದ ಬ್ರಿಟಿಷ್ ಆಡಳಿತ ಮತ್ತು ಸ್ವಾತಂತ್ರ್ಯೋತ್ತರ ಭಾರತ ಸರ್ಕಾರ ಹುಲಿ ಬೇಟೆಗೆ ಪ್ರೋತ್ಸಾಹ ನೀಡುತ್ತಿದ್ದವು. 1965ರವರೆಗೂ ಹುಲಿಯನ್ನು ಕೊಂದು ಅದರ ಬಾಲವನ್ನು ಜಿಲ್ಲಾಧಿಕಾರಿಗೆ ನೀಡಿ, ಒಂದು ನೂರು ರೂಪಾಯಿ ಇನಾಮು ಪಡೆಯಬಹುದಿತ್ತು. ಹುಲಿಯನ್ನು ಬೇಟೆಯಾಡುವುದು ಸಮಾಜದಲ್ಲಿ ಪ್ರತಿಷ್ಠೆಯ ಸಂಗತಿಯಾಗಿತ್ತು. ಇಂದಿರಾಗಾಂಧಿ ಪ್ರಧಾನಿಯಾಗಿದ್ದಾಗ ವನ್ಯಜೀವಿಗಳ ಸಂರಕ್ಷಣೆಗಾಗಿ ವನ್ಯಜೀವಿ ಕಾಯ್ದೆ 1972 ಅನ್ನು ಜಾರಿಗೆ ತಂದರು. ಇದರಿಂದ ಹುಲಿ, ಸಿಂಹ, ಆನೆ, ಚಿರತೆಗಳಿಗೆ ಅತಿ ಹೆಚ್ಚು ರಕ್ಷಣೆ ದೊರಕಿತು. ಆಗಿನ ಕೇಂದ್ರ ಸರ್ಕಾರ ಹುಲಿಗಳ ಸಂರಕ್ಷಣೆ ಮಾಡಲೇಬೇಕು ಎಂದು ಸಂಕಲ್ಪ ತೊಟ್ಟು, 1973ರಲ್ಲಿ ಹುಲಿ ಯೋಜನೆಯನ್ನು ಪ್ರಾರಂಭಿಸಿತು. ಈಗ ಭಾರತ ಹೆಚ್ಚು ಹುಲಿಗಳನ್ನು ಹೊಂದಿದ ದೇಶವೆಂದು ಪರಿಗಣಿಸಲ್ಪಟ್ಟಿದೆ. ಹಾಗಾದರೆ ಹುಲಿಗಳ ರಕ್ಷಣೆ ಬಹಳ ಸಮರ್ಥವಾಗಿ ಆಗುತ್ತಿದೆಯೇ ಎಂಬುದನ್ನು ಮುಂದೆ ನೋಡೋಣ.

ಹುಲಿ ಮೂಲತಃ ಅತ್ಯಂತ ನಾಚಿಕೆ ಸ್ವಭಾವದ ಪ್ರಾಣಿ. ದಟ್ಟವಾದ ಕಾಡಿನಲ್ಲಿ ನೀವು ಪ್ರತಿ ದಿನ ತಿರುಗಾಡುತ್ತೀರಿ, ಅದು ಹುಲಿಯ ಆವಾಸಸ್ಥಾನವೂ ಆಗಿದೆ ಎಂದುಕೊಳ್ಳಿ. ಹುಲಿ ತಜ್ಞರ ಪ್ರಕಾರ, ನೀವು ಹುಲಿಯನ್ನು ಎದುರಿಸುವ ಸಂದರ್ಭ ತೀರಾ ಕಡಿಮೆ. ಹುಲಿ ನಿಮ್ಮನ್ನು ನೂರು ಬಾರಿ ನೋಡಿದ್ದರೆ, ನೀವು ಹುಲಿಯನ್ನು ಒಮ್ಮೆ ಮಾತ್ರ ನೋಡಲು ಸಾಧ್ಯ. ಇದಕ್ಕೆ ಪೂರಕವಾದ ಒಂದು ಘಟನೆ ಹೀಗಿದೆ.

ದೀರ್ಘಪಯಣದ ಕಥೆ

ಮಹಾರಾಷ್ಟ್ರದ ತಾಡೋಬ ಹುಲಿ ಸಂರಕ್ಷಿತ ಪ್ರದೇಶದ ರಾಯಲ್ ಬೆಂಗಾಲ್ ಹುಲಿಯೊಂದು ಎರಡು ಸಾವಿರ ಕಿಲೋಮೀಟರ್ ದೂರದ ಅತಿ ದೀರ್ಘ ಪಯಣವನ್ನು ಪೂರ್ಣಗೊಳಿಸಿದ ಅಪೂರ್ವ ಪ್ರಸಂಗವಿದು. ಛತ್ತೀಸ್‌ಗಢ, ತೆಲಂಗಾಣ, ಆಂಧ್ರಪ್ರದೇಶಗಳನ್ನು ದಾಟಿ ಒಡಿಶಾ ತಲುಪಿದ ಅಸಾಧಾರಣ ರೋಚಕ ಘಟನೆ. ನಾಲ್ಕು ರಾಜ್ಯಗಳ, ಕಾಡುಮೇಡು, ಗುಡ್ಡಬೆಟ್ಟಗಳನ್ನು ಬಳಸಿಕೊಂಡು, ಕೃಷಿ ಜಮೀನು ಹಾದು, ಗಣಿ ಪ್ರದೇಶವನ್ನು ದಾಟಿ, ಅತ್ತ ಜನವಸತಿ ಪ್ರದೇಶಗಳನ್ನೂ ನಿರಾಯಾಸವಾಗಿ ಸಾಗಿ ತನ್ನ ಗಮ್ಯವನ್ನು ತಲುಪಿ, ಹೊಸನೆಲೆಯನ್ನು ಮತ್ತು ಸಂಗಾತಿಯನ್ನು ಸೇರಿಕೊಂಡಿದ್ದನ್ನು ದಾಖಲಿಸಲಾಗಿದೆ. ತಿಂಗಳುಗಟ್ಟಲೆ ಕ್ರಮಿಸಿದ ಈ ದೀರ್ಘ ಪಯಣದಲ್ಲಿ ಮನುಷ್ಯನ ಜೊತೆ ಒಂದೇ ಒಂದು ಸಂಘರ್ಷವಾದ ದಾಖಲೆಯಿಲ್ಲದಿರುವುದು ಈ ಹುಲಿಯ ಪಯಣದ ವಿಶಿಷ್ಟತೆಯಾಗಿದೆ.

> ಅಭಿವೃದ್ಧಿಯ ಹೆಸರಿನಲ್ಲಿ ಹುಲಿ ಪಥ ನಾಶವಾಗುತ್ತಿದೆ. ಇದರಿಂದ ಹುಲಿಗಳ ದುರಂತ ಸಾವೂ ಸಂಭವಿಸುತ್ತಿದೆ. ಹುಲಿ ತನ್ನ ದಾರಿಯಲ್ಲಿ ಮುಕ್ತವಾಗಿ ಸಂಚರಿಸುತ್ತಾ, ಬದುಕಲು ಅವಕಾಶವನ್ನು ನೀಡುವುದು ಮುಖ್ಯ. ಇದಕ್ಕಾಗಿ ಅರಣ್ಯ ಇಲಾಖೆ ಹಾಗೂ ಜನರು ಸಂವೇದನಶೀಲರಾಗಬೇಕು.

ಮಹಾರಾಷ್ಟ್ರದ ಚಂದ್ರಪುರ ಜಿಲ್ಲೆಯ ತಾಡೋಬ ಹುಲಿ ಸಂರಕ್ಷಿತ ಪ್ರದೇಶದ ಬ್ರಹ್ಮಪುರಿ ಅರಣ್ಯ ವಿಭಾಗದ ವ್ಯಾಪ್ತಿಯಲ್ಲಿ 2021ರಲ್ಲಿ ಕ್ಯಾಮೆರಾ ಟ್ರ್ಯಾಪಿನಲ್ಲಿ ಈ ಹುಲಿಯ ಪಯಣವನ್ನು ಪತ್ತೆ ಮಾಡಲಾಗಿತ್ತು. ಪ್ರತಿ ಮನುಷ್ಯರ ಕೈಬೆರಳಚ್ಚು ಹೇಗೆ ಭಿನ್ನವಾಗಿರುತ್ತದೆಯೋ ಹಾಗೆಯೇ ಹುಲಿಗಳ ಪಟ್ಟೆಯೂ ಪ್ರತಿಯೊಂದರಲ್ಲೂ ಭಿನ್ನವಾಗಿರುತ್ತದೆ. ಈ ಪಟ್ಟೆಗಳನ್ನು ಆಧರಿಸಿಯೇ ಹುಲಿಯ ಚಲನವಲನವನ್ನು ಪತ್ತೆ ಮಾಡಬಹುದಾಗಿದೆ.

2023ರ ಜೂನ್-ಜುಲೈ ತಿಂಗಳಲ್ಲಿ ಒಡಿಶಾದ ರಾಯಗಢ ಜಿಲ್ಲೆಯಲ್ಲಿ ಮೊದಲ ಬಾರಿಗೆ ಹುಲಿ ಕಂಡು ಬಂದಿತು. ಆಂಧ್ರ ಪ್ರದೇಶದ ಶ್ರೀಕಾಕುಲಂ ಮತ್ತು ಮಹೇಂದ್ರಗಿರಿ ಅರಣ್ಯ ವಿಭಾಗದಲ್ಲಿ ಸಂಚರಿಸುತ್ತಿರುವ ಮಾಹಿತಿ ಅಲ್ಲಿನ ಅರಣ್ಯ ಇಲಾಖೆಯವರಿಗೆ ಇತ್ತು. ಸೆಪ್ಟೆಂಬರ್ 2023ರಲ್ಲಿ ಗಜಪತಿ ಜಿಲ್ಲೆಯ ಪರ್ಲಾಕೆಮುಂಡಿ ಅರಣ್ಯ ವಿಭಾಗದಲ್ಲಿ ಒಂದು ಹಸುವನ್ನು ಕೊಂದ ಘಟನೆ ದಾಖಲಾಯಿತು. ಈ ಭಾಗದಲ್ಲಿ ಕಳೆದು ಮೂವತ್ತು ವರ್ಷಗಳಲ್ಲಿ ಹುಲಿ ಕಂಡು ಬಂದ ಘಟನೆ ದಾಖಲಾಗಿರಲಿಲ್ಲ. ವಲಸೆ ಹುಲಿಯ ಚಲನವಲನದ ಮೇಲೆ ನಿಗಾ ಇಟ್ಟಿರುವ ಒಡಿಶಾ ಅರಣ್ಯ ಇಲಾಖೆಯು ಸ್ಥಳೀಯರಿಗೆ ರಾತ್ರಿ ಸಮಯದಲ್ಲಿ ಮನೆಯಿಂದ ಆಚೆ ಬಾರದಂತೆ ಎಚ್ಚರಿಕೆ ನೀಡುತ್ತಾ, ಹುಲಿ ಸಂರಕ್ಷಣೆಗೆ ಒತ್ತು ಕೊಡುತ್ತಿದೆ. ಜೊತೆಗೆ ಹಸುವನ್ನು ಕಳೆದುಕೊಂಡವರಿಗೆ ಪರಿಹಾರವನ್ನೂ ನೀಡುತ್ತಿದೆ.

10ನೇ ಪುಟಕ್ಕೆ...

ರೌದ್ರ ನರ್ತನವೇ ಈ ಬೇಡರವೇಷದ ಜೀವಾಳ

ಶಿರಸಿಯಲ್ಲಿ ಹೋಳಿ ಹಬ್ಬದ ಸಂದರ್ಭದಲ್ಲಿ ನಡೆಯುವ ಬೇಡರವೇಷದ ಕುಣಿತವನ್ನು ನೋಡಿಯೇ ಆನಂದಿಸಬೇಕು. ಅದಕ್ಕೆ ಅಷ್ಟೊಂದು ಆಕರ್ಷಣೆ, ಸೊಗಸಿದೆ. ಈ ನೃತ್ಯದೊಂದಿಗೆ ಜನಪದ ಕಥೆಯೂ ಸೇರಿಕೊಂಡು ಆಚರಣೆಯನ್ನು ಮತ್ತಷ್ಟು ರಂಗೇರಿಸುತ್ತದೆ.

ಶಿರಸಿಯ ಬೇಡರವೇಷ

ರಾಜೇಂದ್ರ ಹೆಗಡೆ

ಜನಪದ ಶೈಲಿಯ ರೌದ್ರ ನರ್ತನದ ಮೂಲಕ ಬದುಕಿನ ಕರಾಳಮುಖ ತೋರಿಸುವ ಜೊತೆಜೊತೆಗೆ ಅಂತ್ಯದಲ್ಲಿ ಬದುಕಿನ ಸರಿ ದಾರಿ ದರ್ಶಿಸುವ ವಿಶಿಷ್ಟ ಕಲೆಯೇ ಬೇಡರವೇಷ. ಇದು ಜನಪದೀಯ ನವಿರಾದ ಲೇಪನದೊಂದಿಗೆ ಸಂಸ್ಕೃತಿ, ಇತಿಹಾಸ ಮತ್ತು ಉತ್ಸಾಹದ ಮಿಶ್ರಣದ ಹೂರಣವಾಗಿ ಜನಮಾನಸದಲ್ಲಿ ಬೆರೆತ ಸ್ಥಳೀಯ ಕಲೆಯೂ ಹೌದು.

ಉತ್ತರ ಕನ್ನಡ ಜಿಲ್ಲೆಯ ಶಿರಸಿ ಪಟ್ಟಣದಲ್ಲಿ ಬೇಡರವೇಷದ ರಂಗು ಹೋಳಿಯ ಬಣ್ಣದಷ್ಟೇ ವಿಶೇಷತೆ ಪಡೆದಿದೆ. ಹೋಳಿ ಹಬ್ಬಕ್ಕೆ ನಾಲ್ಕು ದಿನ ಮೊದಲು ಇಲ್ಲಿನ ನಿವಾಸಿಗಳು ಕತ್ತಲೆಗಾಗಿ ಕಾಯುತ್ತಾರೆ. ಕತ್ತಲೆಯ ಪರದೆ ಬೀಳುತ್ತಿದ್ದಂತೆ, ಇಡೀ ಪಟ್ಟಣ ರಂಗನ್ನು ಮೆತ್ತಿಕೊಳ್ಳುತ್ತದೆ. ರೋಮಾಂಚಕ ಮತ್ತು ನೈಸರ್ಗಿಕ ಬಣ್ಣಗಳ ಸೊಗಸಾದ ಬಳಕೆಯು ಇದನ್ನು ಒಂದು ಭವ್ಯ ಪ್ರದರ್ಶನವಾಗಿ ನೋಡುಗರ ಮನಕ್ಕಿಳಿಸುತ್ತದೆ.

'ಅಚ್ಚಕೆಂಪು ಬಣ್ಣದ ಉದ್ದತೋಳಿನ ಅಂಗಿ, ಮೊಣಕಾಲು ಮುಟ್ಟುವ ದೊಗಲೆ ಚಡ್ಡಿ, ಕಾಲಿಗೆ ಗೆಜ್ಜೆ, ಬೆನ್ನಿಗೆ ಉದ್ದುದ್ದ ನವಿಲು ಗರಿಗಳ ಪದರು, ಕುತ್ತಿಗೆಗೆ ನೋಟಿನ ಮಾಲೆ, ಕಿಡಿಕಾರುವ ಕಣ್ಣು, ಮೂಗಿನ ಮೇಲೊಂದು ಹತ್ತಿಯುಂಡೆ, ಕೆಂಡಕಾರುವ ಮುಖದ ಮೇಲೆ ಬಿಳಿ-ಹಳದಿ ಬಣ್ಣದ ಗೆರೆಗಳ ನಡುವೆ ಕಡುಗಪ್ಪಿನ ದಪ್ಪ ಮೀಸೆಯ ಬೇಡ ಬಲಗೈಯಲ್ಲಿ ಕತ್ತಿ, ಎಡಗೈಯಲ್ಲಿ ಗುರಾಣಿ ಝಳಪಿಸುತ್ತ ಬಂದರೆ, ಸುತ್ತುವರಿದು ನಿಂತ ಪ್ರೇಕ್ಷಕರ ಎದೆಯಲ್ಲಿ ನಡುಕ. ಜನಪದ ಶೈಲಿಯ ರೌದ್ರ ಭಾವಾತಿರೇಕದ ನರ್ತನವೇ ಬೇಡರವೇಷದ ಜೀವಾಳ.

ಬೇಡರವೇಷದಾರಿಯ ನರ್ತನದ ವೈಖರಿ

ಶಿರಸಿಯಲ್ಲಿ ಎರಡು ವರ್ಷಕ್ಕೊಮ್ಮೆ ಪ್ರಸಿದ್ಧ ಮಾರಿಕಾಂಬಾ ದೇವಿಯ ಜಾತ್ರೆ ನಡೆಯುತ್ತದೆ. ಜಾತ್ರೆ ಇಲ್ಲದ ವರ್ಷ ಇಲ್ಲಿ ಬೇಡರವೇಷದ ಬೆರಗು-ಮೆರಗು. ಬೇಡರವೇಷ ಪ್ರದರ್ಶನ ಹೋಳಿಯ ರಂಗು ಏರಿಚಿಕೊಳ್ಳುವುದರೊಂದಿಗೆ ಮುಕ್ತಾಯಗೊಳ್ಳುತ್ತದೆ.

ಹೂಂಕರಿಸುತ್ತ, ಝೇಂಕರಿಸುತ್ತ ಬರುವ ಬೇಡ ವೇಷಧಾರಿಗೆ ಪಟ್ಟಣ ಪೂರ್ತಿ ಸಂಚರಿಸಿ ಗಲ್ಲಿ ಗಲ್ಲಿಯಲ್ಲಿ ನೃತ್ಯ ಪ್ರದರ್ಶನ ನೀಡಲು ಒಮ್ಮೆಗೇ ಸಾಧ್ಯವಾಗದು. ಹೀಗಾಗಿ, ಒಂದು ತಿಂಗಳ ಹಿಂದೆಯೇ ಇದರ ತಾಲೀಮು ಆರಂಭವಾಗುತ್ತದೆ. ಬೇಡ ವೇಷಧಾರಿ, ಅತನಿಗೆ ಹಗ್ಗ ಕಟ್ಟಿ ನಿಯಂತ್ರಿಸುವ ಇಬ್ಬರು, ಎದುರು ಸ್ತ್ರೀ ವೇಷಧಾರಿ, ಸಿಳ್ಳೆ ಹೊಡೆಯುವವ, ಬದಿಯಲ್ಲಿ ನಿಂತು ಹಲಗೆ ಬಡಿಯುವ ನಾಲ್ವರ ತಂಡಕ್ಕೆ ನಿತ್ಯ ರಾತ್ರಿ ಕುಣಿತದ ಅಭ್ಯಾಸ ಮಾಡುವುದೇ ಕೆಲಸ. ರಾತ್ರಿ 10 ಗಂಟೆ ಸುಮಾರಿಗೆ ಶುರುವಾಗುವ ಹಲಗೆ ಬಡಿತದ ಅಬ್ಬರ ನಡುರಾತ್ರಿಗೆ ಶಾಂತವಾಗುತ್ತದೆ.

ಬೇಡರವೇಷದ ದಿನ ಎಲ್ಲರೂ ವೇಷಧಾರಿಗಳಾಗಿ ಪ್ರದರ್ಶನಕ್ಕೆ ಅಣಿಯಾಗುತ್ತಾರೆ. ಮುಸ್ಸಂಜೆ ಬಣ್ಣ ಹಚ್ಚಲು ಆರಂಭಿಸಿದರೆ ವೇಷ ಸಿದ್ಧವಾಗುವ ವೇಳೆಗೆ ರಾತ್ರಿ 9 ದಾಟುತ್ತದೆ. ಅಪ್ಪಟ ಜನಪದ ಶೈಲಿಯ ಈ ವೇಷಕ್ಕೆ ಬಣ್ಣ ಹಚ್ಚುವುದು ಸುಲಭದ ಕೆಲಸವಲ್ಲ. ನುರಿತ ಕಲಾವಿದರು ಮಾತ್ರ ಈ ಕೆಲಸ ಮಾಡಬಲ್ಲರು. ವಿವಿಧ ಬಡಾವಣೆಗಳ 60ಕ್ಕೂ ಹೆಚ್ಚು ತಂಡಗಳು ಬೇಡರವೇಷ ಪ್ರದರ್ಶಿಸುತ್ತವೆ. ಪಟ್ಟಣದ ಪ್ರತಿ ವೃತ್ತದಲ್ಲಿ ಸಾವಿರಾರು ಜನರು ಬೇಡನ ಕುಣಿತಕ್ಕಾಗಿ ಕಾತರದಿಂದ ಕಾಯುತ್ತಾರೆ. ಬೇಡರವೇಷ ನೋಡಲು ಹೊರ ಜಿಲ್ಲೆ, ರಾಜ್ಯಗಳಿಂದಲೂ ಜನರು ಬರುತ್ತಾರೆ.

ಜನಪದ ಕಥೆ ಹೀಗಿದೆ...

ಅದು ವಿಜಯನಗರ ಅರಸರ ಆಳ್ವಿಕೆಯ ಕೊನೆಯ ಘಟ್ಟ. ಆಗ ಅಧಿಕಾರ ಹಿಡಿದ ಸಾಮಂತರಾಗಿದ್ದ ಸೋದೆ ಅರಸರು ಅಂದಿನ ಕಲ್ಯಾಣ ಪಟ್ಟಣವಾಗಿದ್ದ ಇಂದಿನ ಶಿರಸಿಯ ಆಡಳಿತ ಹೊಣೆ ಹೊತ್ತು, ದಾಸಪ್ಪ ಶೆಟ್ಟಿ ಎಂಬುವವರಿಗೆ ಸಾರಥ್ಯ ವಹಿಸಿದರು. ಮುಸಲ್ಮಾನರ ದಾಳಿಯ ಭೀತಿಯಲ್ಲಿದ್ದ ಪಟ್ಟಣವನ್ನು ರಕ್ಷಿಸಲು ದಾಸಪ್ಪ ಶೆಟ್ಟಿ ಆಯ್ಕೆ ಮಾಡಿದ್ದು, ವಿಶೇಷ ದೃಷ್ಟಿ ಶಕ್ತಿ ಹೊಂದಿದ್ದ ಮಲ್ಲೇಶಿಯನ್ನು. ಈತ ತನ್ನೆಲ್ಲ ಶಕ್ತಿ ಯುಕ್ತಿಗಳನ್ನು ಬಳಸಿ ಕಳ್ಳಕಾಕರನ್ನೆಲ್ಲ ನಿಗ್ರಹಿಸುವಲ್ಲಿ ಸಂಪೂರ್ಣವಾಗಿ ಯಶಸ್ವಿಯಾಗುತ್ತಾನೆ. ಅರಸ ಮತ್ತು ಜನರಿಂದ ಸನ್ಮಾನಿತನಾಗುತ್ತಾನೆ. ತನಗೆ ಸಿಗುತ್ತಿರುವ ಗೌರವ ಆದರಗಳನ್ನು ಕಂಡು ಕ್ರಮೇಣ ಅಹಂಕಾರ ಬೆಳೆಸಿಕೊಳ್ಳುತ್ತಾನೆ. ತಾನೇ ಈ ಭಾಗದ ರಾಜಪ್ರತಿನಿಧಿಯೆಂಬಂತೆ ವರ್ತಿಸುತ್ತಾನೆ. ಸಾಮಾನ್ಯರಿಂದ, ವ್ಯಾಪಾರಿಗಳಿಂದ ಅತಿಯಾದ ಮನ್ನಣೆ ನಿರೀಕ್ಷಿಸುತ್ತ ಅದು ಕಮ್ಮಿಯಾಯಿತು ಎಂದು ಅನಿಸಿದಾಗಲೆಲ್ಲ ಶೋಷಣೆಗೆ ಮುಂದಾಗುತ್ತಾನೆ. ಇವನಿಗಿಂತ ಕಳ್ಳರ ಕಾಟವೇ ವಾಸಿ ಎಂಬ ವಾತಾವರಣ ಸೃಷ್ಟಿಯಾಗುತ್ತದೆ. ಅಧಿಕಾರದಿಂದ ಅಹಂಕಾರಿಯಾದ ಮಲ್ಲೇಶಿ ಕ್ರಮೇಣ ಸ್ತ್ರೀ ಲಂಪಟನಾಗುತ್ತ ಹೋಗುತ್ತಾನೆ. ದಾಸಪ್ಪ ಶೆಟ್ಟಿಯ ಮಗಳು ರುದ್ರಾಂಬೆಯ ಮೇಲೆ ಆತನ ದೃಷ್ಟಿ ನೆಟ್ಟಿತು. ಮಲ್ಲೇಶಿಗೆ ಪಾಠ ಕಲಿಸಬೇಕೆಂದು ಹಟತೊಟ್ಟ ರುದ್ರಾಂಬೆ ಆತನನ್ನು ವರಿಸುತ್ತಾಳೆ.

ಸರಿಯಾದ ಸಂದರ್ಭಕ್ಕೆ ಕಾಯುತ್ತಿದ್ದ ರುದ್ರಾಂಬೆ, ಹೋಳಿ ಹಬ್ಬದ ದಿನ ಆತ ನರ್ತಿಸುವಾಗ, ಅವನ ಮುಖಕ್ಕೆ ವಿಷಯುಕ್ತ ದ್ರವ ಎರಚುತ್ತಾಳೆ. ಇದರಿಂದ ಆತ ದೃಷ್ಟಿ ಕಳೆದುಕೊಳ್ಳುತ್ತಾನೆ. ಈ ಘಟನೆಯಿಂದ ಇಡೀ ಊರು ಸಂಭ್ರಮಿಸುತ್ತದೆ. ಅವನನ್ನು ಊರಿನ ಬೀದಿಯಲ್ಲಿ ಮೆರವಣಿಗೆ ಮಾಡಲಾಗುತ್ತದೆ. ಬಹು ಧಿಮಾಕಿನಿಂದ ವರ್ತಿಸಿ ಎಲ್ಲರ ಅವಕೃಪೆಗೆ ಪಾತ್ರನಾಗಿದ್ದ ಬಂಧಿತ ಮಲ್ಲೇಶಿಯನ್ನು ನೋಡಲು ಇಡೀ ಊರು ಸಡಗರದಿಂದ ಸೇರುತ್ತದೆ. ಅವನನ್ನು ಕೆರಳಿಸಿ ಖುಷಿ ಪಡಲು ಹಲಗೆ ಎಂಬ ಚರ್ಮವಾದ್ಯ ಬಡಿಯಲಾಗುತ್ತದೆ. ಅವನು ತಪ್ಪಿಸಿಕೊಂಡು ಹೋಗದಂತೆ ಕೈಗಳಿಗೆ ಹಗ್ಗ ಬಿಗಿದು ಎರಡೂ ಕಡೆ ಹಿಡಿದುಕೊಂಡು ಮೆರವಣಿಗೆ ಸಾಗುವಂತೆ ಏರ್ಪಾಡಾಗಿರುತ್ತದೆ. ಆತ ರೌದ್ರವಾಗಿ ನರ್ತಿಸುತ್ತ, ರುದ್ರಾಂಬೆಯ ಮೇಲೆರಗಲು ಯತ್ನಿಸುತ್ತಾನೆ. ಬಳಿಕ ಜನರು ಆತನನ್ನು ಜೀವಂತ ದಹಿಸುತ್ತಾರೆ.

ರುದ್ರಾಂಬೆಯ ನೆನಪಿಗಾಗಿ ಬೇಡರವೇಷವನ್ನು ಹಾಕಿ ಕುಣಿಯಲಾಗುತ್ತದೆ. ಇದು ಬೇಡರವೇಷದ ಹಿಂದಿರುವ ಒಂದು ಜನಪದ ಕಥೆ. ಆಗ ಮಲ್ಲೇಶಿ ಯಾವ ರೀತಿ ಅರ್ಭಟಿಸಿದ್ದ ಅದೇ ರೀತಿ ಬೇಡವೇಷಧಾರಿಗಳು ಈಗಲೂ ಅರ್ಭಟಿಸುತ್ತಾರೆ.

ಇದನ್ನು ನೃತ್ಯದ ಚೌಕಟ್ಟಿನಲ್ಲಿ ತೋರುತ್ತ, ನೋಡುಗರ ಎದೆ ಬಡಿತ ಹೆಚ್ಚಿಸುತ್ತ, ಕೊನೆಯಲ್ಲಿ ದುಷ್ಟ ಸಂಹಾರದೊಂದಿಗೆ ಬೇಡರವೇಷವು ಸಮಾಜಕ್ಕೆ ನಿಜಾರ್ಥದಲ್ಲಿ ಧಿಮಾಕು, ಕ್ರೂರತನ, ದರೋಡೆಕೋರತನ, ಕಳ್ಳತನ, ಸ್ತ್ರೀ ಶೋಷಣೆಯಂಥ ಎಲ್ಲಾ ಅವಗುಣಗಳಿಗೆ ಶಿಕ್ಷೆಯ ಮೂಲಕ ನಾಶದ ಪಾಠ ತೆರೆದಿಡುತ್ತದೆ. ಬೇಡರವೇಷವು ರುದ್ರಾಂಬೆಯ ತ್ಯಾಗದ ಜೊತೆ ನಾರಿಶಕ್ತಿ ವಿಜಯದ ಸಂಭ್ರಮವಾಗಿಯೂ ಕಾಣುತ್ತದೆ.

ಎಂಜಿನಿಯರ್ ಪ್ರತೀಕ್‌ಗೆ ಒಲಿದ ಕಾಷ್ಠಕಲೆ

ಪ್ರತೀಕ್ ತಯಾರಿಸಿರುವ ಮರದ ಮೂರ್ತಿಗಳು ಚಿತ್ರಗಳು: ಫಕ್ರುದ್ದೀನ್ ಎಚ್.

ಗಣೇಶ ಚಂದನಶಿವ

'ಮರದಲ್ಲಿ ಮೂರ್ತಿ ಕೆತ್ತುವುದಕ್ಕೆ ಕೌಶಲ ಅಷ್ಟೇ ಸಾಲದು; ಶ್ರದ್ಧೆ-ಭಕ್ತಿಯೂ ಬೇಕು' ಎನ್ನುತ್ತ ಮಾತಿಗಿಳಿದರು ಪ್ರತೀಕ್ ಗುಡಿಗಾರ್. ಕೋಟಿ ಚೆನ್ನಯರ ಆರು ಅಡಿ ಎತ್ತರದ ಮರದ ಮೂರ್ತಿಯನ್ನು ಅವರು ಕೆತ್ತುತ್ತಿದ್ದರು. ತಮ್ಮ ಸಹಾಯಕ ಚಂದ್ರಯ್ಯ ಆಚಾರ್ ಜೊತೆಗೂಡಿ ಅವರು ಮಾಡುತ್ತಿದ್ದ ಈ ಕಲಾತ್ಮಕ ಕೆತ್ತನೆಯ ಶಬ್ದವೂ ಲಯಬದ್ಧವಾಗಿ ಹೊರಹೊಮ್ಮುತ್ತಿತ್ತು.

ಉಡುಪಿ ಜಿಲ್ಲೆ ಕೋಟೇಶ್ವರ ಬಳಿಯ ಅಂಕದಕಟ್ಟೆಯ ಪ್ರತೀಕ್ ಎಂಜಿನಿಯರಿಂಗ್ ಪದವೀಧರ. ಕೋವಿಡ್ ಸಂದರ್ಭದಲ್ಲಿ ತಂದೆಯ (ಪ್ರದೀಪ್ ಗುಡಿಗಾರ್) ಅಕಾಲಿಕ ನಿಧನದ ನಂತರ, ಕುಲಕಸುಬು ಮುಂದುವರಿಸಿದ್ದಾರೆ.

ತುಳುನಾಡಿನಲ್ಲಿ ದೈವಾರಾಧನೆಗೆ ಹೆಚ್ಚಿನ ಮಹತ್ವವಿದೆ. ದೇವಸ್ಥಾನ, ದೈವಸ್ಥಾನ, ಗರಡಿಗಳೂ ಹೆಚ್ಚಿನ ಸಂಖ್ಯೆಯಲ್ಲಿವೆ. ಗರಡಿಗಳಲ್ಲಿ ಪಂಜುರ್ಲಿ, ಕೋಟಿ ಚೆನ್ನಯ, ಯಕ್ಷಿ, ತಾಂಬೂಲ ಯಕ್ಷಿ, ವೀರಭದ್ರ, ಚಿಕ್ಕು ಮತ್ತು ಪರಿವಾರ ದೈವಗಳ ಮರದ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗುತ್ತದೆ. ಕೆಲ ಮನೆತನದವರಿಗೆ ಅವರ ಮನೆತನದ್ದೇ ದೈವಗಳಿದ್ದು

ಪುಟ್ಟ ಊರಲ್ಲಿ ನಾಟ್ಯೋತ್ಸವ ಸೊಬಗು

'ಕುಚೇಲ ವೃತ್ತಂ' ರೂಪಕದೊಂದಿಗೆ ಕಥಕ್ಕಳಿಯ ಸೊಬಗು

ನಾರಾಯಣ ಯಾಜಿ

ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ಸಮೀಪ ರಾಷ್ಟ್ರೀಯ ಹೆದ್ದಾರಿ 66 ರ ಪಕ್ಕದಲ್ಲಿರುವ ಪುಟ್ಟ ಊರು ಗುಣವಂತೆ. ನಗರೀಕರಣದ ಯಾವ ಸೆಳವಿಗೂ ಸಿಲುಕದ ಈ ಊರು ಫೆಬ್ರುವರಿ ತಿಂಗಳು ಬಂತೆಂದರೆ ನಾಡಿನ ಗಮನ ಸೆಳೆಯುತ್ತದೆ. ಇದಕ್ಕೆ ಕಾರಣ ಕೆರೆಮನೆ ಶಂಭು ಹೆಗಡೆ ರಾಷ್ಟ್ರೀಯ ನಾಟ್ಯೋತ್ಸವ. ಈ ಸಂದರ್ಭದಲ್ಲಿ ರಾಜ್ಯ ಮತ್ತು ದೇಶದ ವಿವಿಧ ಭಾಗಗಳ ಕಲೆಗಳ ಸಂಗಮವಾಗುತ್ತದೆ.

ಈ ಸಲದ ನಾಟ್ಯೋತ್ಸವದಲ್ಲಿ ಭಾರತದ ಪ್ರಾತಿನಿಧಿಕ ಸಾಂಸ್ಕೃತಿಕ ಲೋಕವೇ ಅನಾವರಣಗೊಂಡಿತ್ತು. ದಕ್ಷಿಣದ ತುದಿಯ 'ಕಥಕ್ಕಳಿ' ಯಿಂದ ಉತ್ತರದ ಕಥಕ್, ಭರತನಾಟ್ಯದಿಂದ ಹಿಡಿದು ಪೂರ್ವಾಂಚಲದ 'ಛಾವೂ' ಎನ್ನುವ ಮುಖವಾಡ ಧರಿಸಿ ನರ್ತಿಸುವ ನೃತ್ಯ ಕಲಾಪ್ರಕಾರ, ಅಮೆರಿಕಾದ ಸಮನ್ವಿತಾರ ಭರತನಾಟ್ಯದಿಂದ ಹಿಡಿದು ಮುಳಬಾಗಿಲಿನ ಅಂಜನಪ್ಪ ಅವರ ಮುಖವೀಣೆಯವರೆಗೆ ಒಂಬತ್ತು ದಿನ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.

ಭಾರತೀಯ ಪ್ರದರ್ಶನ ಕಲೆಯ ವಿಶೇಷವೆಂದರೆ ಪಾಶ್ಚಾತ್ಯರಂತೆ ಸಿದ್ಧ ಮಾದರಿಗಳಲ್ಲ; ಪ್ರತೀ ಪ್ರದರ್ಶನವೂ ಕಥನವನ್ನು ಕಟ್ಟಿಕೊಡುವ ರಸಗವಳವಾಗಿರುತ್ತವೆ. ಯಕ್ಷಗಾನದ ಸೋದರ ಸಂಬಂಧಿಯಾಗಿರುವಂತಹ ಕಥಕ್ಕಳಿಯಲ್ಲಿ (ಫೋಕ್‌ಲ್ಯಾಂಡ್, ಕೇರಳ) ಇದು ನಿಚ್ಚಳವಾಗಿ ಕಾಣಿಸಿತು. 'ಮರಿಂಗೂರು ಶಂಕರನ್ ಪೊಟ್ಟಿ ರಚಿಸಿದ 'ಕುಚೇಲ ವೃತ್ತಂ' ದಲ್ಲಿ ಕಥಕ್ಕಳಿಯ ಸಾಂಸ್ಕೃತಿಕ ಪರಂಪರೆಯ ಜೊತೆಗೆ ಭಕ್ತಿ, ಹಸ್ತಭಾವಗಳ ಮೂಲಕ ಸುಧಾಮನ ಬಡತನ ಅದನ್ನು ಕೃಷ್ಣನಿಗೆ ಹೇಳಲು ಅಡ್ಡಬರುವ ಸ್ನೇಹ, ಇವು ನಿಖರವಾದ ಮುದ್ರೆಗಳು ಮತ್ತು ಸೂಕ್ಷ್ಮವಾದ ಮುಖಭಾವಗಳಲ್ಲಿ ಸಂಕಟ, ಕೃಪೆ, ಭಕ್ತಿ ಮತ್ತು ಅನುಗ್ರಹಗಳೆಲ್ಲವನ್ನೂ ಸಹಜವಾಗಿ ಅಭಿವ್ಯಕ್ತಿಸಿದರು.

ಕಲಾವಿದನಿಗೆ ವಯಸ್ಸಾಗಿರಬಹುದು. ಆತನ ಕಲೆಗಲ್ಲ ಎನ್ನುವುದನ್ನು ಸ್ಪಷ್ಟವಾದದು ಕೆ. ಶಿವರಾಮ ಕಾರಂತರ ಮಗಳು 80 ವಯಸ್ಸಿನ ಕ್ಷಮಾ ರಾವ್ ಅವರ ಒಡಿಸ್ಸಿ ನೃತ್ಯ. ವರ್ತಮಾನದ ಕಲಾವಿದರು ನೃತ್ಯದ ಭಾವಗಳಿಗೆ ಒತ್ತುಕೊಡುವುದರತ್ತ ಗಮನ ಹರಿಸಿದರೆ, ಭಾವಾಭಿವ್ಯಕ್ತಿ ಇವರ ಅಭಿನಯದಲ್ಲಿತ್ತು. ಅಭಿಸಾರಿಕೆಯಾಗಿ ಕೃಷ್ಣನನ್ನು ಹುಡುಕಿಕೊಂಡು ಹೋಗುವಲ್ಲಿ ಮುಖದಲ್ಲಿ ಪ್ರದರ್ಶಿಸಿದ ಭಾವ ಮತ್ತು ಮುದ್ರೆಗಳು ಇವರ ಇಳಿವಯಸ್ಸನ್ನು ಮರೆಮಾಚಿಸಿದ್ದವು. ಮತ್ತೊಂದು ಗಮನ ಸೆಳೆದಿದ್ದು ಗುಡಿಬಂಡೆಯ ಕಲಾವಿದ ಅಂಜನಪ್ಪ ಅವರ 'ಮುಖವೀಣೆ'. ಶಹನಾಯಿನ್ನು ಹೋಲುವ ಮುಖವೀಣೆ, ಶ್ರುತಿಗೆ ಸೋರೆಬುರುಡೆ, ಸಂಗಡ ಒತ್ತು ಮುಂತಾದ ಐದು ಸಾಧನ ಬಳಸಿ ಕ್ಲಿಷ್ಟವಾದ ರಾಗಗಳನ್ನೂ, ಸಿನಿಮಾ ಸಂಗೀತವನ್ನು ನುಡಿಸುವ ಏಕೈಕ ಕಲಾವಿದ ಇವರು. ಸಂಗೀತಕ್ಕೆ ಹೇಗೆ ಉತ್ತಮ ಧ್ವನಿ ಅಗತ್ಯವೋ ಅದೇ ರೀತಿ ಇದಕ್ಕೂ ಸುದೀರ್ಘ ಉಸಿರಾಟದೊಂದಿಗೆ ಐದು ಸಾಧನಗಳನ್ನು ಬಾಯಲ್ಲಿಟ್ಟು ನುಡಿಸುವ ಕೌಶಲ ಹಾಗೂ ಗಟ್ಟಿತನ ಬೇಕು. ತಮ್ಮ ಎಂಬತ್ತೈದರ ಹರೆದಲ್ಲಿಯೂ ಕೌರವನ ಜಾಪನ್ನು ರಂಗದಲ್ಲಿ ಗೋಡೆ ನಾರಾಯಣ ಹೆಗಡೆಯವರ ತೋರಿಸಿದರು.

ಮುಖವೀಣೆ ನುಡಿಸುತ್ತಿರುವ ಗುಡಿಬಂಡೆಯ ಅಂಜನಪ್ಪ

ವಿಶಿಷ್ಟ 'ಛಾವೂ' ನೃತ್ಯ...

ಮುಖಭಾವವೇ ಕಲೆಯನ್ನು ಅಭಿವ್ಯಕ್ತಿಸುವ ಸಾಧನ ಎನ್ನುವುದನ್ನು ಅಲ್ಲಗೆಳೆಯುವ 'ಛಾವೂ' ನೃತ್ಯ ವಿಶಿಷ್ಟವಾಗಿತ್ತು. ಸೆಮಿ ಕ್ಲಾಸಿಕಲ್ ಎನ್ನುವ ಈ ಕಲೆಯ ಕಲಾವಿದರು ಉಪಜೀವನಕ್ಕಾಗಿ ಹಳ್ಳಿಯಲ್ಲಿ ಸಣ್ಣಪುಟ್ಟ ಕೆಲಸ ಮಾಡುತ್ತಾ ಇದನ್ನು ಒಂದು ಆರಾಧನಾ ಕಲೆಯನ್ನಾಗಿ ಅಭಿನಯಿಸುತ್ತಾರೆ. ಜಾರ್ಖಂಡದ ಶುಭಂ ಆಚಾರ್ಯ ಮತ್ತು ಸತೀಶ ಮೋದಕ್ ಅವರು 'ಸೆರೈಕಲಾ' ಪದ್ಧತಿಯಲ್ಲಿ ನವಿಲಿನ ಚಲನೆ, ಹಂಸದ ನಡಿಗೆ, ಸಮುದ್ರದ ಅಲೆಗಳ ಏರಿಳಿತವನ್ನು ದೇಹದ ಚಲನೆಯಲ್ಲಿ ಪ್ರದರ್ಶಿಸಿದರು. ಉತ್ತರದ ಕಥಕ್ ನೃತ್ಯಕ್ಕೆ ವಚನಗಳನ್ನು ಸಂಯೋಜಿಸಿದ ಮಧು ನಟರಾಜ್ ಅವರ ಮತ್ತು ಮೈಸೂರು ಮಂಜುನಾಥ, ಸುಮಂತ ಅವರ ವಯಲಿನ್ ಜುಗಲಬಂದಿ, ಅಮೆರಿಕಾದ ಸಮನ್ವಿತಾ ಪ್ರಸನ್ನ ಅವರು 'ದುರ್ಗಾ ಸೂಕ್ತ' ವನ್ನು ಸಂಯೋಜಿಸಿದ ಭರತನಾಟ್ಯ, ದತ್ತಾತ್ರೇಯ ವೇಲನಕರ್ ಅವರ ಕೇದಾರ ರಾಗದ ಮೋಡಿ, ತಾಳಮದ್ದಳೆ ಮತ್ತು ಯಕ್ಷಗಾನ ಇವೆಲ್ಲವನ್ನೂ ಮೈಮರೆತು ನೋಡಿ ನಡುರಾತ್ರಿ ಕಳೆಯುವಾಗ ಮನೆಗೆ ಮರಳುವ ಪ್ರೇಕ್ಷಕರು ಮಾರನೆಯ ದಿನಕ್ಕಾಗಿ ಕಾತರದಿಂದ ಕಾಯುತ್ತಿದ್ದರು. ಅಬ್ರಹಾಂ ಝೋಂಕರ್ (ಮೇಘ ಸಮೀರ್) ಮತ್ತು ಆತನ ಮೊಮ್ಮಗಳು ವೆರೋನಿಕಾ (ದಿಶಾ ರಮೇಶ) ಇವರಿಬ್ಬರ ನಡುವೆ ನಡೆಯುವ ಮುಖಾಮುಖಿ, ಒಬ್ಬರನ್ನೊಬ್ಬರು ಬಿಟ್ಟರಲಾರದ ಅಸಹಾಯಕತೆಯನ್ನು ಮೈಸೂರಿನ ನಟನ ಕಲಾವಿದರು ಶ್ರೀಪಾದ ಭಟ್ಟರ ಬಿಗಿಯಾದ ನಿರ್ದೇಶನದಲ್ಲಿ 'ಮೌನ ಕಣಿವೆಯ ಹಾಡು' ನಾಟಕದಲ್ಲಿ ಮನಮುಟ್ಟುವಂತೆ ಮಾಡಿದರು.

ಯಕ್ಷಗಾನವನ್ನು ಜಾಗತಿಕ ರಂಗಭೂಮಿಯ ಕಾನ್ವಾಸಿನಲ್ಲಿ ಪ್ರದರ್ಶಿಸಿದ ಶಂಭು ಹೆಗಡೆಯವರ ನೆನಪಿನಲ್ಲಿ ಅವರ ಮಗ ಶಿವಾನಂದ ಹೆಗಡೆ ಈ ನಾಟ್ಯೋತ್ಸವವನ್ನು ಆಯೋಜಿಸುತ್ತಿದ್ದಾರೆ. ಹೆಗ್ಗೋಡು, ಸಾಣೇಹಳ್ಳಿಯಂತೆ ಗುಣವಂತೆ ನಾಟ್ಯೋತ್ಸವದಿಂದಾಗಿ ನೆನಪಿನಾಳದಲ್ಲಿ ಉಳಿದ ಮುಂದಿನ ವರ್ಷಕ್ಕಾಗಿ ಕಾಯುವಂತೆ ಮಾಡುತ್ತದೆ. ❖

ಕನ್ನಡದ 'ರಾಜಕುಮಾರ್'

ವರುಣ ಹೆಗಡೆ

ಎಷ್ಟೇ ಮುಖ್ಯವಾದ ಕೆಲಸ ಕಾರ್ಯಗಳಿದ್ದರೂ ಅವುಗಳನ್ನೆಲ್ಲ ಬದಿಗೊತ್ತಿ, ಪ್ರತಿನಿತ್ಯ ರಾತ್ರಿ 9 ರಿಂದ 12 ಗಂಟೆವರೆಗೆ ಬಿಡುವು ಮಾಡಿಕೊಳ್ಳುತ್ತಾರೆ. ಈ ಅವಧಿಯಲ್ಲಿ ಅವರು ಕರೆಗಳ ನಿರೀಕ್ಷೆಯಲ್ಲಿ ಇರುತ್ತಾರೆ. ಗಡಿಯಾರದ ಮುಳ್ಳು 12 ದಾಟಿ, ದಿನಾಂಕ ಬದಲಾದ ಬಳಿಕವೇ ಅವರು ಮಲಗುವುದು. ಕಳೆದ 22 ವರ್ಷಗಳಿಂದ ಅವರು ಇದೇ ದಿನಚರಿ ಪಾಲಿಸಿಕೊಂಡು ಬಂದಿದ್ದಾರೆ. ಅವರ ಈ ಕಾಯುವಿಕೆ ಕುಟುಂಬಸ್ಥರ, ಪರಿಚಯಸ್ಥರ ಅಥವಾ ಒಡನಾಡಿಗಳ ಕರೆಗಾಗಿ ಅಲ್ಲ. ಬದಲಾಗಿ, ಭಾಷೆಯ ಬಗೆಗೆ ತಿಳಿಯಬೇಕೆಂಬ ಹಂಬಲ ಹೊಂದಿರುವ ಕನ್ನಡದ ಮನಸ್ಸುಗಳ ಕರೆಗಳಿಗಾಗಿ.

ಕೆ. ರಾಜಕುಮಾರ್

ಹೌದು, ಕನ್ನಡವನ್ನೇ ಉಸಿರಾಗಿಸಿಕೊಂಡು, ನಾಲ್ಕು ದಶಕಗಳಿಂದ ಕನ್ನಡ ಪರ ಕಾಯಕ ಮಾಡುತ್ತಾ ಬಂದವರು ಕೆ.ರಾಜಕುಮಾರ್. ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ದೊರೆತಿದೆ. 'ಕನ್ನಡವೆಂದರೆ ಬರಿ ನುಡಿಯಲ್ಲ, ಹಿರಿದಿದೆ ಅದರರ್ಥ...' ಎಂದು ಕವಿ ಕೆ.ಎಸ್. ನಿಸಾರ್ ಅಹಮದ್ ಹೇಳಿದ್ದರು. ಇಂತಹ ಕನ್ನಡವನ್ನು ಆಡಳಿತ, ನ್ಯಾಯಾಂಗ ಸೇರಿ ವಿವಿಧ ಕ್ಷೇತ್ರಗಳಲ್ಲಿ ಪೂರ್ಣ ಪ್ರಮಾಣ ಅನುಷ್ಠಾನಕ್ಕೆ ಸಂಬಂಧಿಸಿದಂತೆಯೂ ಇವರು ಮಾರ್ಗದರ್ಶನ ಮಾಡುತ್ತಿದ್ದಾರೆ. ವಯೋಸಹಜ ಅನಾರೋಗ್ಯ ಸಮಸ್ಯೆಯನ್ನೂ ಲೆಕ್ಕಿಸದೆ ಕನ್ನಡಕ್ಕಾಗಿ ಸದಾ ಮಿಡಿಯುತ್ತಿರುವ ಇವರು, ಎಲೆಮರೆಯ ಕಾಯಿಯಂತೆ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಕನ್ನಡ ಸೇವೆ ಮಾಡುತ್ತಿದ್ದಾರೆ.

ರಾಜಕುಮಾರ್ ಅವರು 45 ವರ್ಷಗಳಿಂದ ಕನ್ನಡ ಪರ ಹೋರಾಟಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಾ ಬಂದಿದ್ದಾರೆ. 2003ರ ನ.15ರಿಂದ ಅವರು ಕನ್ನಡದ ಬಗೆಗೆ ಉಚಿತ ಮಾರ್ಗದರ್ಶನ ಸೇವೆ ಒದಗಿಸುತ್ತಿದ್ದಾರೆ. ಇದಕ್ಕೂ ಮೊದಲು ಅವರ ಬಳಿ ಮೊಬೈಲ್ ಫೋನ್ ಇರದಿದ್ದರಿಂದ ಅವರ ಈ ಯೋಚನೆ ಕಾರ್ಯಗತವಾಗಿರಲಿಲ್ಲ. ಪ್ರಯಾಣ, ತೀವ್ರ ಅನಾರೋಗ್ಯ ಸಮಸ್ಯೆ ಇದ್ದಾಗ ಹೊರತುಪಡಿಸಿ, ವರ್ಷದ ಬಹುತೇಕ ಎಲ್ಲ ದಿನ ಅವರು ಈ ಸೇವೆ ನೀಡುತ್ತಾ ಬಂದಿದ್ದಾರೆ. ಪ್ರತಿನಿತ್ಯ ರಾತ್ರಿ 9ರಿಂದ 12 ಗಂಟೆಯ ಅವಧಿಯಲ್ಲಿ ಏಳರಿಂದ ಎಂಟು ಮಂದಿ ಕನ್ನಡಕ್ಕೆ ಸಂಬಂಧಿಸಿದಂತೆ ಇವರನ್ನು ಸಂಪರ್ಕಿಸುತ್ತಿದ್ದಾರೆ.

'ಆಡಳಿತದಲ್ಲಿ ಕನ್ನಡ ಇನ್ನೂ ಇಡಿಯಾಗಿ ಅನುಷ್ಠಾನವಾಗಿಲ್ಲ ಏಕೆ? ಗೋಕಾಕ್ ವರದಿ, ಮಹಿಷಿ ವರದಿ ಜಾರಿಯಾಗಿವೆಯೇ? ಮಹಾಜನ್ ವರದಿಯ ಕಥೆಯೇನು?, ಸಿಮ್‌ಗೆ ಕನ್ನಡಲ್ಲಿ ಏನು ಹೇಳುತ್ತಾರೆ?...' ಹೀಗೆ ಹಲವು ಪ್ರಶ್ನೆಗಳು ಅವರಿಗೆ ಪ್ರತಿನಿತ್ಯ ಎದುರಾಗುತ್ತಿವೆ.

ಕಳೆದ ವರ್ಷ ಅವರು ಹರ್ನಿಯಾ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ಈ ಶಸ್ತ್ರಚಿಕಿತ್ಸೆಯ ಮರು ದಿನವೇ ಅವರು ವೈದ್ಯರ ಸಲಹೆಯನ್ನೂ ಲೆಕ್ಕಿಸದೆ ಆಸ್ಪತ್ರೆಯಿಂದಲೇ ಮೊಬೈಲ್ ಕರೆಗಳನ್ನು ಸ್ವೀಕರಿಸಿ, ಕನ್ನಡದ ಬಗೆಗೆ ಮಾರ್ಗದರ್ಶನ ನೀಡಿದ್ದು ಶುಶ್ರೂಷಕರ ಕಣ್ಣು ಕೆಂಪಾಗಿಸಿತ್ತು. ಇತ್ತೀಚಿನ ವರ್ಷಗಳಲ್ಲಿ ಅವರು ವಾಟ್ಸ್‌ಆ್ಯಪ್ ಮೂಲಕವೂ ಈ ಸೇವೆ ಒದಗಿಸುತ್ತಿದ್ದಾರೆ. ಅಧಿಕಾರಿಗಳು, ನ್ಯಾಯಾಧೀಶರು, ಚಲನಚಿತ್ರ ಕಲಾವಿದರು, ರಾಜಕಾರಣಿಗಳು ಸೇರಿ ವಿವಿಧ ವರ್ಗದವರು ಕೂಡ ಕನ್ನಡ ಪದಗಳ ಬಳಕೆ ಹಾಗೂ ಭಾಷೆಯ ಬಗೆಗಿನ ಗೊಂದಲಕ್ಕೆ ಇವರನ್ನು ಸಂಪರ್ಕಿಸುತ್ತಾ ಬಂದಿದ್ದಾರೆ.

ಒಬ್ಬರು ರಾತ್ರಿ ಕರೆ ಮಾಡಿ ಭಾಷಣಕ್ಕೆ ಒತ್ತಾಯಿಸಿದ ಘಟನೆಯನ್ನು ನೆನಪಿಸಿಕೊಳ್ಳುವ ಅವರು, 'ರಾತ್ರಿ 9 ಗಂಟೆಗೆ ಸರಿಯಾಗಿ ಮೊಬೈಲು ರಿಂಗಣಿಸಿತು. ಕೋಲಾರದ ಜಾಲಿಬಾರಿನಲ್ಲಿ ಕುಳಿತು ಹಿರಿಯ ಮಿತ್ರರೊಬ್ಬರು ಮಾಡಿದ್ದ ಕರೆಯದು. ನೀವು ಕನ್ನಡಕ್ಕೆ ಸಂಬಂಧಿಸಿದಂತೆ ಬಹಳ ಚೆನ್ನಾಗಿ ಭಾಷಣ ಮಾಡುತ್ತೀರಿ ಎಂದು ನನ್ನ ಗೆಳೆಯರಿಗೆ ಹೇಳಿದ್ದೇನೆ. ನೀವು ಇತ್ತೀಚೆಗೆ ಮಾಡಿದ 'ಕನ್ನಡದ ಅರಿವು ಮತ್ತು ಅಭಿಮಾನ' ಎಂಬ ಉಪನ್ಯಾಸ ತುಂಬಾ ಮಾಹಿತಿ ಪೂರ್ಣವಾಗಿತ್ತು. ಅದನ್ನು ಈಗ ಮಾಡಿ, ನನ್ನ ಗೆಳೆಯರು ಕೇಳಬೇಕು ಎಂದು ಅವರು ಹೇಳಿದರು. ಉಪನ್ಯಾಸ ಮಾಡಲು ಸಾಧ್ಯವಾಗದು ಎಂದರೂ ಅವರು ಬಿಡಲೇ ಇಲ್ಲ. ನೀವು ಉಪನ್ಯಾಸ ಮಾಡಬೇಕು. ಅದು ನನ್ನ 'ಇಜ್ಜತ್ ಕಾ ಸವಾಲ್' ಎಂದು ಕಾಡಿದರು. ಸರಿ, ಉತ್ಸಾಹವನ್ನು ಆವಾಹನೆ ಮಾಡಿಕೊಂಡು ಒಂದು ಗಂಟೆ ಮಾತನಾಡಿದೆ. ಆ ಕಡೆಯಿಂದ ಒಂದು ಸ್ಮಾಲು, ಒಂದು ಲಾರ್ಜು ಎಂದು ಪಾನಗೋಷ್ಠಿ ಮುಂದುವರೆದಿತ್ತು' ಎಂದು ನಕ್ಕರು.

ಕೋಲಾರದವರಾದ ಇವರು, ಸದ್ಯ ಬೆಂಗಳೂರಿನ ಚಾಮರಾಜಪೇಟೆಯಲ್ಲಿ ನೆಲೆಸಿದ್ದಾರೆ. 67 ವರ್ಷದ ಅವರಿಗೆ ವಯೋಸಹಜ ಅನಾರೋಗ್ಯ ಸಮಸ್ಯೆ ಕಾಡುತ್ತಿದ್ದು, ಇದನ್ನು ಲೆಕ್ಕಿಸದೆ ಹಗಲಿರುಳು ಕನ್ನಡಕ್ಕಾಗಿ ಮಿಡಿಯುತ್ತಿದ್ದಾರೆ. ಎಸ್ಸೆಸ್ಸೆಲ್ಸಿಯಲ್ಲಿ ರ‍್ಯಾಂಕ್ ವಿದ್ಯಾರ್ಥಿಯಾಗಿದ್ದ ಅವರು, ಪದವಿಪೂರ್ವ ಶಿಕ್ಷಣದ ಬಳಿಕ ಕನ್ನಡ ಪರ ಹೋರಾಟಗಳಲ್ಲಿ ತಮ್ಮನ್ನು ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಂಡರು. ಬಳಿಕ ಪದವಿ ಶಿಕ್ಷಣವನ್ನು ಮೊಟಕುಗೊಳಿಸಿದರು. ಕನ್ನಡದಲ್ಲಿ ಪರಿಣತಿ, ಪಾಂಡಿತ್ಯ ಹೊಂದಿರುವ ಅವರು ಆರು ಭಾಷೆಗಳನ್ನು ಬಲ್ಲವರಾಗಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಸೇರಿ 17 ಇಲಾಖೆಗಳಿಗೆ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯನಿರ್ವಹಿಸಿದ್ದಾರೆ.

ಕನ್ನಡದ ಬಗ್ಗೆ ಅಪಾರ ಅಭಿಮಾನ ಹೊಂದಿರುವ ಅವರು, 'ಕನ್ನಡದ ಕೆಲಸವೆಂದರೆ ನನಗೆ ಸಮಗ್ರವಾದದ್ದು. ಬಿಡಿ ಬಿಡಿ ಎಳೆಯಲ್ಲ. ಸಾಹಿತ್ಯ, ಚಲನಚಿತ್ರ, ಕಲೆ, ಸಂಗೀತ, ವಾಸ್ತು, ನೃತ್ಯ, ಜನರ ಬದುಕು-ಬವಣೆ ಎಲ್ಲವನ್ನೂ ಕನ್ನಡ ಒಳಗೊಳ್ಳಲಿದೆ. ಕನ್ನಡದ ಕೆಲಸಕ್ಕೆ ಇರುವ ಮಾರ್ಗಗಳನ್ನೆಲ್ಲ ಬಳಸಿಕೊಂಡು, ಕನ್ನಡ ಕಾಯುತ್ತಾ ಬಂದಿದ್ದೇನೆ' ಎನ್ನುತ್ತಾರೆ ರಾಜಕುಮಾರ್. ಪ್ರಕಾಶಕರೂ ಆಗಿದ್ದ ಅವರು, ಪುಸ್ತಕ ಸಲಹಾ ಕೇಂದ್ರವನ್ನು ಪ್ರಾರಂಭಿಸಿ, ಅಂಚೆ ಮೂಲಕ ಬರಹಗಾರರಿಗೆ ಸಲಹೆ ಸೂಚನೆಗಳನ್ನು ನೀಡಿ ಪ್ರೋತ್ಸಾಹಿಸಿದ್ದರು.

ಗೋಕಾಕ್ ಚಳವಳಿ, ಕನ್ನಡಿಗರಿಗೆ ಉದ್ಯೋಗ ಹೋರಾಟ, ಆಡಳಿತದಲ್ಲಿ ಕನ್ನಡ ಅನುಷ್ಠಾನ ಸೇರಿ ವಿವಿಧ ಹೋರಾಟಗಳಲ್ಲಿ ಪಾಲ್ಗೊಂಡಿರುವ ಅವರು, ಹಲವು ಕಮ್ಮಟ, ಶಿಬಿರಗಳನ್ನು ಮುನ್ನಡೆಸಿದ್ದಾರೆ. ಸಂಪನ್ಮೂಲ ವ್ಯಕ್ತಿಯಾಗಿ ನೆರೆಯ ರಾಜ್ಯಗಳಲ್ಲಿಯೂ ಉಪನ್ಯಾಸ ನೀಡಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಯಾಗಿಯೂ ಕಾರ್ಯನಿರ್ವಹಿಸಿದ್ದಾರೆ.

ಇವರು ಇತ್ತೀಚೆಗೆ ರಾಜ್ಯ ಸರ್ಕಾರದ 2024-25ನೇ ಸಾಲಿನ 'ಸಂಗೊಳ್ಳಿ ರಾಯಣ್ಣ ಪ್ರಶಸ್ತಿ'ಗೆ ಭಾಜನರಾಗಿದ್ದಾರೆ. ಕನ್ನಡನಾಡಿನ ನೆಲ, ಜಲ, ಭಾಷೆ ಹಾಗೂ ಸಂಸ್ಕೃತಿಗಾಗಿ ನಿಸ್ವಾರ್ಥದಿಂದ ಹೋರಾಡಿದವರನ್ನು ಗುರುತಿಸಿ, ಪ್ರತಿ ವರ್ಷವೂ ಒಬ್ಬರಿಗೆ ಈ ಪ್ರಶಸ್ತಿ ನೀಡಲಾಗುತ್ತಿದೆ.

ರಾಜಕುಮಾರ್ ಅವರ ಸಂಪರ್ಕ ಸಂಖ್ಯೆ: 9035313490

ಜನಪದ ಕಲಾಮೇಳಗಳ ಸಂಗಮ

ಬಯಲು ಸೀಮೆಯ ಗೊರವರ ಕುಣಿತದ ಝಲಕ್...

ಚಂದ್ರು ಕಾಳೇನಹಳ್ಳಿ

ಬೆಂಗಳೂರಿನ ಅರಮನೆ ಮೈದಾನದಲ್ಲಿ ಅಂದು ವಿವಿಧ ಜನಪದ ಕಲಾ ಪ್ರಕಾರಗಳ ವರ್ಣರಂಜಿತ ಮೆರವಣಿಗೆ ಹೊರಟಿತ್ತು. ಅದನ್ನು ಕಂಡವರು ಇದೇನು ದಸರಾ ಮೆರವಣಿಗೆ ಹೊರಟಿದೆಯೇ ಎನ್ನುವಂತೆ ಆಶ್ಚರ್ಯಚಕಿತರಾಗಿ ನೋಡಿ ಖುಷಿಪಡುತ್ತಿದ್ದರು. ಬೆಂಗಳೂರಿನ ಸ್ನೇಹ ಬಳಗದವರು ಆಯೋಜಿಸಿದ್ದ ಜನಪದ ಕಲಾಮೇಳಕ್ಕೆ ಇದು ಮುನ್ನುಡಿಯಂತಿತ್ತು.

ದೇಸಿ ಶೈಲಿಯಲ್ಲಿ ಅಲಂಕೃತಗೊಂಡಿದ್ದ ವೇದಿಕೆಯಲ್ಲಿ ಸಂಜೆ ಆರೂವರೆಯಿಂದ ಒಂಬತ್ತೂವರೆ ತನಕ ರಾಜ್ಯದ ವಿವಿಧ ಭಾಗಗಳಿಂದ ಬಂದಿದ್ದ 18 ಜನಪದ ಕಲಾ ತಂಡಗಳ 180 ಕಲಾವಿದರು ಪ್ರದರ್ಶನ ನಡೆಸಿಕೊಟ್ಟಿದ್ದು ನೆರೆದಿದ್ದ ಪ್ರೇಕ್ಷಕರಿಗೆ ಭರಪೂರ ಮನರಂಜನೆ ನೀಡಿತು. ಇಲ್ಲಿ ಪ್ರದರ್ಶಕ ಹಾಗೂ ಮೌಖಿಕ ಕಾವ್ಯ ಹಾಡುಗಾರಿಕೆ ಎರಡು ವಿಧದಲ್ಲಿ ಕಾರ್ಯಕ್ರಮ ಸಂಯೋಜನೆಗೊಂಡಿತ್ತು.

ಚಿಕ್ಕಮಗಳೂರಿನ ನವೀನ್ ಮತ್ತು ಸಂಗಡಿಗರ ವೀರಗಾಸೆ ಕುಣಿತ ಶುರುವಿನಲ್ಲೇ ಪ್ರೇಕ್ಷಕರಲ್ಲಿ ಉತ್ಸಾಹ ತುಂಬಿತು. ಬೆನ್ನಿಗೇ ಸಹನಾ ಅವರು ವೀರಗಾಸೆ ಪ್ರದರ್ಶನ ನೀಡಿ ಸೈ ಎನಿಸಿಕೊಂಡರು. ಸಾಮಾನ್ಯವಾಗಿ ಪುರುಷರೇ ಪಾಲ್ಗೊಳ್ಳುವ ಡೊಳ್ಳು ಕುಣಿತದಲ್ಲಿ ಶಿವಮೊಗ್ಗದ ಶಾಂತ ಮತ್ತು ಸಂಗಡಿಗರು ಪುರುಷರಿಗೇನು ಕಡಿಮೆ ಇಲ್ಲ ಎಂಬಂತೆ ವಿವಿಧ ಪಿರಮಿಡ್‌ಗಳನ್ನು ರಚಿಸಿದ್ದು ರೋಮಾಂಚನವನ್ನುಂಟು ಮಾಡಿತು. ಇದಕ್ಕೆ ಪ್ರೇಕ್ಷಕರಿಂದ ಭಾರೀ ಮೆಚ್ಚುಗೆಯ ಚಪ್ಪಾಳೆ ಸಂದಾಯವಾಯಿತು.

ಕಲಾಮೇಳದಲ್ಲಿ ಮಹಿಳೆಯರಿಗೂ ಸಮಾನ ಅವಕಾಶ ಕಲ್ಪಿಸಲಾಗಿತ್ತು. ಮಹಿಳೆಯರೇ ಪ್ರದರ್ಶಿಸಿದ ಕೊಡಗಿನ ಉಮ್ಮತ್ತಾಟ, ವಿಜಯನಗರದ ಲಂಬಾಣಿ ನೃತ್ಯ ಆಕರ್ಷಕ ಉಡುಪು ಮತ್ತು ವಿಶಿಷ್ಟ ನೃತ್ಯದಿಂದ ಮನಸೆಳೆದವು. ತಮಟೆ-ನಗಾರಿಯಲ್ಲಿ ಹೆಣ್ಣು ಮಕ್ಕಳು ಪ್ರಧಾನವಾಗಿ ಪಾಲ್ಗೊಂಡು ಕಾರ್ಯಕ್ರಮಕ್ಕೆ ಇನ್ನಷ್ಟು ಮೆರುಗು ತಂದರು. ಅವರು ನುಡಿಸಿದ ವೈವಿಧ್ಯಮಯ ನಗಾರಿ ನಾದಕ್ಕೆ ಪ್ರೇಕ್ಷಕರು ಹೆಜ್ಜೆ ಹಾಕಿದರು.

ರಾಯಚೂರಿನ ಡೊಳ್ಳು ಕುಣಿತ, ಚಿಕ್ಕಮಗಳೂರಿನ ವೀರಗಾಸೆ, ವಿಜಯನಗರ ಜಿಲ್ಲೆಯ ದೊಡ್ಡಾಟ, ಮೈಸೂರು, ಮಂಡ್ಯ, ಚಾಮರಾಜನಗರ ಪ್ರತಿನಿಧಿಸುವ ಬೀಸು ಕಂಸಾಳೆ, ರಾಮನಗರ ಸುತ್ತಮುತ್ತ ಕಾಣಿಸುವ ಪಟ ಕುಣಿತ, ಮಂಡ್ಯದ ವಿಶಿಷ್ಟ ಕಲೆ ಪೂಜಾ ಕುಣಿತ, ಉತ್ತರ ಕರ್ನಾಟಕದ ಕರಡಿ ಮಜಲು ಕಲಾಮೇಳದಲ್ಲಿ ಪಾಲ್ಗೊಂಡಿದ್ದವು. ಕರಾವಳ

ಸಂಗೀತ, ಶ್ರೋತೃಗಳಿಗೆ ವಂಚಿಸಬಾರದು: ಪರ್ವೀನ್ ಸುಲ್ತಾನಾ

ಸಂದರ್ಶನ: ಪ್ರತಿಭಾ ನಂದಕುಮಾರ್

ಬೇಗಂ ಪರ್ವೀನ್ ಸುಲ್ತಾನಾ ಹೆಸರು ಕೇಳಿದ ತಕ್ಷಣ 'ಕೇಳಿಸುವುದು' ಅವರ ಧ್ವನಿಯ ತಾರಕ, ಹಾಡಿನ ತನ್ಮಯತೆ, ಶುದ್ಧತೆ ಮತ್ತು ವೈವಿಧ್ಯತೆ. ರಾಗದ ಲಯದಲ್ಲಿ ಸರಾಗವಾಗಿ ಚಲಿಸುತ್ತಾ ನಿಧಾನಗತಿಯ ಧ್ಯಾನದಿಂದ ಕ್ಷಣಾರ್ಧದಲ್ಲಿ ಸ್ಫೋಟಗೊಂಡು ಭೋರ್ಗರೆವ ಜಲಪಾತದಂತೆ ಕೇಳುಗರನ್ನು ಸಂಪೂರ್ಣವಾಗಿ ಆವರಿಸಿಕೊಂಡುಬಿಡುವ ಮಾಂತ್ರಿಕತೆ. 'ಹಾಡುವುದೇ ನನಗೆ ಪಾರ್ಥನೆ' ಎಂದು ನಂಬಿಕೊಂಡ ಅವರು, ಶಾಸ್ತ್ರೀಯ ಖಯಾಲ್ ಆಗಿರಲಿ, ಭಜನೆಯಾಗಲೀ ಅಥವಾ ಕಾವ್ಯಾತ್ಮಕ ಠುಮ್ರಿಯಾಗಿರಲಿ ಆಧುನಿಕ ಹಿಂದೂಸ್ತಾನಿ ಸಂಗೀತದ ಅಭಿಷಿಕ್ತ ಸಾಮ್ರಾಜ್ಞಿ.

ಬೇಗಂ ಪರ್ವೀನ್ ಸುಲ್ತಾನಾ ಅವರಿಗೆ 'ದಕ್ಷಿಣ ಭಾರತದಲ್ಲಿ ಸಂಗೀತವನ್ನು ದೇವರನ್ನು ಆರಾಧಿಸುವಷ್ಟೇ ತೀವ್ರವಾಗಿ ಪ್ರೀತಿಸುತ್ತಾರೆ' ಎನ್ನುವ ಮೆಚ್ಚುಗೆ. ಉತ್ತಮ ಗುಣಮಟ್ಟದ ರಸಾಸ್ವಾದನೆಯ ಪ್ರೇಕ್ಷಕರಿದ್ದರೆ ಅವರಿಗಾಗಿ ಹೃದಯತುಂಬಿ ಹಾಡುವ ಗೀಳು. ಭೂಮಿಜಾ ಸಂಸ್ಥೆ ಮಾ.15 ರಂದು ಏರ್ಪಡಿಸಿದ್ದ ಹೋಳಿ ಸಂಗೀತ ಕಛೇರಿಗಾಗಿ ಬೆಂಗಳೂರಿಗೆ ಬಂದಿದ್ದ ಅವರು 'ಭಾನುವಾರದ ಪುರವಣಿ' ಜೊತೆಗೆ ಮಾತನಾಡಿದ್ದಾರೆ.

● ನೀವು ಹನ್ನೆರಡನೇ ವಯಸ್ಸಿನಿಂದ ಸಾರ್ವಜನಿಕ ಕಛೇರಿ ನೀಡುತ್ತಿದ್ದೀರಿ. ಈಗ 74ನೆ ವಯಸ್ಸಿನಲ್ಲೂ ಅಷ್ಟೇ ಉತ್ಸಾಹದಲ್ಲಿದ್ದೀರಿ. ಯಾವುದೇ ಪ್ರದರ್ಶನ ಕಲೆಯ ಮೇಲೆ ವಯಸ್ಸು ಪ್ರಭಾವ ಬೀರುವುದಿಲ್ಲವೇ?

ನಾನು ಇದನ್ನು ದೇವರ ಕೃಪೆ ಎಂದೇ ಭಾವಿಸುತ್ತೇನೆ. ಅದಕ್ಕಾಗಿ ವಂದನೆ ಸಲ್ಲಿಸಲು ನನ್ನಲ್ಲಿ ಮಾತುಗಳೇ ಇಲ್ಲ. ಸಂಗೀತವೇ ನನ್ನ ಪ್ರಾರ್ಥನೆ. ದೇವರು ನಮಗೆ ಪ್ರತಿಭೆಯನ್ನು ನೀಡಿದರೆ ನಾವು ಅದನ್ನು ಬಳಸಿಕೊಳ್ಳಬೇಕು, ಪೋಷಿಸಬೇಕು. ಸತತ ಅಭ್ಯಾಸವೇ ಕಲಾವಿದರನ್ನು ಪರಿಪೂರ್ಣತೆಯತ್ತ ಕೊಂಡೊಯ್ಯುತ್ತದೆ. ಒಮ್ಮೆ ನಾನು ತಂಬೂರಿ ಹಿಡಿದು ಅಭ್ಯಾಸಕ್ಕೆ ಕೂತೆನೆಂದರೆ ಬೇರೆಯೇ ಲೋಕಕ್ಕೆ ಹೋಗಿಬಿಡುತ್ತೇನೆ. ಅದೇ ಸಾಧನೆ. ಸಂಗೀತದ ಶುದ್ಧತೆಯನ್ನು ಕಾಪಾಡಿಕೊಳ್ಳಲು ನಿರಂತರ ಅಭ್ಯಾಸ ಅಗತ್ಯ. ಅದು ನಿಮ್ಮ ಫಿಕ್ಸೆಡ್ ಡೆಪಾಸಿಟ್ ಥರ. ಅಗತ್ಯವಿದ್ದಾಗ ಅದರಿಂದ ಡ್ರಾ ಮಾಡಿಕೊಳ್ಳಬಹುದು. ರಿಯಾಜ್ ಮಾಡುವಾಗಲೂ ನಾನು ಬೇಡಿಕೊಳ್ಳುವುದೊಂದೇ; ದೇವರೇ ನನ್ನ ಮಾನ ಉಳಿಸು- (ಮೇರೇ ಇಜ್ಜತ್ ರಖನಾ). ಹಾಗೆ ಸಂಪೂರ್ಣ ಶರಣಾಗತಿಯಲ್ಲೇ ಸಾಧನೆಯ ಸತ್ವ ಇದೆ.

> ಬೇಗಂ ಪರ್ವೀನ್ ಸುಲ್ತಾನಾ ಅವರಿಗೆ 26ನೇ ವಯಸ್ಸಿನಲ್ಲಿ ಪದ್ಮಶ್ರೀ, 36ನೇ ವಯಸ್ಸಿನಲ್ಲಿ ಮಿಯಾ ತಾನ್ ಸೇನ್ ಪ್ರಶಸ್ತಿ ಮತ್ತು 64ನೇ ವಯಸ್ಸಿಗೆ ಪದ್ಮಭೂಷಣ ಪುರಸ್ಕಾರ ಸಂದಿದೆ.

● ಹಾಗಿದ್ದೂ ಯಾಕೆ ನೀವು ಪ್ರತೀ ಕಛೇರಿಯೂ ಒಂದು ಸವಾಲು ಎನ್ನುತ್ತೀರಿ?

ಹೌದು. ಪ್ರತೀ ಕಛೇರಿಯೂ ಒಂದು ಸವಾಲೇ. ನನಗೆ ವಿದ್ಯೆ ಧಾರೆ ಎರೆದ ಗುರುಗಳು, ನನಗಾಗಿ ತನ್ನ ಬದುಕನ್ನೇ ಮೀಸಲಿಟ್ಟ ತಾಯಿ, ನಾನು ನಂಬುವ ದೇವರು ಎಲ್ಲವೂ ನನ್ನ ಸಾಧನೆಯ ಹಿಂದಿರುವ ಶಕ್ತಿಗಳು. ಅವರೆಲ್ಲರೂ 'ಹೋಗು ಹಾಡು' ಎಂದು ಆಶೀರ್ವದಿಸಿರುವುದರಿಂದ ನಾನು ಈ ಮಟ್ಟ ತಲುಪಿದ್ದೇನೆ. ಅವರಿಗೆ ಕೆಟ್ಟ ಹೆಸರು ತರಬಾರದಲ್ಲವೇ? ಉತ್ತಮ ಗುರು ಸಿಗುವುದು ಎಷ್ಟು ದುರ್ಲಭವೋ ಅಷ್ಟೇ ದುರ್ಲಭ ಉತ್ತಮ ಶಿಷ್ಯರು ಸಿಗುವುದು. ಆ ವಿಷಯದಲ್ಲಿ ನಾನು ಬಹಳ ಅದೃಷ್ಟವಂತೆ.

● ನೀವು ಅನೇಕ ಸಂದರ್ಭಗಳಲ್ಲಿ ಸಂಗೀತದ ಶುದ್ಧತೆಯ ಬಗ್ಗೆ ಮಾತಾಡಿದ್ದೀರಿ. ಸದಾ ಪುನರ್ ವ್ಯಾಖ್ಯಾನಕ್ಕೆ ಒಳಗೊಳ್ಳುತ್ತಿರುವ ಕಲೆಯಲ್ಲಿ 'ಶುದ್ಧತೆ' ಅಂದರೇನು?

ಭಾರತೀಯ ಸಂಗೀತದಲ್ಲಿ ಪ್ರತೀ ಸ್ವರವು ವ್ಯಾಖ್ಯಾನಗೊಂಡಿದೆ. ಹಾಡುವಾಗ ರಾಗ ತಾಳ ಸ್ಪಷ್ಟವಾಗಿದ್ದರೆ ಮಾತ್ರ ಸಂಗೀತಾಭಿವ್ಯಕ್ತಿ ಸಾಧ್ಯ. ನನ್ನ ಶ್ರೋತೃಗಳು ಕಛೇರಿಯಿಂದ ಮರಳುವಾಗ ಸಂತೋಷವಾಗಿ ಸಂಗೀತವನ್ನು ತಮ್ಮ ಎದೆಯಲ್ಲಿಟ್ಟುಕೊಂಡು ಹೋಗಬೇಕು. ನಾನೇ ಶ್ರೋತೃಗಳನ್ನು ವಂಚಿಸಿದರೆ, ಸಂಗೀತಕ್ಕೆ ಅಪಚಾರ ಮಾಡಿದರೆ ಅದು 'ಅಶುದ್ಧ'. ಅದಕ್ಕೇ ನಾನು ಸದಾ ಹೇಳುವುದು ಕಲಾವಿದರು ಸಂಗೀತಕ್ಕೂ ಶ್ರೋತೃಗಳಿಗೂ ವಂಚಿಸಬಾರದು ಅಂಥ.

● ನೀವು ಹಾಡುವುದೇ ಪಾರ್ಥನೆ ಎನ್ನುತ್ತೀರಿ, ಮತಧರ್ಮಗಳನ್ನು ಮೀರಿ ಭಜನೆಗಳನ್ನೂ ಹಾಡುತ್ತೀರಿ, ದೇವಿ ಭವಾನಿ ಹಾಡುವಾಗ ಶಕ್ತಿ ಆವರಿಸಿಕೊಳ್ಳುತ್ತದೆ ಅನ್ನುತ್ತೀರಿ, ಹಾಗಾದರೆ ನಾಸ್ತಿಕರು ಸಂಗೀತಗಾರರಾಗಬಹುದೇ?

ನನಗೆ ಗೊತ್ತಿಲ್ಲ, ನೀವು ಯಾರಾದರೂ ನಾಸ್ತಿಕ ಕಲಾವಿದರನ್ನೇ ಕೇಳಬೇಕು! ಸಂಗೀತದ ಸ್ವರಗಳನ್ನು ಗುರುಮುಖೇನ ಕಲಿಯಬೇಕು. ಪ್ರತಿ ಸ್ವರವೂ ದೈವೀಕ. ವ್ಯವಸ್ಥಿತವಾಗಿ ನಿರೂಪಿಸುವ ಕಲೆ ಮತ್ತು ಬರೆಯುವ ಕಲೆ ಎರಡೂ ಶ್ಲಾಘನೀಯ. ಬಾಲಕಿಯಿಂದ ಮಕ್ಕಳಿಗಾಗಿ ಮತ್ತು ಹೆತ್ತವರಿಗಾಗಿ ಎಂಬಂತೆ ಈ ಪುಸ್ತಕವನ್ನ ರೂಪಿಸಲಾಗಿದೆ. ಈಕೆ ಪ್ರಯತ್ನವೆಂದು ಹೇಳಿದ್ದರೂ ಸರಳ ಕಥನಶೈಲಿ ಗಮನ ಸೆಳೆಯುತ್ತದೆ.

ಅವುಗಳ ಜೊತೆ ವ್ಯವಹರಿಸುವುದು ಕೂಡಾ ದೈವೀಕ ಅನುಭವ. ಸರಿಯಾದ ಲಯ ತಾಳ ರಾಗ ಜ್ಞಾನವಿದ್ದಾಗ ಮಾಂತ್ರಿಕತೆ ಸೃಷ್ಟಿಯಾಗುತ್ತದೆ. ನಾನು ಹಿಂದುಸ್ತಾನಿ ಕಲಾವಿದೆ. ಬಾಲಮುರಳಿ ಕೃಷ್ಣ ಅವರು ಕರ್ನಾಟಕ ಸಂಗೀತ ಪ್ರವೀಣರು. ಅವರು ನನ್ನ ಸಂಗೀತವನ್ನು ಬಹಳ ಮೆಚ್ಚಿಕೊಂಡಿದ್ದರು. ಅವಕಾಶವಾದಾಗಲೆಲ್ಲ ನಾವು ಭೇಟಿಯಾಗುತ್ತಿದ್ದೆವು, ಸಂಗೀತದ ಬಗ್ಗೆ ಗಂಟೆಗಟ್ಟಲೆ ಚರ್ಚಿಸುತ್ತಿದ್ದೆವು. ಇಂತಹ ಸಂಗತಿಗಳನ್ನೆಲ್ಲ ಸಾಧಾರಣ ಅಂತ ನಾನು ಅಂದುಕೊಳ್ಳುವುದಿಲ್ಲ. ನನಗೆ ಸಂಗೀತ ಅಲೌಕಿಕ ಅನುಭವ, ಪಾರ್ಥನೆ, ಸಾಧನೆ. ಅದು ಎಲ್ಲ ಲೌಕಿಕ ಅನುಭವಗಳನ್ನು ಮೀರಿದ್ದು. ಅದಲ್ಲದೆ ಅರೆ ಮನಸ್ಸಿನಿಂದ ಬೇಕಾಬಿಟ್ಟಿಯಾಗಿ, ಅಂಗಚೇಷ್ಟೆಗಳನ್ನು ಮಾಡುತ್ತಾ ಹಾಡುವುದು, ಪಕ್ಕವಾದ್ಯದವರನ್ನು ಕಡೆಗಣಿಸುತ್ತಾ ಹಾಡುವುದು... ಇವೆಲ್ಲ ಸರಿಯಲ್ಲ.

● ಒಂದು ಸಂದರ್ಭದಲ್ಲಿ ನೀವು ಹಿಪ್‌ಹಾಪ್ ಹೇಳಿದ್ದೀರಿ, ಪಾಪ್ ಸಂಗೀತವನ್ನೂ ಕೇಳುತ್ತೀರಿ....

ಹೌದು, ಅವರು ತಾಳ ರಿದಮ್ ಹಿಡಿದು ಮಾಡುವ ಪ್ರಯತ್ನಗಳು ನನಗಿಷ್ಟ. ಲೋಕದಲ್ಲಿ ಎಲ್ಲಾ ಸಂಗೀತದ ಮೂಲ ಏಳು ಸ್ವರಗಳೇ... ಯಾವುದೇ ಪ್ರಯತ್ನದಲ್ಲಿ ಪ್ರಾಮಾಣಿಕತೆ ಇರಬೇಕು ಅಷ್ಟೇ.

● ಒಂದು ಸಂದರ್ಶನದಲ್ಲಿ ಪಂಡಿತ್ ಅರವಿಂದ ಪಾರಿಖ್ ಅವರು ನಿಮಗೆ 'ದೇವಿ ಭವಾನಿ ಹಾಡುತ್ತೀರಾ, ನಿಮಗೆ ಮೂಡ್ ಇದ್ದರೆ...' ಅಂದಾಗ ನೀವು 'ನಾನು ಹಾಡಲು ತೊಡಗಿದರೆ ಮೂಡ್ ತಾನಾಗಿ ಬರುತ್ತದೆ' ಎಂದಿರಿ. ಅದಕ್ಕೆ ಅವರು 'ನೀವು ಭವಾನಿಯೂ ಹೌದು ದಯಾನಿಯೂ ಹೌದು' ಅಂದರು....

(ನಗುತ್ತಾ) ಹೌದು... ಎಂಥ ಒಳ್ಳೆ ಕಾಂಪ್ಲಿಮೆಂಟ್ ಅದು! ನನ್ನ ಹಾಡುಗಾರಿಕೆ ಕೇಳಲು ಅಭಿಜ್ಞರು ಮಾತ್ರವಲ್ಲ, ಎಂದಿಗೂ ಶಾಸ್ತ್ರೀಯ ಸಂಗೀತ ಕೇಳದೇ ಇರುವಂತಹವರೂ ಬಂದು ಸಂಗೀತದ ರಸಾನುಭವ ಪಡೆಯಬೇಕು ಎನ್ನುವುದೇ ನನ್ನ ಗುರಿ. ❖

ಮೊದಲ ಓದು

ಅಕ್ಷರಲೋಕದಿಂದ ಅಂತರಿಕ್ಷದವರೆಗೆ

ಪು: 84
₹270

ಆರುಷ್‌ನ ಅಕ್ಷರ ಲೋಕ
ಲೇ: ಸೂರ್ಯಕಾಂತ ಗುಣಕಿಮಠ
ಪ್ರ: ಪವಿತ್ರವಾಣಿ ಪ್ರಕಾಶನ
ಸಂ: **98806 25650**

ಪು: 36
₹40

ಟಿಫಿನ್ ಬಾಕ್ಸ್
ಲೇ: ಕೆ. ಶಿವಲಿಂಗಪ್ಪ ಹಂದಿಹಾಳು
ಪ್ರ: ಅಭಿನವ ಪ್ರಕಾಶನ
ಸಂ: **9448804905**

ಪು: 50
₹210

ಅಂತರಿಕ್ಷದಲ್ಲಿ ವಿಹಾ
ಲೇ: ವಸು ವತ್ತಲೆ
ಪ್ರ: ಅವ್ಯಕ್ತ ಪ್ರಕಾಶನ
ಸಂ: **8792693438**

ಪು: 284
₹270

ಅಯ್ದ ಮಕ್ಕಳ ಕವನಗಳು
ಲೇ: ಮೇಟಿಕೆರೆ ಹಿರಿಯಣ್ಣ
ಪ್ರ: ಸಪ್ನ ಬುಕ್ ಹೌಸ್
ಸಂ: **080 4011 4455**

1 ಬೇಸಿಗೆ ರಜೆಯಲ್ಲಿ ನಡುನೆತ್ತಿ ಸುಡುವ ಬಿಸಿಲಿರುವಾಗ ಮನೆಯಲ್ಲಿಯೇ ಮಕ್ಕಳನ್ನಿರಿಸಿಕೊಂಡು ಓದುವ ಸುಖ ನೀಡಲು ಹಲವಾರು ಪುಸ್ತಕಗಳು ಲಭ್ಯ ಇವೆ. 'ಆರುಷ್‌ನ ಅಕ್ಷರಲೋಕ' ಪುಸ್ತಕದಲ್ಲಿ ಕಾಗುಣಿತಗಳಲ್ಲಿಯೇ ಕವನಗಳನ್ನು, ಕವನ ಕಥನಗಳನ್ನು ಹೆಣೆಯಲಾಗಿದೆ. ಚಡಚಣದಲ್ಲಿ ಚಾಮಿ ಮೇಷ್ಟ್ರು ಎನ್ನುತ್ತಲೇ ಚದಿಂದ ಚಃದವರೆಗೂ ಕಥನಗಳು ಸಾಗುತ್ತವೆ. ಎಲ್ಲ ಅಕ್ಷರ ಮಾಲೆಯನ್ನೇ ಇರಿಸಿಕೊಂಡು ಕಥನಗೀತೆಗಳನ್ನು ರಚಿಸಲಾಗಿದೆ. ಲೇಖಕ ಇದನ್ನು ತಮ್ಮ ಮೊಮ್ಮಗನಿಗೆ ಎಂದು ಬರೆದಿದ್ದರೂ ಎಲ್ಲ ಕನ್ನಡದ ಮಕ್ಕಳಿಗೆ ಲಭ್ಯವಾಗಲಿ ಎಂದು ಆಕರ್ಷಕವಾದ ಚಿತ್ರಗಳೊಂದಿಗೆ ಅತ್ಯುತ್ತಮ ಗುಣಮಟ್ಟದ ಕಾಗದದಲ್ಲಿ ಈ ಪುಸ್ತಕವನ್ನು ಪ್ರಕಟಿಸಿದ್ದಾರೆ. ಸಹಜವಾಗಿ ಕತೆಗಳು ನೆನಪಿರಿಸಿಕೊಳ್ಳಲು, ಕವಿತೆಗಳನ್ನು ಬಾಯಿಪಾಠ ಮಾಡಲು, ಜೊತೆಗೆ ಕನ್ನಡದ ಅಕ್ಷರಮಾಲೆಯನ್ನೂ ನಲಿಯುತ್ತಲೇ ಕಲಿಯಲು ಪುಸ್ತಕ ನೆರವಾಗುತ್ತದೆ. ಈ ಅಕ್ಷರ ಲೋಕದಲ್ಲಿ ಪ್ರತಿ ಅಕ್ಷರವೂ ಪಾತ್ರವಾಗಿ ಕತೆ ಹೇಳುತ್ತ ಹೋಗುತ್ತದೆ. ಮಕ್ಕಳ ಕಲ್ಪನಾಶಕ್ತಿಯ ಹರಿವನ್ನು ಹೆಚ್ಚಿಸುತ್ತಲೇ ಹೆತ್ತವರೂ ಮಕ್ಕಳೊಂದಿಗೆ ಸಮಯ ಕಳೆಯಲು ಅನುಕೂಲವಾಗುವಂತೆ ಇದನ್ನು ವಿನ್ಯಾಸಗೊಳಿಸಲಾಗಿದೆ.

2 ಅಕ್ಷರಲೋಕದಿಂದ ಆರಂಭವಾಗುವ ಓದು, 'ಟಿಫಿನ್ ಬಾಕ್ಸ್' ಎಂಬ ಸರಳ ಮಕ್ಕಳ ಕತೆಗೆ ಸೆಳೆದೊಯ್ಯಬಹುದು. ದೊಡ್ಡ ಗಾತ್ರದ ಅಕ್ಷರಗಳಲ್ಲಿ, ಚಂದದ ಚಿತ್ರಗಳೊಂದಿಗೆ ಶಾಲಾ ಮಕ್ಕಳ ಬುತ್ತಿಯೂಟದಿಂದ ಸೌಹಾರ್ದದ ಜೀವನ, ಪರಸ್ಪರ ಗೌರವ ಹೇಳುತ್ತ ಹೋಗುತ್ತದೆ.

ಸ್ನೇಹದಲ್ಲಿ ಆಸೆ, ನಿರಾಸೆ, ಭಿನ್ನ ಧರ್ಮಗಳಿದ್ದರೂ ಬುತ್ತಿಯೂಟವೊಂದು ಅದ್ಹೇಗೆ ಮಕ್ಕಳಲ್ಲಿ ಪ್ರೀತಿ, ಕಾಳಜಿಯನ್ನು ಕಾಪಿಡುತ್ತದೆ ಎಂದು ಈ ಸಣ್ಣದೊಂದು ಪುಸ್ತಕ ತಿಳಿಸಿಕೊಡುತ್ತದೆ. ಸಹಸ್ರಮಾನಕ್ಕಿಂತ ಮೊದಲು ಶಾಲೆಗೆ ಹೋದವರಿಗೆಲ್ಲ ಇದು ತಮ್ಮದೇ ಶಾಲಾದಿನಗಳನ್ನು ನೆನಪಿಸಿದರೂ ಅಚ್ಚರಿ ಏನಿಲ್ಲ. ಈ ಕತೆಯನ್ನು ಹೇಳುತ್ತಲೇ ಹಲವಾರು ಉಪಕತೆಗಳೂ ಹುಟ್ಟಬಹುದು. ಮಕ್ಕಳ ಈಗಿನ 'ಲಂಚ್ ಬ್ರೇಕ್'ನ ಕತೆಗಳಿಗೂ ಕಿವಿಯಾಗಬಹುದು.

3 ಇನ್ನು ಫೋನು ಕಸಿದು, ಕನ್ನಡದ ಹಾಡುಗಳನ್ನು ಹೇಳಿಕೊಡುವುದಾದರೆ ಮೇಟಿಕೆರೆ ಹಿರಿಯಣ್ಣ ಅವರ ಆಯ್ದ ಮಕ್ಕಳ ಕವನಗಳು ಸಹಾಯ ಮಾಡಬಹುದು. ಆದಿ, ಅಂತ್ಯ ಪ್ರಾಸಗಳಿರುವ ಈ ಶಿಶು ಗೀತೆಗಳನ್ನು ಹಾಡಿಕೊಂಡೂ ಹೇಳಿಕೊಡಬಹುದು. ಅಪ್ಪ, ಅಮ್ಮ, ಬಾಂಧವ್ಯ, ಸಂತೆ, ಸರ್ಕಸ್‌ನಂಥ ಸುತ್ತಲಿನ ಪರಿಸರ, ಹಕ್ಕಿ, ಪ್ರಾಣಿ ಮುಂತಾದ ಜೀವಜಗತ್ತು ಎಲ್ಲವೂ ಕವನಗಳ ವಿಷಯವಸ್ತುಗಳಾಗಿವೆ. ಮಕ್ಕಳನ್ನು ಸದಾ ಬೆರಗುಗೊಳಿಸುವ ಸೂರ್ಯ ಚಂದ್ರರೂ ಇಲ್ಲಿದ್ದಾರೆ. ಕಪ್ಪೆಯಿಂದ ಆನೆಯವರೆಗೂ ಮಕ್ಕಳು ಸೋಜಿಗದಿಂದ ನೋಡುವ ಎಲ್ಲ ಪ್ರಾಣಿಗಳೂ ಇಲ್ಲಿ ಕವನದ ವಸ್ತುಗಳಾಗಿವೆ. ಪುಟ್ಟ ಮಕ್ಕಳಿಗೆ ಹಾಡು ಕಲಿಸಿ, ಅವರಿಂದ ಹೇಳಿಸಿ ಆನಂದಿಸುವಷ್ಟು ಸಮಯವಿದ್ದರೆ ಇದು ಸಂಗ್ರಹಿಸಬಹುದಾದ ಪುಸ್ತಕವಾಗಿದೆ.

4 ಚಂದದ ಚಿತ್ರಗಳೊಂದಿಗೆ ಖಗೋಳ ವಿಜ್ಞಾನದಂಥ ವಿಷಯವನ್ನೂ ಸರಳವಾಗಿ ನಿರೂಪಿಸುತ್ತದೆ. ಕತೆ ಕೇಳುತ್ತ, ಓದುತ್ತ ಮಕ್ಕಳು ಆಕಾಶದತ್ತ ಕಣ್ಣೆಡುವಂತೆ ಮಾಡುವ ಪುಸ್ತಕ 'ಅಂತರಿಕ್ಷದಲ್ಲಿ ವಿಹಾ'. ರೋಬೋಟ್‌ಗಳ ಬಗ್ಗೆ, ಅನ್ಯಗ್ರಹ ಜೀವಿಗಳ ಕುರಿತು ಹೇಳುತ್ತ ಮಕ್ಕಳ ಮನಸಲ್ಲಿ ಕುತೂಹಲ ಹುಟ್ಟಿಸುವಂತೆ ಮಾಡುತ್ತದೆ. ಓದುತ್ತ ಓದುತ್ತ ಹಲವಾರು ಪ್ರಶ್ನೆಗಳನ್ನು ಕೇಳುವ ಮಕ್ಕಳಲ್ಲಿ ಅಂತರಿಕ್ಷವೆಂಬ ಸೋಜಿಗ ಸೆಳೆದಿಡುತ್ತದೆ. ರೋಬೋಟ್ ತಯಾರಿ ಅದರ ಜಾಣ್ಮೆ, ಏಲಿಯನ್‌ಗಳ ಭಾಷೆ, ರುಚಿ ಹೀಗೆ ಮುಗ್ಧತೆಯನ್ನು ಉಳಿಸಿಕೊಂಡೂ, ವಿಜ್ಞಾನದ ಪಾಠವನ್ನೂ ಮಾಡಲಾಗಿದೆ. ಆಕರ್ಷಕ ಚಿತ್ರಗಳು ಯಾವ ವಯೋಮಾನದವರಾದರೂ ಪುಸ್ತಕ ಹಿಡಿದು ಕೂರುವಂತೆ ಮಾಡುತ್ತದೆ.

5 ಇವೆಲ್ಲವೂ ಹಿರಿಯರು ಮಕ್ಕಳಿಗಾಗಿ ಬರೆದು ಪುಸ್ತಕಗಳು. 'ನಾನೂ ಕಾಶ್ಮೀರಕ್ಕೆ ಹೋಗಿದ್ದೆ' ಎಂಬ ಪ್ರವಾಸ ಕಥನವನ್ನು ಹತ್ತು ವರ್ಷದ ಬಾಲಕಿ ಹಿರಿಯರೂ ಓದುವಂತೆ ಬರೆದಿದ್ದಾಳೆ. ತಾನು ಭೇಟಿ ನೀಡಿದ ಪ್ರದೇಶಗಳ ವಿವರಗಳನ್ನು ಹೇಳುತ್ತ ನಡುನಡುವೆ ತನ್ನ ಅನುಭವವನ್ನೂ ಕತೆ ಮಾಡಿ ಹೇಳಿದ್ದಾಳೆ. ಪುಟ್ಟ ಮಗುವೊಂದು ತಾ ಕಂಡ ಸೋಜಿಗಗಳನ್ನೆಲ್ಲ ಹೇಳುವ ಧಾವಂತ ಇದ್ದರೂ ನಮ್ರತಾ ಇಲ್ಲಿ ತುಸು ವೇಗಕ್ಕೆ ಕಡಿವಾಣ ಹಾಕಿ ಕತೆ ಹೇಳಲು ಯತ್ನಿಸಿದ್ದಾಳೆ. ತಾನು ಕಂಡ ಪ್ರದೇಶಗಳ ವಿವರಗಳನ್ನು ಬರೆದುಕೊಂಡು, ಅವನ್ನು

ಪು: 78
₹100

ನಾನೂ ಕಾಶ್ಮೀರಕ್ಕೆ ಹೋಗಿದ್ದೆ
ಲೇ:ನಮ್ರತಾ ಕತ್ತಿ
ಪ್ರ: ಬೆರಗು ಪ್ರಕಾಶನ
ಸಂ: **8970454639**

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಕಸುಗಾಯ್ತನ

ಕಸುಗಾಯ್ತನ (ನಾ). ಹೀಚು; ಅಪಕ್ವತೆ
(ಕಸುಗಾಯ್ + ತನ)

ವಿಭೀಷಣನ ಪುತ್ರಿ ಅನಲೆಯು ತನ್ನ ಚಿಕ್ಕ ದೊಡ್ಡಪ್ಪ ಕುಂಭಕರ್ಣನು ಯುದ್ಧದಲ್ಲಿ ಮಡಿದ ನಂತರ ಸೀತೆಯ ಬಳಿಗೆ ಅಶೋಕವನಕ್ಕೆ ಬರುವಳು. ಸೀತೆಯೊಡನೆ ಮಾತನಾಡುತ್ತ ತನ್ನ ದೊಡ್ಡಪ್ಪ ಈಗ ತನ್ನ ಹೀಚು, ಅಪಕ್ವತೆಯನ್ನು ಕಳೆದುಕೊಂಡಿರುವನು. ಅವನು ಹಣ್ಣಾಗುತ್ತಿರುವ ಸೂಚನೆ ಕಂಡು ಬರುತ್ತಿದೆ ಎಂದು ಹೇಳುವಳು. ಅವಳ ಆ ಭಾವವನ್ನು ವ್ಯಕ್ತಪಡಿಸುವಾಗ ಕವಿಯು 'ಕಸುಗಾಯ್ತನ' ಎಂಬ ಪದ ಬಳಸಿದ್ದಾರೆ.

ದಶಗ್ರೀವನಾತ್ಮಮುಂ,
ತನ್ನ ಕಸುಗಾಯ್ತನದೊಗರ್ ಕಳೆದು, ಪಣ್ಣನಕೆ
ತಿರುಗುತಿಪೆಳಲೆಂದು ಸೂಚನೆ ತೋರುತಿಹುದೆನಗೆ.

ಹೆಗ್ಗೆಚ್ಚು

ರಾಣಾಪ್ರತಾಪ ಸಿಂಹನ ರಾಜ್ಯದ ಮೇಲೆ ಅಕ್ಬರ್‌ನ ಸೈನಿಕರು ದಾಳಿ ಮಾಡುವರು. ಆಗ ಪ್ರತಾಪಸಿಂಹನ ಸೈನಿಕರು ತಮ್ಮ ನಾಡನ್ನು ಉಳಿಸಿಕೊಳ್ಳಲು ಸ್ವಾತಂತ್ರ್ಯದೀಪ್ತಿಗೊಳಗಾಗಿ ಹೋರಾಡುವರು. ಸ್ವಾಭಿಮಾನಿಗಳಾದ ಅವರ ಹೋರಾಟದ ಸಾಹಸವನ್ನು ಚಿತ್ರಿಸುವಾಗ ಕುವೆಂಪು ಅವರು 'ಹೆಗ್ಗೆಚ್ಚು' ಪದ ಪ್ರಯೋಗಿಸಿದ್ದಾರೆ. 'ಹೆಗ್ಗೆಚ್ಚು' ಹಿರಿದಾದ ಉದ್ದೇಶದ ದೊಡ್ಡ ಧೈರ್ಯ ಎಂಬ ಅರ್ಥವನ್ನು ವ್ಯಂಜಿಸುತ್ತದೆ.

'ಪಾರತಂತ್ರ್ಯದ ಸೊಕ್ಕಾ ಕಡೆಗೆ!
ಸ್ವಾತಂತ್ರ್ಯದ ಹೆಗ್ಗೆಚ್ಚೇ ಕಡೆಗೆ!'

ಬೆಚ್ಚಲ್

ಬೆಚ್ಚಲ್ (ನಾ). ಬೆದರುಗೊಂಬೆ; ಬೆಚ್ಚು

ಕುಂಭಕರ್ಣನ ಆಕ್ರಮಣಕ್ಕೆ ವಾನರರ ಸಹಸ್ರ ಸಹಸ್ರ ಸೈನ್ಯ ನೆಲಕ್ಕೆ ಉರುಳಿತು. ಅವರು ಆಯುಧಗಳನ್ನು ಎಸೆದು ಕಿತ್ತೋಡುತ್ತಿದ್ದರು. ಅದನ್ನು ಕಂಡು ರಾಮಚಂದ್ರನು ಲಕ್ಷ್ಮಣನನ್ನು ಕರೆದನು. ಅಂಗದನಿಗೆ ಧೈರ್ಯ ತುಂಬಿ, ಕಪಿವಾಹಿನಿಯನ್ನು ತಡೆಯಲು ಹೇಳಿದನು. ಅಂಗದನು ಲಕ್ಷ್ಮಣನ ಕರೆ ಕೇಳಿ ತನ್ನ ತಂದೆಯನ್ನು ನೆನೆದು ಕಪಿಸೈನ್ಯವನ್ನು ಕರೆದನು.

'ಬನ್ನಿ ವೀರರೇ ಬನ್ನಿ! ಇದು ಭೂತ ಅಲ್ಲ. ರಾಕ್ಷಸರು ಯುದ್ಧರಂಗದ ಹೊಲದ ರಕ್ಷಣೆಗೆ ಮುಂದಿಟ್ಟುಕೊಂಡು ನುಗ್ಗುತ್ತಿರುವ ಹು

ಉದ್ಯಮಕ್ಕೆ ಬೇಡವಾದ ಚಲನಚಿತ್ರೋತ್ಸವ

ಪ್ರೇಮಕುಮಾರ್ ಹರಿಯಬ್ಬೆ

ಒಂದಿಲ್ಲೊಂದು ವಿವಾದಗಳಿಂದ ಸುದ್ದಿಯಾದ 16ನೇ ಬೆಂಗಳೂರು ಅಂತರರಾಷ್ಟ್ರೀಯ ಚಿತ್ರೋತ್ಸವ ಮುಕ್ತಾಯವಾಗಿದೆ. ಒಂದು ವಾರ 13 ತೆರೆಗಳಲ್ಲಿ ಕಿರುಚಿತ್ರಗಳೂ ಸೇರಿದಂತೆ 250ಕ್ಕೂ ಹೆಚ್ಚು ಭಾರತೀಯ ಹಾಗೂ ಜಾಗತಿಕ ಸಿನಿಮಾಗಳು ಚಿತ್ರೋತ್ಸವದಲ್ಲಿ ಪ್ರದರ್ಶನವಾದವು.

ನೋಂದಾಯಿಸಿಕೊಂಡ ಮೂರು ಸಾವಿರಕ್ಕೂ ಹೆಚ್ಚು ಆಸಕ್ತರು ಸಿನಿಮಾಗಳನ್ನು ಮುಗಿಬಿದ್ದು ನೋಡಿದರು. ಚಿತ್ರೋತ್ಸವ ಯಶಸ್ವಿಯಾಗಿದೆ ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಚಲನಚಿತ್ರ ಅಕಾಡೆಮಿ ಹೇಳಿಕೊಂಡಿವೆ. ಜನ ಮುಗಿಬಿದ್ದು ಸಿನಿಮಾ ನೋಡಿದರು ಎನ್ನುವುದೇ ಮಾನದಂಡವಾದರೆ ಚಿತ್ರೋತ್ಸವ ಯಶಸ್ವಿಯಾಗಿದೆ.

ಚಿತ್ರೋತ್ಸವದ ಭಾಗವಾಗಿ ನಡೆದ ಚರ್ಚೆ, ಸಂವಾದಗಳಲ್ಲಿ ಸಿನಿಮಾಗಳಲ್ಲಿ ಕೃತಕ ಬುದ್ಧಿಮತ್ತೆ ಬಳಕೆ, ಕಲಾತ್ಮಕತೆ, ಸಂಗೀತದ ಮಾಂತ್ರಿಕತೆ, ಪ್ರಾದೇಶಿಕ ಸಿನಿಮಾ ಹಂಚಿಕೆಯಲ್ಲಿನ ಸವಾಲುಗಳು ಹೀಗೆ ಹಲವು ವಿಷಯಗಳ ಕುರಿತು ಚರ್ಚೆಗಳು ನಡೆದವು. ಬೇಸರದ ಸಂಗತಿ ಎಂದರೆ ಕನ್ನಡ ಚಿತ್ರೋದ್ಯಮದ ಜನ ಈ ಚರ್ಚೆಗಳಿಂದ ದೂರ ಉಳಿದದ್ದು! ಅಕಾಡೆಮಿಕ್ ಆಸಕ್ತಿ ಇದ್ದವರು ಇವುಗಳಲ್ಲಿ ಭಾಗವಹಿಸಿದ್ದರು. ಅಚ್ಚರಿ ಎಂದರೆ ಚೆನ್ನೈ ಮೂಲದ ಒಬ್ಬರು ಮಾಡರೇಟರ್ ಆಗಿ ಐದು ಚರ್ಚೆ, ಸಂವಾದಗಳನ್ನು ನಡೆಸಿಕೊಟ್ಟದ್ದು. ಕನ್ನಡ ಚಿತ್ರೋದ್ಯಮದವರಿಗೆ ಈ ವಿಷಯಗಳಲ್ಲಿ ಆಸಕ್ತಿ ಇಲ್ಲವೋ ಅಥವಾ ಚಲನಚಿತ್ರ ಅಕಾಡೆಮಿ ಅವರಿಗೆ ಅವಕಾಶ ಕೊಡಲಿಲ್ಲವೋ ಗೊತ್ತಿಲ್ಲ.

ಚಿತ್ರೋತ್ಸವದಲ್ಲಿ ಪ್ರದರ್ಶನವಾದ ಸಿನಿಮಾಗಳ ಗುಣಮಟ್ಟ ಹೇಗಿತ್ತು? ಸಮಕಾಲೀನ ಜಾಗತಿಕ ಸಿನಿಮಾಗಳನ್ನು ನೋಡಿದವರ ಅನಿಸಿಕೆಗಳೇನು? ಎನ್ನುವುದೂ ಗೊತ್ತಾಗಲಿಲ್ಲ. ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಸೂಕ್ತ ವೇದಿಕೆ ಇರಲಿಲ್ಲ. ಈ ಕುರಿತಂತೆ ಮಾಧ್ಯಮಗಳೂ ಆಸಕ್ತಿ ತೋರಿಸಲಿಲ್ಲ.

ಭಾರತದ ಮೊದಲ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಉದ್ಘಾಟನೆ (1952) ಸಂದರ್ಭದಲ್ಲಿ ಅಂದಿನ ಪ್ರಧಾನಿ ನೆಹರೂ ಅವರು ಜಾಗತಿಕ ಸಿನಿಮಾಗಳ ಜೊತೆಯಲ್ಲಿ ಭಾರತೀಯ ಸಿನಿಮಾಗಳನ್ನು ಪ್ರದರ್ಶಿಸುವುದು ಮತ್ತು ಸಿನಿಮಾ ನಿರ್ಮಾಣದ ಹೊಸ ಆವಿಷ್ಕಾರಗಳನ್ನು ಭಾರತೀಯ ತಂತ್ರಜ್ಞರಿಗೆ ಪರಿಚಯಿಸುವುದು ಚಿತ್ರೋತ್ಸವಗಳ ಉದ್ದೇಶ ಆಗಬೇಕು ಎಂದಿದ್ದರು. ಈ ಹಿನ್ನೆಲೆಯಲ್ಲಿ ಕೇಳಬೇಕೆನಿಸುವ ಪ್ರಶ್ನೆ ಎಂದರೆ ಬೆಂಗಳೂರು ಚಿತ್ರೋತ್ಸವದಿಂದ ಕನ್ನಡ ಚಿತ್ರೋದ್ಯಮಕ್ಕೆ ಏನು ಪ್ರಯೋಜನ ಆಯಿತು?

ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಪ್ರಭುತ್ವ ವಿರೋಧಿ ಹಾಗೂ ಪ್ರಭಾವಶಾಲಿ ರಾಜಕೀಯ ಚಿಂತನೆಗಳನ್ನು ಪ್ರತಿಪಾದಿಸುವ ಹಾಗೂ ಕಲಾತ್ಮಕ ಸಿನಿಮಾಗಳು ಹೆಚ್ಚಾಗಿರುತ್ತವೆ ಎನ್ನುವ ಕಾಲವೊಂದಿತ್ತು. ಈಗ ಚಿತ್ರೋತ್ಸವಗಳ ಆಶಯ, ಉದ್ದೇಶಗಳು ಬದಲಾಗಿವೆ. ಜಗತ್ತಿನ ಪ್ರಮುಖ ದೇಶಗಳಲ್ಲಿ ಸರ್ವಾಧಿಕಾರಿ, ಯುದ್ಧಾಹಿ ಹಾಗೂ ವಿಧ್ವಂಸಕ ಮನಃಸ್ಥಿತಿಯ ಪ್ರಭುತ್ವಗಳಿವೆ. ಜನ, ಜನಾಂಗ ವಿರೋಧಿ ಆಡಳಿತದ ಪರಿಣಾಮಗಳನ್ನು ಕಲಾತ್ಮಕವಾಗಿ ಹೇಳುವ ಸಿನಿಮಾಗಳು ನಿರ್ಮಾಣವಾಗುತ್ತಿವೆ. ಬೆಂಗಳೂರು ಚಿತ್ರೋತ್ಸವದಲ್ಲಿ ಅಂಥ ಸಿನಿಮಾಗಳು ವಿರಳವಾಗಿದ್ದವು.

> 16 ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಜಾಗತಿಕ, ಭಾರತೀಯ ಮತ್ತು ಕನ್ನಡ ಸಿನಿಮಾಗಳು ಪ್ರದರ್ಶನಗೊಂಡವು. ಇವುಗಳನ್ನು ಪ್ರೇಕ್ಷಕರೂ ಮುಗಿಬಿದ್ದು ನೋಡಿದರು. ಆದರೆ ಚಂದನವನದ 'ತಾರೆ'ಗಳು ಚಿತ್ರೋತ್ಸವದಿಂದ ದೂರವೇ ಉಳಿದರು. ಚಿತ್ರೋತ್ಸವ ಉದ್ಯಮ, ಸಿನಿಮಾ ಪ್ರೇಮಿಗಳು ಹಾಗೂ ಅಭಿರುಚಿ ಹೊಂದಿರುವ ಪ್ರೇಕ್ಷಕರದಾಗಬೇಕು.

ಪಣಜಿ ಸೇರಿದಂತೆ ದೇಶದ ಪ್ರಮುಖ ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಜನಪ್ರಿಯ (ಕಮರ್ಷಿಯಲ್) ಸಿನಿಮಾಗಳನ್ನು ಪ್ರದರ್ಶನ ಮಾಡುವ ಪರಿಪಾಟ ಆರಂಭವಾಗಿದೆ. ಭಾರಿ ಬಜೆಟ್ಟಿನ ಸಿನಿಮಾಗಳ ಮೊದಲ (ಪ್ರೀಮಿಯರ್) ಪ್ರದರ್ಶನಕ್ಕೆ ಚಿತ್ರೋತ್ಸವಗಳು ವೇದಿಕೆ ಆಗುತ್ತಿವೆ! ರಾಜಕೀಯ ಅಜೆಂಡಾ ಬಿಂಬಿಸುವ ಸಿನಿಮಾಗಳಿಗೂ ಅವಕಾಶ ಸಿಗುತ್ತಿದೆ. ಬೆಂಗಳೂರು ಚಿತ್ರೋತ್ಸವದಲ್ಲಿ ಕಮರ್ಷಿಯಲ್ ಸಿನಿಮಾಗಳಿದ್ದವು. ರಾಜಕೀಯ ಅಜೆಂಡಾದ ಸಿನಿಮಾಗಳಿರಲಿಲ್ಲ. ಪ್ರದರ್ಶನವಾದ ಸಿನಿಮಾಗಳು ಒಂದಲ್ಲ ಒಂದು ಸಮಸ್ಯೆ ಮೇಲೆ ಬೆಳಕು ಚೆಲ್ಲಿದರೂ ಇನ್ನೂ ಏನೋ ಇರಬೇಕಿತ್ತು. ಗುಣಮಟ್ಟ, ಕಸುಬುದಾರಿಕೆ ಕೊರತೆ ಇದೆ ಇತ್ಯಾದಿ ಗೊಣಗಾಟದ ಮಾತುಗಳು ಕೇಳಿ ಬಂದವು. ಹತ್ತು ಸಿನಿಮಾಗಳನ್ನು ನೋಡಿದರೆ ಅವುಗಳಲ್ಲಿ ಮೂರ್ನಾಲ್ಕು ಉತ್ತಮವಾಗಿವೆ ಅಥವಾ ಪರವಾಗಿಲ್ಲ ಅನ್ನಿಸಿದರೆ ಚಿತ್ರೋತ್ಸವ ಯಶಸ್ವಿ ಆದಂತೆ.

ಕನ್ನಡ ಚಿತ್ರೋದ್ಯಮ ಸಂಕಷ್ಟದಲ್ಲಿದೆ. ನಿರ್ಮಾಣವಾಗುವ ಸಿನಿಮಾಗಳ ಸಂಖ್ಯೆ ಹೆಚ್ಚಾಗಿದ್ದರೂ ಯಶಸ್ಸಿನ ಪ್ರಮಾಣ ಶೇ 5ರಷ್ಟಿದೆ. ಸಿನಿಮಾಗಳನ್ನು ಜನರಿಗೆ ತಲುಪಿಸುವ ವ್ಯವಸ್ಥೆ ಕುಸಿದಿದೆ. ಏಕತೆರೆಯ ಚಿತ್ರಮಂದಿರಗಳು ಮುಚ್ಚುತ್ತಿವೆ. ಮಲ್ಟಿಪ್ಲೆಕ್ಸ್ ತೆರೆಗಳು ಕನ್ನಡ ಸಿನಿಮಾಗಳಿಗೆ ಮತ್ತು ಪ್ರೇಕ್ಷಕರಿಗೆ ಎಟುಕುತ್ತಿಲ್ಲ. ಕನ್ನಡ ಚಿತ್ರೋದ್ಯಮಕ್ಕೆ ನೆರವಾಗುವ ರೀತಿಯಲ್ಲಿ ಚಿತ್ರೋತ್ಸವವನ್ನು ಸಂಘಟಿಸುವ ಕುರಿತು ಸರ್ಕಾರ ಮತ್ತು ಚಲನಚಿತ್ರ ಅಕಾಡೆಮಿ ಯೋಚಿಸಬೇಕು.

17ನೇ ಬೆಂಗಳೂರು ಚಿತ್ರೋತ್ಸವ ಹೇಗಿರಬೇಕು? ಚಿತ್ರೋತ್ಸವ ಜನರ ತೆರಿಗೆ ಹಣದಲ್ಲಿ ನಡೆಯುತ್ತಿದೆ ಎನ್ನುವ ಎಚ್ಚರ ಚಲನಚಿತ್ರ ಅಕಾಡೆಮಿಗೆ ಇರಬೇಕು. ಪ್ರದರ್ಶನಕ್ಕೆ ಅವಕಾಶ ಕೇಳಿ ಸಲ್ಲಿಸುವ ಸಿನಿಮಾಗಳ ಆಯ್ಕೆಯಲ್ಲಿ ಪಾರದರ್ಶಕತೆ ಇರಬೇಕು. ಪೂರ್ವ ತಯಾರಿಗೆ ಕನಿಷ್ಠ ಐದಾರು ತಿಂಗಳ ಕಾಲಾವಕಾಶ ಬೇಕು. ಹಣ ಕೊಡುತ್ತೇವೆ. ನಿಮಗೆ ಬೇಕಾದಂತೆ ಚಿತ್ರೋತ್ಸವ ನಡೆಸಿ ಎನ್ನುವ ಸರ್ಕಾರದ ಧೋರಣೆ ಬದಲಾಗಬೇಕು. ತರಾತುರಿಯಲ್ಲಿ ಚಿತ್ರೋತ್ಸವ ಮಾಡಿ ಬೆನ್ನು ತಟ್ಟಿಕೊಳ್ಳುವ ಪ್ರವೃತ್ತಿ ಮುಂದುವರಿದರೆ ಅದರಿಂದ ಹೆಚ್ಚಿನ ಪ್ರಯೋಜನ ಆಗದು. ಅದಕ್ಕೆ ದೊಡ್ಡ ಮೊತ್ತದ ಹಣ ಖರ್ಚು ಮಾಡುವುದು ವ್ಯರ್ಥ. ❖

ಚಿತ್ರೋತ್ಸವದಲ್ಲಿ ಸಿನಿಮಾ ನೋಡಲು ಪ್ರೇಕ್ಷಕರ ಸರದಿ

ಪಿದಾಯಿ

ಲಚ್ಚಿ

ಅನೋರ

ಗಮನ ಸೆಳೆದ ಸಮಕಾಲೀನ ಸಿನಿಮಾಗಳು

16ನೇ ಬೆಂಗಳೂರು ಚಿತ್ರೋತ್ಸವದಲ್ಲಿ ಪ್ರದರ್ಶನವಾದ ಸಮಕಾಲೀನ ಸಿನಿಮಾಗಳ ಪೈಕಿ ಹಲವು ಉತ್ತಮ ಸಿನಿಮಾಗಳಿದ್ದವು. ವಿವಿಧ ದೇಶಗಳ, ಸಮುದಾಯಗಳ ಜೀವನ ಕ್ರಮ ಹಾಗೂ ಸಮಸ್ಯೆಗಳನ್ನು ಕಲಾತ್ಮಕವಾಗಿ ಹೇಳುವ ಪ್ರಯತ್ನಗಳಿಂದ ಗಮನ ಸೆಳೆದವು.

ಜಾಗತಿಕ ಸಿನಿಮಾರಂಗದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಹೆಚ್ಚುತ್ತಿದೆ. ಅನೇಕ ಮಹಿಳೆಯರು ಗುಣಮಟ್ಟದ ಸಿನಿಮಾಗಳನ್ನು ನಿರ್ದೇಶಿಸಿ ಗಮನ ಸೆಳೆಯುತ್ತಿದ್ದಾರೆ. ಈ ಬಾರಿಯ ಚಿತ್ರೋತ್ಸವದಲ್ಲಿದ್ದ ಮುಖ್ಯ ಸಿನಿಮಾಗಳ ಪೈಕಿ 35ಕ್ಕೂ ಹೆಚ್ಚು ಸಿನಿಮಾಗಳನ್ನು ನಿರ್ದೇಶಿಸಿದವರು ಮಹಿಳೆಯರು. ಧಾರ್ಮಿಕ ಮೂಲಭೂತವಾದ, ಮಹಿಳೆಯರ ಮೇಲಿನ ದೌರ್ಜನ್ಯಗಳು, ಶೋಷಣೆ, ಕ್ರೌರ್ಯ, ಬಡತನ ಇತ್ಯಾದಿಗಳನ್ನು ಸೂಕ್ಷ್ಮವಾಗಿ ಹೇಳುವ ಪ್ರಯತ್ನದಲ್ಲಿ ಅವರ ಸಾಧನೆ ಮೆಚ್ಚುವಂಥದ್ದು.

ಐದು ಆಸ್ಕರ್ ಪ್ರಶಸ್ತಿಗಳನ್ನು ಬಾಚಿಕೊಂಡ 'ಅನೋರ' (ಇಂಗ್ಲಿಷ್) ಸಿನಿಮಾ ಬಗ್ಗೆ ಇಟ್ಟುಕೊಂಡ ನಿರೀಕ್ಷೆ ಸುಳ್ಳಾಯಿತು. ಮಹಿಳೆಯರಿಗೆ ಈ ಸಿನಿಮಾ ಇಷ್ಟವಾಗಲಿಲ್ಲ. ಸ್ಪೇನ್ ದೇಶದ ಚಿತ್ರ 'ಐ ಆ್ಯಮ್ ನೆವೆಂಕಾ' ಎಲ್ಲರ ಗಮನ ಸೆಳೆಯಿತು. ಇದು ತನ್ನದೇ ಪಕ್ಷದ ಸದಸ್ಯೆಯ ಮೇಲೆ ರಾಜಕಾರಣಿಯೊಬ್ಬ ಲೈಂಗಿಕ ದೌರ್ಜನ್ಯ ಎಸಗುವ ನೈಜ ಘಟನೆ ಆಧರಿಸಿದ್ದು. ಜನ ಮತ್ತು ನ್ಯಾಯಾಂಗ ವ್ಯವಸ್ಥೆ ಸಂತ್ರಸ್ತೆ ಪರವಾಗಿ ನಿಲ್ಲುವ ಮೂಲಕ ದೊಡ್ಡ ಸಂದೇಶವನ್ನು ಚಿತ್ರ ಎತ್ತಿ ಹಿಡಿಯುತ್ತದೆ.

ಫ್ರೆಂಚ್ ಭಾಷೆಯ 'ಶೆಫರ್ಡ್' ಮತ್ತು 'ದ ಸ್ಪೋರಿ ಆಫ್ ಸುಲೇಮಾನ್', ವಿಯಟ್ನಾಮಿ ಭಾಷೆಯ 'ವಿಯೆಟ್ ಅಂಡ್ ನಾಮ್', ಇಂಡೋನೇಷಿಯಾದ 'ಕ್ರೊಕಡೈಲ್ ಟಿಯರ್', ಅಮೆರಿಕಾದ ಇಂಗ್ಲಿಷ್ ಚಿತ್ರ 'ಫೆಮಿಲಿಯರ್ ಟಚ್', 'ಲಯನೆಸ್' (ಎಸ್ಟೋನಿಯನ್), 'ನಾವಿ' (ಕೀನ್ಯಾ) ಕನ್ನಡದ 'ಮಿಕ್ಕ ಬಣ್ಣದ ಹಕ್ಕಿ', 'ಬೇಲಿ ಹೂ', 'ಪರ್ಯ', 'ಸ್ವಪ್ನ ಮಂಟಪ', 'ಲಚ್ಚಿ', 'ಕೆರೆಬೇಟೆ', ತುಳು ಭಾಷೆಯ 'ದಸ್ಕತ್', 'ಪಿದಾಯಿ', ಕೊಂಕಣಿಯ 'ದಮ್ಮಮ್', 'ಕ್ರಾಸಿಂಗ್' (ಜಾರ್ಜಿಯಾ) ಮಲಯಾಳದ 'ಲೆವೆಲ್ ಕ್ರಾಸ್', 'ಅಪ್ಪುರಂ', 'ಕುಮ್ಮಾಟಿ', ಪರ್ಷಿಯನ್ ಭಾಷೆಯ 'ಇನ್ ದ ಲ್ಯಾಂಡ್ ಆಫ್ ಬ್ರದರ್ಸ್' ಮತ್ತು 'ರೀಡಿಂಗ್ ಲೊಲಿಟಾ ಇನ್ ಟೆಹ್ರಾನ್', ಬಾಂಗ್ಲಾ ದೇಶದ 'ಸಬಾ', ಅಫ್ಘಾನಿಸ್ತಾನದ 'ಸೀಮಾಸ್ ಸಾಂಗ್', ಹಿಂದಿಯ 'ಹ್ಯೂಮನ್ಸ್ ಇನ್ ದ ಲೂಪ್', 'ಮಾಂಗ್ತ ಜೋಗಿ', ಮಗಹಿ ಭಾಷೆಯ ಮೊದಲ ಸಿನಿಮಾ 'ಸ್ವಾಹ', ತೆಲುಗಿನ '35 ಚಿನ್ನ ಕಥಾ ಕಾದು'... ಹೀಗೆ ಹಲವು ಸಿನಿಮಾಗಳು ಚಿತ್ರೋತ್ಸವದಲ್ಲಿ ಗಮನ ಸೆಳೆದವು.

ತಮಿಳಿನ 'ಅಮರನ್', 'ಮೆಅಳಗನ್', 'ವಾಳೈ', ಕನ್ನಡದ 'ಮ್ಯಾಕ್ಸ್', 'ಮಾರ್ಟಿನ್', 'ಭೀಮ', 'ಭೈರತಿ ರಣಗಲ್', 'ಕೃಷ್ಣಂ ಪ್ರಣಯ ಸಖಿ' ಇತ್ಯಾದಿ ಚಿತ್ರಗಳನ್ನೂ ಜನ ಮುಗಿಬಿದ್ದು ನೋಡಿದರು.

ಮಜ ಮಜ ಮಜಕೂರ

ಎಂ.ಎಸ್.ಪೂಜಾರ



ಡಬ್ಬಗಚಕ್ಕ ಕೇಶವಪ್ಪ ಕಥೆಯ

ಇಲಿಯಲ್ಲ ಹಾವು...!

ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಗುಂಡ ದಾರಿಯಲ್ಲಿ ನಡೆದುಕೊಂಡು ಹೋಗುತ್ತಿರುವಾಗ ಬಿಲದಲ್ಲಿ ಇಲಿಯೊಂದು ಮುಖ ಹೊರಹಾಕಿ ಕುಳಿತಿರುವುದನ್ನು ನೋಡಿದ. ಆ ಬಿಲದ ಹತ್ತಿರವೇ ಇದ್ದ ಮತ್ತೊಂದು ಬಿಲದಲ್ಲಿ ಬಾಲವೊಂದು ಹೊರಬಂದಿತ್ತು. ಇದನ್ನು ನೋಡಿದ ಗುಂಡ ಎಷ್ಟೊಂದು ಉದ್ದದ ಇಲಿಯಿದು ಎಂದು ಆಶ್ಚರ್ಯಗೊಂಡ. ಹೀಗೆ ಯೋಚಿಸುತ್ತಿರುವಾಗಲೇ ಬಿಲದೊಳಗಿಂದ ಹಾವೊಂದು ಹೊರಬಂತು. ಆ ಇಲಿಯನ್ನು ಹಾವು ಕಚ್ಚಿ ಹಿಡಿದಿತ್ತು. ಗುಂಡ ನೋಡಿದ ಬಾಲ ಆ ಹಾವಿನದ್ದಾಗಿತ್ತು. ಇದು ಅರಿವಾಗಿ ಗುಂಡ ಆಘಾತಗೊಂಡ.

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ಜರಿ	+	ವಾತ	+	ಳಿ	=	
2	ಜೀನ	+	ಶೈವ	+	ಲಿ	=	
3	ಸರಿ	+	ತೆಗೆ	+	ಹೊ	=	
4	ಅರಿ	+	ನಾಗ	+	ಕ	=	
5	ಮಾದ	+	ತೂತು	+	ಕ	=	

ಪದ ರಚನಾ ಕ'ಸರ'ತ್ತು

ಇಲ್ಲಿ ಕೊಟ್ಟಿರುವ 'ಸರ' ಪದಕ್ಕೆ ಅಕ್ಷರ ಪಟ್ಟಿಯಿಂದ ಒಂದಕ್ಷರ ತೆಗೆದು ಆದಿ ಅಂತ್ಯ ಹಾಗೂ ಮಧ್ಯದಲ್ಲಿ ತುಂಬಿ ಅರ್ಥಬದ್ಧ ಪದ ಮಾಡಿ.

1	ಸ		ರ
2	ಸ		ರ
3	ಸ		ರ
4	ಸ		ರ
5	ಸ		ರ
6		ಸ	ರ
7		ಸ	ರ
8		ಸ	ರ
9		ಸ	ರ
10		ಸ	ರ
11	ಸ	ರ	
12	ಸ	ರ	
13	ಸ	ರ	
14	ಸ	ರ	
15	ಸ	ರ	

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಅಕ್ಷರ ಪಟ್ಟಿ

ಕೇ	ಆ	ಕೀ	ಬೇ	ನೇ
ರ್ಕಾ	ರ್ದಾ	ಮ	ವಾ	ದ
ಣಿ	ಗಿ	ಳ	ಕು	ತಿ

ಹೆಸರು ಹೇಳು..

ಅಂದು ರವಿವಾರ. ಶಾಮರಾಯರು ಮನೆಯ ಸಾಮಾನುಗಳನ್ನು ಕಿರಾಣಿ ಅಂಗಡಿಯಿಂದ ತರಲು ಹೆಂಡತಿಗೆ ವಸ್ತುಗಳ ಪಟ್ಟಿ ಬರೆದಿಡಲು ತಿಳಿಸಿದರು. ಅವರ ಹೆಂಡತಿ ಎಲ್ಲಾ ಸಾಮಾನುಗಳ ಹೆಸರು ಬರೆದು ಅರಿವೆಗೆ ಹಚ್ಚುವ ಸೋಪಿನ ಹೆಸರು ಬರೆದರು. ಮೈಗೆ ಹಚ್ಚುವ ಸೋಪನ್ನು ಬರೆಯಲು ತೊಡಗಿದಾಗ ಒಬ್ಬೊಬ್ಬರಿಗೂ ಬೇರೆ ಬೇರೆ ಸೋಪು ಬಳಸುವ ಪರಿಪಾಠ. ಎಲ್ಲರೂ ತಮ್ಮ ಇಚ್ಛೆಯ ಸೋಪಿನ ಹೆಸರು ಹೇಳಿದರು. ಆದರೆ ಕಿಲಾಡಿ ಕೃಷ್ಣ ಮಾತ್ರ ತನಗೆ ಬೇಕಾದ ಸೋಪಿನ ಹೆಸರನ್ನು ನೇರವಾಗಿ ಹೇಳದೆ, ತನ್ನ ಅಪ್ಪನಿಗೆ ಈ ರೀತಿ ಹೇಳಿದ... ಅಪ್ಪಾ..ನನಗೆ ಬೇಕಾದ ಸಾಬೂನು ಯಾವುದು ಗೊತ್ತೇ? ಅದರ ಹೆಸರನ್ನು ಇಂಗ್ಲಿಷ್‌ನಲ್ಲಿ ಎಡದಿಂದಲಾದರೂ ಓದಿ, ಬಲದಿಂದಲಾದರೂ ಓದಿ ಮೂಲ ಪದ ಬದಲಾಗುವುದೇ ಇಲ್ಲ. ಆ ಸೋಪು ನೀವೇ ತಿಳಿದು ತನ್ನಿರಿ ಎಂದ. ತಂದೆಗೆ ಏನೂ ತಿಳಿಯದೆ ಅಂಗಡಿಯವನ ಬಳಿಯೇ ಕೇಳುವೆ ಎನ್ನುತ್ತಾ ಅಂಗಡಿಯತ್ತ ಹೆಜ್ಜೆ ಹಾಕಿದರು. ಅಂಗಡಿ ಶೆಟ್ಟರು ತುಂಬಾ ಜಾಣರು. ಕೃಷ್ಣನ ಒಗಟಿಗೆ ಉತ್ತರರೂಪವಾಗಿ ಆ ಸೋಪನ್ನು ಪುಕ್ಕಟೆಯಾಗಿ ಕೊಟ್ಟರು. ಈಗ ನೀವು ಯೋಚಿಸಿ. ಆ ಸೋಪು ಯಾವುದಿರಬಹುದೆಂದು...

ಪೈ (π) (Pi)

ವೃತ್ತದ ಗಾತ್ರ ಎಷ್ಟೇ ಇರಲಿ. ಅದರ ಸುತ್ತಳತೆ ಮತ್ತು ವ್ಯಾಸದ ನಡುವಿನ ಅನುಪಾತ ಒಂದೇ ಆಗಿರುತ್ತದೆ. ಈ ಅನುಪಾತವನ್ನು ಸಂಕೇತಿಸಲು ಗ್ರೀಕ್ ಅಕ್ಷರ ಪೈ ಬಳಸಲಾಗುತ್ತದೆ.

π = ಪರಿಧಿ/ವ್ಯಾಸ

π ಮೌಲ್ಯವನ್ನು 16 ದಶಲಕ್ಷ ದಶಮಾಂಶ ಬಿಂದುವಿಗೆ ಲೆಕ್ಕಹಾಕಲಾಗಿದೆ. (ಕಳೆಗೆ 120 ಸ್ಥಾನದವರೆಗೂ ತೋರಿಸಿದ್ದೇವೆ). ಆದರೆ ಗಣನೆಗೆ ನಾವು ಈ ಮೌಲ್ಯವನ್ನು 3.1415 ಎಂದು ಪರಿಗಣಿಸುತ್ತೇವೆ. ಘನಗಳು ಮತ್ತು ವೃತ್ತಾಕಾರದ ಆಕೃತಿಗಳ ಸುತ್ತಳತೆ, ವಿಸ್ತೀರ್ಣ ಮತ್ತು ಘನವನ್ನು ಕಂಡುಹಿಡಿಯಲು π ಯನ್ನು ಬಳಸಲಾಗುತ್ತದೆ.

π = 3.14159265358979323846264338327950288419716939937510582097494459230781640628620899862803482534211706798214808

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ: 1.ಕಾರಿನಚಾಲಕ 2.ಕ್ಷಣಗಣನೆ 3.ಅಂತಿಮದಿನ 4.ಸಿಂಹದಮರಿ 5.ಸಾವಿರಕೋಟಿ

ಪದಪರಿಚಯ ಪರೀಕ್ಷೆ: 1.ಕನ್ನ 2.ಗಡಿ 3.ಗರ 4.ಕರಗ 5.ಕನ್ನಡಿ 6.ಗರಡಿ 7.ರನ್ನ 8.ಕರ 9.ಲವ 10.ಕರಡಿ 11.ವರ 12.ಕಡಿ

ಮ್ಯಾಚಿಕ್:



ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು

ಇಮೇಲ್ ವಿಳಾಸ: majakoora@prajavani.co.in

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು

ಸಿದ್ಧಾರ್ಥ್ ಎ.ಅಣಜಿ
ಹೊನ್ನಾಳಿ

ತನುಶ್ರೀ ಎ.
ಬಾದಾಮಿ

ನಿರಂಜನ ಪ.ರೊಟ್ಟಿ
ಬೈಲಹೊಂಗಲ

ಸಮನ್ವಿತ ಹರ್ತಿಕೋಟೆ
ಹಿರಿಯೂರು

ಮನಸ್ವಿ ಬಾತಿ
ಬಾಗಲಕೋಟೆ

ಗಗನ್ ಜೆ.ಜಿ.
ಮುಂಡರಗಿ

ಹರ್ಮನ್‌ಪ್ರೀತ್ ಅರ್ಧಶತಕ • ಬ್ರಂಟ್ ಆಲ್‌ರೌಂಡ್ ಆಟ • ಸತತ ಮೂರನೇ ಬಾರಿ ಡೆಲ್ಲಿ ಕ್ಯಾಪಿಟಲ್ಸ್ ರನ್ನರ್ಸ್ ಅಪ್

ಮುಂಬೈ ಮುಡಿಗೆ ಡಬ್ಲ್ಯುಪಿಎಲ್ ಕಿರೀಟ

ಮುಂಬೈ (ಪಿಟಿಐ): ನಥಾಲಿ ಶಿವರ್ ಬ್ರಂಟ್ ಅವರ ಆಲ್‌ರೌಂಡ್ ಆಟದ ಬಲದಿಂದ ಮುಂಬೈ ಇಂಡಿಯನ್ಸ್ ತಂಡವು ಎರಡನೇ ಬಾರಿಗೆ ಮಹಿಳಾ ಪ್ರೀಮಿಯರ್ ಲೀಗ್ ಪ್ರಶಸ್ತಿ ಜಯಿಸಿತು. ಡೆಲ್ಲಿ ಕ್ಯಾಪಿಟಲ್ಸ್ ತಂಡವು ಸತತ ಮೂರನೇ ಬಾರಿ ರನ್ನರ್ಸ್ ಅಪ್ ಆಯಿತು.

ಬ್ರೆಬೋರ್ನ್ ಕ್ರೀಡಾಂಗಣದಲ್ಲಿ ಶನಿವಾರ ನಡೆದ ರೋಚಕ ಫೈನಲ್‌ನಲ್ಲಿ ಮುಂಬೈ ತಂಡವು 8 ರನ್‌ಗಳಿಂದ ಡೆಲ್ಲಿ ತಂಡವನ್ನು ಸೋಲಿಸಿತು. 150 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ಮೆಗ್ ಲ್ಯಾನಿಂಗ್ ಬಳಗಕ್ಕೆ 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 141 ರನ್ ಗಳಿಸಲಷ್ಟೇ ಸಾಧ್ಯವಾಯಿತು. ಮರಿಝಾನ್ ಕಾಪ್ (40 ಹಾಗೂ 11ಕ್ಕೆ2) ಆಲ್‌ರೌಂಡ್ ಆಟ, ಜೆಮಿಮಾ ರಾಡ್ರಿಗಸ್ (30;21ಎ) ಮತ್ತು ನಿಕಿ ಪ್ರಸಾದ್ (ಅಜೇಯ 25) ಹೋರಾಟಕ್ಕೆ ಗೆಲುವಿನ ಫಲ ಸಿಗಲಿಲ್ಲ.

ಆದರೆ ಬ್ರಂಟ್ (30 ರನ್ ಮತ್ತು 30ಕ್ಕೆ3) ಆಲ್‌ರೌಂಡ್ ಆಟವೇ ಮೇಲುಗೈ ಸಾಧಿಸಿತು. ಡೆಲ್ಲಿ ತಂಡದ ಮೆಗ್ ಲ್ಯಾನಿಂಗ್ (13 ರನ್) ಉತ್ತಮ ಆರಂಭ ನೀಡುವ ಪ್ರಯತ್ನ ಮಾಡಿದರು. ಆದರೆ ಅವರನ್ನು ತಮ್ಮ ಮೊದಲ ಓವರ್‌ನಲ್ಲಿಯೇ ಕ್ಲೀನ್ ಬೌಲ್ಡ್ ಮಾಡಿದ ಬ್ರಂಟ್ ಬೇಟೆ ಆರಂಭಿಸಿದರು.

ನಂತರದ ಓವರ್‌ನಲ್ಲಿ ಶಫಾಲಿ ವರ್ಮಾ ಅವರನ್ನು ಶಬ್ನಿಮ್ ಇಸ್ಮಾಯಿಲ್ ಅವರು ಎಲ್‌ಬಿಡಬ್ಲ್ಯು ಗೆ ಕೆಡವಿದರು. ಜೆಸ್ ಜೊನಾಸೆನ್ (13 ರನ್) ಮತ್ತು ಅನಾಬೆಲ್ ಸದರ್ಲೆಂಡ್ (2 ರನ್) ಬೇಗನೆ ಔಟಾದರು. ಭರವಸೆ ಮೂಡಿಸಿದ್ದ ಜೆಮಿಮಾ ರಾಡ್ರಿಗಸ್ ಅವರ ವಿಕೆಟ್ ಗಳಿಸುವಲ್ಲಿ ಅಮೆಲಿಯಾ ಕೆರ್ ಯಶಸ್ವಿಯಾದರು. ಇದರಿಂದಾಗಿ ತಂಡವು 66 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡಿತು.

ಮಹಿಳಾ ಪ್ರೀಮಿಯರ್ ಲೀಗ್

ಮಹಿಳಾ ಪ್ರೀಮಿಯರ್ ಲೀಗ್ ಫೈನಲ್‌ನಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಮಣಿಸಿ ಎರಡನೇ ಬಾರಿ ಪ್ರಶಸ್ತಿ ಗೆದ್ದ ಮುಂಬೈ ಇಂಡಿಯನ್ಸ್ ತಂಡದ ಆಟಗಾರ್ತಿಯರು ಟ್ರೋಫಿಯೊಂದಿಗೆ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ಡಬ್ಲ್ಯುಪಿಎಲ್ ವಿಜೇತರು

ವರ್ಷ	ಚಾಂಪಿಯನ್	ರನ್ನರ್‌ಅಪ್
2023	ಮುಂಬೈ ಇಂಡಿಯನ್ಸ್	ಡೆಲ್ಲಿ ಕ್ಯಾಪಿಟಲ್ಸ್
2024	ರಾಯಲ್ ಚಾಲೆಂಜರ್ಸ್ ಬೆಂಗಳೂರು	ಡೆಲ್ಲಿ ಕ್ಯಾಪಿಟಲ್ಸ್
2025	ಮುಂಬೈ ಇಂಡಿಯನ್ಸ್	ಡೆಲ್ಲಿ ಕ್ಯಾಪಿಟಲ್ಸ್

ಮುಖ್ಯಾಂಶಗಳು

- ಚಾಂಪಿಯನ್ ಮುಂಬೈ ತಂಡಕ್ಕೆ ₹6 ಕೋಟಿ ಬಹುಮಾನ
- ರನ್ನರ್ ಅಪ್ ಡೆಲ್ಲಿ ಕ್ಯಾಪಿಟಲ್ಸ್‌ಗೆ ₹3 ಕೋಟಿ

ಈ ಹಂತದಲ್ಲಿ ಜೊತೆಯಾದ ಕಾಪ್ ಮತ್ತು ನಿಕಿ ಪ್ರಸಾದ್ 7ನೇ ವಿಕೆಟ್ ಜೊತೆಯಾಟದಲ್ಲಿ 40 ರನ್ ಸೇರಿಸಿದರು. ಈ ಸಂದರ್ಭದಲ್ಲಿ ಡೆಲ್ಲಿ ತಂಡಕ್ಕೆ ಗೆಲುವು ಸಾಧ್ಯವೆನಿಸಿತ್ತು. ಆದರೆ ಮತ್ತೆ ದಾಳಿಗೆ ಇಳಿದ ಬ್ರಂಟ್ ಚಿತ್ರಣ ಬದಲಿಸಿಬಿಟ್ಟರು. ಅಕ್ಷರಶಃ ಡೆಲ್ಲಿ ಕೈಯಿಂದ ಜಯವನ್ನು ಕಸಿದುಕೊಂಡರು. 18ನೇ ಓವರ್‌ನಲ್ಲಿ ಕಾಪ್ ಮತ್ತು ಶಿಖಾ ಪಾಂಡೆ ಇಬ್ಬರಿಗೂ ಪೆವಿಲಿಯನ್ ದಾರಿ ತೋರಿಸಿದರು.

ಹರ್ಮನ್ ಅರ್ಧಶತಕದ ಆಸರೆ: ಡೆಲ್ಲಿ ಕ್ಯಾಪಿಟಲ್ಸ್ ತಂಡವು ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮುಂಬೈ ತಂಡವು ಕೌರ್ (66;44ಎ, 4X9, 6X2) ಮತ್ತು ಬ್ರಂಟ್ (30; 28ಎ, 4X4) ಅವರ ಆಟದ ಬಲದಿಂದ 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 149 ರನ್ ಗಳಿಸಿತು.

ಡೆಲ್ಲಿ ತಂಡದ ಮಧ್ಯಮವೇಗಿ ಕಾಪ್ ಅವರು ಮುಂಬೈಗೆ ಆರಂಭದಲ್ಲಿಯೇ ಆಘಾತ ನೀಡಿದರು. ಇನಿಂಗ್ಸ್‌ನ ಮೂರನೇ ಓವರ್‌ನಲ್ಲಿ ಹೇಯ್ಲಿ ಮ್ಯಾಥ್ಯೂಸ್ ವಿಕೆಟ್ ಪಡೆದ ಕಾಪ್ ಅವರು, 5ನೇ ಓವರ್‌ನಲ್ಲಿ ಯಷ್ಟಿಕಾ ಭಾಟಿಯಾ ಅವರಿಗೆ ಪೆವಿಲಿಯನ್ ಹಾದಿ ತೋರಿಸಿದರು. ಇದರಿಂದಾಗಿ ಕೇವಲ 14 ರನ್‌ಗಳಿಗೆ 2 ವಿಕೆಟ್‌ಗಳು ಪತನವಾದವು.

ಈ ಹಂತದಲ್ಲಿ ಜೊತೆಗೂಡಿದ ಬ್ರಂಟ್ ಮತ್ತು ಹರ್ಮನ್‌ಪ್ರೀತ್ ಮೂರನೇ ವಿಕೆಟ್ ಜೊತೆಯಾಟದಲ್ಲಿ 89 ರನ್ ಸೇರಿಸಿದರು.

ಮುಂಬೈ ತಂಡವು 2023ರಲ್ಲಿ ನಡೆದಿದ್ದ ಚೊಚ್ಚಲ ಡಬ್ಲ್ಯುಪಿಎಲ್ ಪ್ರಶಸ್ತಿ ಜಯಿಸಿತ್ತು.

ಶಿವರ್ ಬ್ರಂಟ್ ಸಾವಿರ ರನ್

ಮುಂಬೈ ಇಂಡಿಯನ್ಸ್ ತಂಡದ ಆಲ್‌ರೌಂಡರ್ ನಥಾಲಿ ಶಿವರ್ ಬ್ರಂಟ್ ಅವರು ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಒಂದು ಸಾವಿರ ರನ್ ಗಳಿಸಿದ ಮೊದಲ ಬ್ಯಾಟರ್ ಎನಿಸಿಕೊಂಡರು. ಶನಿವಾರ ಅವರು ಈ ಮೈಲಿಗಲ್ಲು ದಾಟಿದರು. ಇಂಗ್ಲೆಂಡ್ ಆಲ್‌ರೌಂಡರ್ ಆಗಿರುವ ಬ್ರಂಟ್ ಅವರು ಡಬ್ಲ್ಯುಪಿಎಲ್‌ನಲ್ಲಿ ಒಟ್ಟು 29 ಪಂದ್ಯಗಳಿಂದ 1027 ರನ್ ಗಳಿಸಿದ್ದಾರೆ.

ಆರ್‌ಸಿಬಿಯ ಎಲಿಸ್ ಪೆರಿ (972), ಡೆಲ್ಲಿ ಕ್ಯಾಪಿಟಲ್ಸ್ ತಂಡದ ಮೆಗ್ ಲ್ಯಾನಿಂಗ್ (939), ಡೆಲ್ಲಿ ಕ್ಯಾಪಿಟಲ್ಸ್ ತಂಡದ ಶಫಾಲಿ ವರ್ಮಾ (861) ಮತ್ತು ಮುಂಬೈನ ಹರ್ಮನ್‌ಪ್ರೀತ್ (851) ಅವರು ನಂತರದ ಸ್ಥಾನಗಳಲ್ಲಿದ್ದಾರೆ.

ಆರೆಂಜ್ ಕ್ಯಾಪ್

493 ಮುಂಬೈ ಇಂಡಿಯನ್ಸ್‌ನ ನಾಟ್ ಶಿವರ್ ಬ್ರಂಟ್ 9 ಪಂದ್ಯಗಳಲ್ಲಿ ಗಳಿಸಿದ ಒಟ್ಟು ರನ್. ಟೂರ್ನಿಯಲ್ಲಿ ದಾಖಲಾದ ಆಟಗಾರ್ತಿಯೊಬ್ಬರ ಗರಿಷ್ಠ ಮೊತ್ತ ಇದಾಗಿದೆ. ಆರ್‌ಸಿಬಿಯ ಎಲಿಸ್ ಪೆರಿ (372) ನಂತರದ ಸ್ಥಾನದಲ್ಲಿದ್ದಾರೆ.

ಪರ್ಪಲ್ ಕ್ಯಾಪ್

17 ಮುಂಬೈ ಇಂಡಿಯನ್ಸ್‌ನ ಹೇಯ್ಲಿ ಮ್ಯಾಥ್ಯೂಸ್ 9 ಪಂದ್ಯಗಳಲ್ಲಿ ಗಳಿಸಿದ ಒಟ್ಟು ವಿಕೆಟ್. ಟೂರ್ನಿಯಲ್ಲಿ ಗರಿಷ್ಠ ವಿಕೆಟ್ ಗಳಿಕೆ ಮಾಡಿದ ಬೌಲರ್ ಅವರಾಗಿದ್ದಾರೆ. ಮುಂಬೈ ತಂಡದ ಅಮೆಲಿಯಾ ಕೆರ್ (16) ನಂತರದ ಸ್ಥಾನದಲ್ಲಿದ್ದಾರೆ.

ಸ್ಕೋರ್ ಕಾರ್ಡ್

ಮುಂಬೈ ಇಂಡಿಯನ್ಸ್ 7ಕ್ಕೆ 149 (20 ಓವರ್‌ಗಳಲ್ಲಿ)

ಯಷ್ಟಿಕಾ ಸಿ ರಾಡ್ರಿಗಸ್ ಬಿ ಕಾಪ್ 8 (14ಎ, 4x1)
ಮ್ಯಾಥ್ಯೂಸ್ ಬಿ ಕಾಪ್ 3 (10ಎ)
ಶಿವರ್ ಸಿ ಮಣಿ ಬಿ ಶ್ರೀ ಚಾರಣಿ 30 (28 ಎ, 4 x4)
ಹರ್ಮನ್‌ಪ್ರೀತ್ ಸಿ ಕಾಪ್ ಸದರ್ಲೆಂಡ್ 66 (44ಎ,4x9, 6x2)
ಅಮೆಲಿಯಾ ಕೆರ್ ಸಿ ಶಫಾಲಿ ಬಿ ಜೊನಾಸೆನ್ 2 (3 ಎ)
ಸಜನಾ ಎಲ್‌ಬಿಡಬ್ಲ್ಯು ಜೊನಾಸೆನ್ 0 (2 ಎ)
ಕಮಲಿನಿ ಸ್ಟಂಪ್ಡ್ ಬ್ರೈಸ್ ಬಿ ಶ್ರೀ ಚಾರಿಣಿ 10 (7 ಎ)
ಅಮನ್‌ಜೋತ್ ಔಟಾಗದೇ 14(7 ಎ,4x2)
ಸಂಸ್ಕೃತಿ ಔಟಾಗದೇ 8 (5ಎ, 4x1)
ಇತರೆ: (ಬೈ 1, ವೈಡ್ 7) 8
ವಿಕೆಟ್ ಪತನ: 1-5 (ಹೇಯ್ಲಿ ಮ್ಯಾಥ್ಯೂಸ್ 2.6), 2-14 (ಯಷ್ಟಿಕಾ 4.3), 3-103 (ನಾಟ್ ಶಿವರ್ ಬ್ರಂಟ್ 14.5), 4-112 (ಅಮೆಲಿಯಾ ಕೆರ್ 15.4), 5-112 (ಸಜೀವನ್ ಸಜನಾ 15.6), 6-118(ಹರ್ಮನ್‌ಪ್ರೀತ್ ಕೌರ್ 17.1), 7-132 (ಜಿ.ಕಮಲಿನಿ 18.4)
ಬೌಲಿಂಗ್: ಮರಿಝಾನ್ ಕಾಪ್ 4-0-11-2, ಶಿಖಾ ಪಾಂಡೆ 4-0-29-0, ಅನಾಬೆಲ್ ಸದರ್ಲೆಂಡ್ 4-0-29-1, ಜೆಸ್ ಜೊನಾಸೆನ್ 3-0-26-2, ಶ್ರೀಚಾರಿಣಿ 4-0-43-2, ಮಿನ್ನು ಮಣಿ 1-0-10-0

ಡೆಲ್ಲಿ ಕ್ಯಾಪಿಟಲ್ಸ್: 9ಕ್ಕೆ 141 (20 ಓವರ್‌ಗಳಲ್ಲಿ)

ಲ್ಯಾನಿಂಗ್ ಬಿ ಬ್ರಂಟ್ 13 (9ಎ, 4x2)
ಶಫಾಲಿ ಎಲ್‌ಬಿಡಬ್ಲ್ಯು ಬಿ ಶಬ್ನಿಂ 4 (9ಎ)
ಜೊನಾಸನ್ ಸಿ ಭಾಟಿಯಾ ಬಿ ಕೆರ್ 13 (15ಎ, 4x2)
ಜೆಮಿಮಾ ಸಿ ಮತ್ತು ಬಿ ಕೆರ್ 30 (21ಎ, 4x4)
ಅನಾಬೆಲ್ ಸ್ಟಂಪ್ ಭಾಟಿಯಾ ಬಿ ಇಶಾಕ್ 2 (5ಎ)
ಮರಿಝಾನ್ ಸಿ ಮ್ಯಾಥ್ಯೂಸ್ ಬಿ ಬ್ರಂಟ್ 40 (26ಎ, 4x5, 6x2)
ಬ್ರೈಸ್ ರನೌಟ್ (ಗುಪ್ತಾ/ಭಾಟಿಯಾ) 5 (5ಎ)
ನಿಕಿ ಪ್ರಸಾದ್ ಔಟಾಗದೇ 25 (23ಎ, 4x1, 6x1)
ಶಿಖಾ ಬಿ ಬ್ರಂಟ್ 0 (1ಎ)
ಮಿನ್ನು ಸಿ ಸಂಜನಾ ಬಿ ಮ್ಯಾಥ್ಯೂಸ್ 4 (2ಎ, 4x1)
ಶ್ರೀಚಾರಿಣಿ ಔಟಾಗದೇ 3 (4ಎ)
ಇತರೆ: 2 (ಲೆಗ್‌ಬೈ 1, ವೈಡ್ 1)
ವಿಕೆಟ್ ಪತನ: 1-15 (ಮೆಗ್ ಲ್ಯಾನಿಂಗ್, 1.6), 2-17 (ಶಫಾಲಿ ವರ್ಮಾ, 2.6), 3-37 (ಜೆಸ್ ಜೊನಾಸೆನ್, 6.2), 4-44 (ಅನಾಬೆಲ್ ಸದರ್ಲೆಂಡ್, 7.6), 5-66 (ಜೆಮಿಮಾ, 10.4), 6-83 (ಸಾರಾ ಬ್ರೈಸ್, 12.5), 7-123 (ಮಾರಿಝಾನ್ ಕಾಪ್, 17.4), 8-123 (ಶಿಖಾ ಪಾಂಡೆ, 17.5), 9-128 (ಮಿನ್ನು ಮಣಿ, 18.2)
ಬೌಲಿಂಗ್: ಶಬ್ನಿಂ ಇಸ್ಮಾಯಿಲ್ 4-0-15-1, ನಾಟ್ ಶಿವರ್ ಬ್ರಂಟ್ 4-0-30-3, ಹೇಯ್ಲಿ ಮ್ಯಾಥ್ಯೂಸ್ 4-0-37-1, ಅಮೆಲಿಯಾ ಕೆರ್ 4-0-25-2, ಶಿಖಾ ಪಾಂಡೆ 4-0-33-1
ಪಂದ್ಯದ ಆಟಗಾರ್ತಿ: ಹರ್ಮನ್‌ಪ್ರೀತ್

ಫಲಿತಾಂಶ: ಮುಂಬೈ ಇಂಡಿಯನ್ಸ್‌ಗೆ 8 ರನ್‌ಗಳ ಜಯ, ಪ್ರಶಸ್ತಿ

ಇಂಡಿಯನ್ ವೆಲ್ಸ್ ಓಪನ್: ಸಬಲೆಂಕಾ ಫೈನಲ್‌ಗೆ

ಶ್ವಾಂಟೆಕ್‌ಗೆ ಆ್ಯಂಡ್ರೀವಾ ಆಘಾತ

ಇಂಡಿಯನ್ ವೆಲ್ಸ್ (ಅಮೆರಿಕ) (ಎಪಿ): ರಷ್ಯಾದ ಯುವತಾರೆ ಮಿರಾ ಆ್ಯಂಡ್ರೀವಾ ಅವರು ಇಂಡಿಯನ್ ವೆಲ್ಸ್ ಓಪನ್ ಟೆನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್‌ನಲ್ಲಿ ಹಾಲಿ ಚಾಂಪಿಯನ್ ಇಗಾ ಶ್ವಾಂಟೆಕ್‌ಗೆ ಆಘಾತ ನೀಡಿ ಫೈನಲ್‌ಗೆ ಲಗ್ಗೆ ಹಾಕಿದರು.

ಶನಿವಾರ ನಡೆದ ಸೆಮಿಫೈನಲ್ ಹಣಾಹಣಿಯಲ್ಲಿ 17 ವರ್ಷ ವಯಸ್ಸಿನ ಆ್ಯಂಡ್ರೀವಾ 7-6 (1), 1-6, 6-3ರಿಂದ ಎರಡನೇ ಶ್ರೇಯಾಂಕದ ಶ್ವಾಂಟೆಕ್ ಅವರನ್ನು ಸೋಲಿಸಿದರು. ಇದರೊಂದಿಗೆ ಇಲ್ಲಿ ಮೂರನೇ ಬಾರಿ ಕಿರೀಟ ಮುಡಿಗೇರಿಸಿಕೊಳ್ಳುವ ಶ್ವಾಂಟೆಕ್ ಕನಸು ನನಸಾಗಲಿಲ್ಲ. ಅವರು 2022 ಮತ್ತು 2024ರಲ್ಲಿ ಚಾಂಪಿಯನ್ ಆಗಿದ್ದರು.

ಒಂಬತ್ತನೇ ಶ್ರೇಯಾಂಕದ ಆ್ಯಂಡ್ರೀವಾ 2001ರ ಬಳಿಕ ಇಲ್ಲಿ ಫೈನಲ್ ತಲುಪಿದ ಅತಿ ಕಿರಿಯ ವಯಸ್ಸಿನ ಸ್ಪರ್ಧಿ ಎಂಬ ಹಿರಿಮೆಗೆ ಪಾತ್ರರಾದರು. 24 ವರ್ಷಗಳ ಹಿಂದೆ ಕಿಮ್ ಕ್ಲಿಸ್ಟರ್ಸ್ (ಬೆಲ್ಜಿಯಂ) 17 ವರ್ಷ ವಯಸ್ಸಿನಲ್ಲೇ ಇಲ್ಲಿ ಫೈನಲ್ ಪ್ರವೇಶಿಸಿದ್ದರು. ಅವರು ಅಮೆರಿಕದ ಸೆರೆನಾ ವಿಲಿಯಮ್ಸ್ ವಿರುದ್ಧ ಸೋತಿದ್ದರು.

ಆ್ಯಂಡ್ರೀವಾ ಅವರು ಕಳೆದ ತಿಂಗಳು ದುಬೈನಲ್ಲಿ ತಮ್ಮ ಚೊಚ್ಚಲ ಡಬ್ಲ್ಯುಟಿಎ ಟೂರ್ ಪ್ರಶಸ್ತಿ ಗೆದ್ದು, 1000 ಶ್ರೇಣಿಯ ಕಿರೀಟ ಗೆದ್ದ ಅತ್ಯಂತ ಕಿರಿಯ ವಯಸ್ಸಿನ ಆಟಗಾರ್ತಿ ಎಂಬ ದಾಖಲೆ ಬರೆದಿದ್ದಾರೆ. ಇದರೊಂದಿಗೆ ತನ್ನ ಪ್ರವಾಸದ ಗೆಲುವಿನ ಸರಣಿಯನ್ನು 11 ಪಂದ್ಯಗಳಿಗೆ ವಿಸ್ತರಿಸಿಕೊಂಡರು. ಮತ್ತೊಂದೆಡೆ ಕ್ಯಾಲಿಫೋರ್ನಿಯಾ ಮರುಭೂಮಿಯಲ್ಲಿ 23 ವರ್ಷ ವಯಸ್ಸಿನ ಶ್ವಾಂಟೆಕ್ ಅವರ 10 ಪಂದ್ಯಗಳ ಅಜೇಯ ಓಟಕ್ಕೆ ತಡೆಯೊಡ್ಡಿದರು.

ಆ್ಯಂಡ್ರೀವಾ ಭಾನುವಾರ ನಡೆಯುವ ಫೈನಲ್ ಹಣಾಹಣಿಯಲ್ಲಿ ಅಗ್ರಶ್ರೇಯಾಂಕದ ಅರಿನಾ ಸಬಲೆಂಕಾ ಅವರನ್ನು ಎದುರಿಸಲಿದ್ದಾರೆ. ಮತ್ತೊಂದು ಸೆಮಿಫೈನಲ್‌ನಲ್ಲಿ ಬೆಲಾರಸ್‌ನ ಆಟಗಾರ್ತಿ 6-0, 6-1ರಿಂದ ಐದನೇ ಶ್ರೇಯಾಂಕದ ಮ್ಯಾಡಿಸನ್ ಕೀಸ್ ಅವರನ್ನು ನಿರಾಯಾಸವಾಗಿ

ರಷ್ಯಾದ ಮಿರಾ ಆ್ಯಂಡ್ರೀವಾ ಆಟದ ವೈಖರಿ –ಎಎಫ್‌ಪಿ ಚಿತ್ರ

ಅರಿನಾ ಸಬಲೆಂಕಾ

ಹಿಮ್ಮೆಟ್ಟಿಸಿದರು. ವಿಶ್ವದ ಅಗ್ರಮಾನ್ಯ ತಾರೆ ಸಬಲೆಂಕಾ ಇಲ್ಲಿ ಮೊದಲ ಪ್ರಶಸ್ತಿ ಎದುರು ನೋಡುತ್ತಿದ್ದಾರೆ.

ಜನವರಿಯಲ್ಲಿ ನಡೆದಿದ್ದ ಆಸ್ಟ್ರೇಲಿಯಾ ಓಪನ್ ಫೈನಲ್‌ನಲ್ಲಿ ಅಮೆರಿಕದ 30 ವರ್ಷ ವಯಸ್ಸಿನ ಕೀಸ್ ಅವರು ಮೂರು ಸೆಟ್‌ಗಳ ಹೋರಾಟದಲ್ಲಿ ಸಬಲೆಂಕಾ ಅವರನ್ನು ಮಣಿಸಿ ಮೊದಲ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದಿದ್ದರು. ಆ ಸೋಲಿಗೆ ಬೆಲಾರಸ್‌ನ 26 ವರ್ಷ ವಯಸ್ಸಿನ ಆಟಗಾರ್ತಿ ಇಲ್ಲಿ ಮುಯ್ಯಿ ತೀರಿಸಿಕೊಂಡರು. ಅದರೊಂದಿಗೆ ಕೀಸ್ ಅವರ 16 ಪಂದ್ಯಗಳ ಗೆಲುವಿನ ಸರಣಿಯು ಕೊನೆಗೊಂಡಿತು.

ಐಎಂಎಲ್ ಫೈನಲ್ ಪಂದ್ಯ ಇಂದು ತೆಂಡೂಲ್ಕರ್-ಲಾರಾ ಮುಖಾಮುಖಿ

ರಾಯಪುರ: ಸಚಿನ್ ತೆಂಡೂಲ್ಕರ್ ನಾಯಕತ್ವದ ಇಂಡಿಯಾ ಮಾಸ್ಟರ್ಸ್ ತಂಡವು ಭಾನುವಾರ ಇಂಟರ್‌ನ್ಯಾಷನಲ್ ಮಾಸ್ಟರ್ಸ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯ ಚೊಚ್ಚಲ ಆವೃತ್ತಿಯ ಫೈನಲ್‌ನಲ್ಲಿ ಬ್ರಯನ್ ಲಾರಾ ಸಾರಥ್ಯದ ವೆಸ್ಟ್ ಇಂಡೀಸ್ ಮಾಸ್ಟರ್ಸ್ ತಂಡವನ್ನು ಎದುರಿಸಲಿದೆ.

ಎಸ್‌ವಿಎನ್‌ಎಸ್ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯುವ ಹಣಾಹಣಿಯಲ್ಲಿ ಇಂಡಿಯಾ ಮಾಸ್ಟರ್ಸ್ ಪ್ರಶಸ್ತಿ ಗೆಲ್ಲುವ ನೆಚ್ಚಿನ ತಂಡವೆನಿಸಿದೆ. ಲೀಗ್ ಹಂತದಲ್ಲಿ ಈ ತಂಡಗಳು ಮುಖಾಮುಖಿಯಾಗಿದ್ದು, ಆ ಪಂದ್ಯದಲ್ಲಿ ಇಂಡಿಯಾ ತಂಡವು 7 ರನ್‌ಗಳಿಂದ ರೋಚಕ ಜಯ ಗಳಿಸಿತ್ತು.

ಸಚಿನ್ ಪಡೆಯು ಲೀಗ್ ಹಂತದಲ್ಲಿ ಐದು ಪಂದ್ಯಗಳ ಪೈಕಿ ನಾಲ್ಕರಲ್ಲಿ ಗೆದ್ದು ಎಂಟು ಅಂಕ ಪಡೆದು, ಪಾಯಿಂಟ್ಸ್ ಪಟ್ಟಿಯಲ್ಲಿ ಎರಡನೇ ಸ್ಥಾನದೊಂದಿಗೆ ಸೆಮಿಫೈನಲ್ ತಲುಪಿತ್ತು. ಲೀಗ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧ 95 ರನ್‌ಗಳಿಂದ ಸೋತಿದ್ದ ಇಂಡಿಯಾ, ನಾಲ್ಕರ ಘಟ್ಟದ ಹಣಾಹಣಿಯಲ್ಲಿ ಶೇನ್ ವಾಟ್ಸನ್ ನಾಯಕತ್ವದ ಅದೇ ತಂಡವನ್ನು 94 ರನ್‌ಗಳಿಂದ ಸೋಲಿಸಿ ಫೈನಲ್ ತಲುಪಿದೆ.

ಸಚಿನ್ ತೆಂಡೂಲ್ಕರ್

ಬ್ರಯನ್ ಲಾರಾ

ಲಾರಾ ಬಳಗವು ಲೀಗ್ ಹಂತದಲ್ಲಿ ಐದು ಪಂದ್ಯಗಳ ಪೈಕಿ ಮೂರರಲ್ಲಿ ಗೆದ್ದು ಆರು ಅಂಕ ಗಳಿಸಿ, ನಾಲ್ಕನೇ ಸ್ಥಾನದೊಂದಿಗೆ ನಾಲ್ಕರ ಘಟ್ಟ ಪ್ರವೇಶಿಸಿತ್ತು. ಸೆಮಿಫೈನಲ್‌ನಲ್ಲಿ ಕುಮಾರ ಸಂಗಕ್ಕಾರ ನಾಯಕತ್ವದ ಶ್ರೀಲಂಕಾ ತಂಡವನ್ನು 6 ರನ್‌ಗಳಿಂದ ಸೋಲಿಸಿ ಪ್ರಶಸ್ತಿ ಸುತ್ತಿಗೆ ಮುನ್ನಡೆಸಿದೆ.

ಮೊದಲ ಆವೃತ್ತಿಯ ಟೂರ್ನಿಯಲ್ಲಿ ಒಟ್ಟು ಐದು ತಂಡಗಳು ಕಣದಲ್ಲಿದ್ದವು. ಇಂಗ್ಲೆಂಡ್ ಮಾಸ್ಟರ್ಸ್ ತಂಡವು ಲೀಗ್ ಹಂತದಲ್ಲೇ ಹೊರಬಿದ್ದಿದೆ.

ಪಂದ್ಯ ಆರಂಭ: ರಾತ್ರಿ 7
ನೇರಪ್ರಸಾರ: ಜಿಯೊ ಹಾಟ್‌ಸ್ಟಾರ್

ಪ್ಲೇ ಆಫ್‌ನಲ್ಲಿ ಬಿಎಫ್‌ಸಿಗೆ ಮುಂಬೈ ಸಿಟಿ ಎದುರಾಳಿ

ಮುಂಬೈ (ಪಿಟಿಐ): ಬೆಂಗಳೂರು ಫುಟ್‌ಬಾಲ್ ಕ್ಲಬ್ ತಂಡವು ಇದೇ 29ರಂದು ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿರುವ ಇಂಡಿಯನ್ ಸೂಪರ್ ಲೀಗ್ ಟೂರ್ನಿಯ ಪ್ಲೇ ಆಫ್‌ನಲ್ಲಿ ಮುಂಬೈ ಸಿಟಿ ತಂಡವನ್ನು ಎದುರಿಸಲಿದೆ.

ಐಎಸ್‌ಎಲ್ ಸೆಮಿಫೈನಲ್ (ಡಬಲ್ ಲೆಗ್) ಮತ್ತು ಫೈನಲ್ ಪಂದ್ಯದ ವೇಳಾಪಟ್ಟಿ ಬಿಡುಗಡೆಗೊಂಡಿದೆ. ಏಪ್ರಿಲ್ 2ರಿಂದ 7ರವರೆಗೆ ಸೆಮಿಫೈನಲ್ ಪಂದ್ಯಗಳು, 12ರಂದು ಫೈನಲ್ ನಡೆಯಲಿವೆ. ಪ್ಲೇ ಆಫ್ ಪಂದ್ಯಗಳು ಇದೇ 29 ಮತ್ತು 30ರಂದು ನಡೆಯಲಿದೆ.

ಲೀಗ್ ಹಂತದಲ್ಲಿ ಮೊದಲೆರಡು ಸ್ಥಾನ ಪಡೆದಿರುವ ಹಾಲಿ ಚಾಂಪಿಯನ್ ಮೋಹನ್ ಬಾಗನ್ ಎಸ್‌ಜಿ ಮತ್ತು ಎಸ್‌ಸಿ ಗೋವಾ ನೇರ ಸೆಮಿಫೈನಲ್ ಪ್ರವೇಶಿಸಿವೆ. ಬಿಎಫ್‌ಸಿ, ನಾರ್ಥ್ ಈಸ್ಟ್ ಯುನೈಟೆಡ್ ಎಫ್‌ಸಿ, ಜೆಮ್‌ಶೆಡ್‌ಪುರ ಎಫ್‌ಸಿ ಮತ್ತು ಮುಂಬೈ ಸಿಟಿ ಎಫ್‌ಸಿ ತಂಡಗಳು ಪ್ಲೇ ಆಫ್‌ನಲ್ಲಿ ಸೆಣಸಲಿವೆ.

ಆರ್‌ಎಸ್‌ಎಚ್‌ಗೆ ಜಯ

ಬೆಂಗಳೂರು: ಆರ್‌ಎಸ್‌ಎಚ್‌ಸಿ 'ಎ' ತಂಡ ಸೂಪರ್ ಡಿವಿಷನ್ ಹಾಕಿ ಲೀಗ್‌ನಲ್ಲಿ ಶನಿವಾರ ಎಚ್‌ಎಫ್‌ಎಚ್‌ಸಿ ತಂಡವನ್ನು 2-0ರಿಂದ ಮಣಿಸಿತು. ಇನ್ನೊಂದು ಪಂದ್ಯದಲ್ಲ